ಸಂಪಾದಕರು :
ಎಂ.ಎಸ್. ವಿಕಾಸ್

ಬುಧವಾರ, ಮೇ 24, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 10 RNI : 27369/75


# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ


1974 2023

janathavani@mac.com
www.janathavani.com
☎ 08192 254736 91642 99999







## ಐ.ಎ.ಎಸ್. ಪರೀಕ್ಷೆ: ಪುರುಷರೇ ಮುಂದು

ನವದೆಹಲಿ, ಮೇ 23 – ಕೇಂದ್ರ ಲೋಕಸೇವಾ ಆಯೋಗ (ಯು.ಪಿ.ಎಸ್.ಸಿ.) ಪರೀಕ್ಷೆಯಲ್ಲಿ 933 ಅಭ್ಯರ್ಥಿಗಳು ಅರ್ಹತೆ ಪಡೆದುಕೊಂಡಿದ್ದಾರೆ. 613 ಪುರುಷರು ಪ್ರತಿಷ್ಠಿತ ಹುದ್ದೆಗಳಿಗೆ ಆಯ್ಕೆಯಾಗುವ ಮೂಲಕ ಮಹಿಳೆಯರನ್ನು ಹಿಂದೆ ಹಾಕಿದ್ದಾರೆ. ಈ ಪರೀಕ್ಷೆಯು ಐ.ಎ.ಎಸ್. ಪರೀಕ್ಷೆ ಎಂದೇ ಹೆಸರಾಗಿದೆ.

ಯು.ಪಿ.ಎಸ್.ಸಿ. ಪರೀಕ್ಷೆಯ ಮೊದಲ ನಾಲ್ಕು ರ್‍ಯಾಂಕುಗಳನ್ನು ಮಹಿಳೆಯರು ಪಡೆದುಕೊಂಡಿರುವುದು ವಿಶೇಷ. ಮಹಿಳೆಯರು ಒಟ್ಟು 320 ಸ್ಥಾನಗಳನ್ನು ಪಡೆದಿದ್ದಾರೆ.

ದೆಹಲಿ ವಿಶ್ವವಿದ್ಯಾನಿಲಯದ ಪದವೀಧರರಾದ ಇಶಿತಾ ಕಿಶೋರ್ ಅವರು ಮೊದಲ ಸ್ಥಾನ ಪಡೆದಿದ್ದಾರೆ. ಗರಿಮಾ ಲೋಹಿಯ, ಉಮಾ ಹರಿತಿ ಹಾಗೂ ಸ್ಮೃತಿ ಮಿಶ್ರ ಅವರು ನಂತರದ ಸ್ಥಾನಗಳಲ್ಲಿದ್ದಾರೆ.

**ಆಯ್ಕೆಯಾದ 933 ಅಭ್ಯರ್ಥಿಗಳಲ್ಲಿ 613 ಪುರುಷರು**

ಮೊದಲ 25 ಅಭ್ಯರ್ಥಿಗಳಲ್ಲಿ 14 ಮಹಿಳೆಯರು ಹಾಗೂ 11 ಪುರುಷರಿದ್ದಾರೆ. ಈ ಪರೀಕ್ಷೆಗಳ ಮೂಲಕ ಭಾರತೀಯ ಆಡಳಿತಾತ್ಮಕ ಸೇವೆ, ಭಾರತೀಯ ವಿದೇಶಾಂಗ ಸೇವೆ, ಭಾರತೀಯ ಪೊಲೀಸ್ ಸೇವೆ ಸೇರಿದಂತೆ ಹಲವು ಸೇವೆಗಳಿಗೆ ಆಯ್ಕೆ ಮಾಡಲಾಗುತ್ತದೆ.

ಇಂಜಿನಿಯರಿಂಗ್, ಮಾನವೀಯ ಅಧ್ಯಯನ, ವಿಜ್ಞಾನ, ವಾಣಿಜ್ಯ ಹಾಗೂ ವೈದ್ಯಕೀಯ ವಿಜ್ಞಾನ ಸೇರಿದಂತೆ ಹಲವು ವಲಯಗಳವರು ಆಯ್ಕೆಯಲ್ಲಿದ್ದಾರೆ.

ಆಯ್ಕೆಯಾದವರಲ್ಲಿ 41 ವಿಕಲಚೇತನರಾಗಿದ್ದಾರೆ. 345 ಅಭ್ಯರ್ಥಿಗಳು ಸಾಮಾನ್ಯ, 99 ಆರ್ಥಿಕವಾಗಿ ಹಿಂದುಳಿದ, 263 ಹಿಂದುಳಿದ, 154 ಪರಿಶಿಷ್ಟ ಜಾತಿ ಹಾಗೂ 72 ಪರಿಶಿಷ್ಟ ಪಂಗಡದವರಾಗಿದ್ದಾರೆ. 178 ಅಭ್ಯರ್ಥಿಗಳನ್ನು ಕಾಯ್ದಿರಿಸಿದ ಪಟ್ಟಿಯಲ್ಲಿ ಇರಿಸಲಾಗಿದೆ.

ಕೇಂದ್ರದಲ್ಲಿ ಖಾಲಿ ಇರುವ 1,022 ಹುದ್ದೆಗಳನ್ನು ನಾಗರಿಕ ಸೇವಾ ಪರೀಕ್ಷೆಗಳ ಮೂಲಕ ಭರ್ತಿ ಮಾಡಲಾಗುವುದು. ಇವರಲ್ಲಿ 180 ಐಎಎಸ್, 38 ಐ.ಎಫ್.ಎಸ್., 200 ಐ.ಪಿ.ಎಸ್. ಅಧಿಕಾರಿಗಳು ಸೇರಿದ್ದಾರೆ. ಫಲಿತಾಂಶವನ್ನು ಯು.ಪಿ.ಎಸ್.ಸಿ. ವೆಬ್ ತಾಣದಲ್ಲಿ ಪ್ರಕಟಿಸಲಾಗಿದೆ. ಹದಿನೈದು ದಿನಗಳಲ್ಲಿ ಅಂಕಪಟ್ಟಿಯನ್ನು ಪ್ರಕಟಿಸಲಾಗುವುದು.

## ಇನ್‌ಸೈಟ್ಸ್‌ನ 23 ಅಭ್ಯರ್ಥಿಗಳು ಯು.ಪಿ.ಎಸ್.ಸಿ. ಉತ್ತೀರ್ಣ

ಬೆಂಗಳೂರು, ಮೇ 23 - ಕೇಂದ್ರ ಲೋಕಸೇವಾ ಆಯೋಗ (ಯುಪಿಎಸ್‌ಸಿ) ನಡೆಸಿದ 2022ನೇ ಸಾಲಿನ ನಾಗರಿಕ ಸೇವೆಗಳ ಪರೀಕ್ಷಾ ಫಲಿತಾಂಶ ಮಂಗಳವಾರ ಪ್ರಕಟಗೊಂಡಿದ್ದು, ದೇಶದಾದ್ಯಂತ ಇನ್‌ಸೈಟ್ಸ್‌ನಲ್ಲಿ ತರಬೇತಿ ಪಡೆದ 210ಕ್ಕೂ ಹೆಚ್ಚು ಅಭ್ಯರ್ಥಿಗಳು ಈ ಬಾರಿಯ ಯುಪಿಎಸ್‌ಸಿ ಪರೀಕ್ಷೆಯಲ್ಲಿ ಯಶಸ್ವಿಯಾಗಿದ್ದಾರೆ.

ಕರ್ನಾಟಕ ರಾಜ್ಯದಿಂದ ಈ ಬಾರಿ 30 ಕ್ಕಿಂತಲೂ ಹೆಚ್ಚು ಅಭ್ಯರ್ಥಿಗಳು ಉತ್ತೀರ್ಣ ಗೊಂಡಿದ್ದು, ಇದರಲ್ಲಿ ಉತ್ತಮ ರ್‍ಯಾಂಕಿಂಗ್ ಪಡೆದ 23 ಅಭ್ಯರ್ಥಿಗಳಿಗೆ ತರಬೇತಿ, ಮಾರ್ಗದರ್ಶನ ನೀಡಿರುವುದು ಬೆಂಗಳೂರಿನ ಇನ್‌ಸೈಟ್ಸ್ ಐಎಎಸ್ ಎಂದು ಸಂಸ್ಥೆಯ ಸಂಸ್ಥಾಪಕ ಜಿ.ಬಿ. ವಿನಯ್ ಕುಮಾರ್ ಹರ್ಷ ವ್ಯಕ್ತಪಡಿಸಿದರು.



**ಸಂಸ್ಥೆಯಲ್ಲಿ ತರಬೇತಿ ಪಡೆದ 200ಕ್ಕೂ ಹೆಚ್ಚು ಅಭ್ಯರ್ಥಿಗಳು ಆಯ್ಕೆ : ಜಿ.ಬಿ. ವಿನಯ್ ಕುಮಾರ್**

ಉತ್ತಮ ಶ್ರೇಯಾಂಕದೊಂದಿಗೆ ತೇರ್ಗಡೆಯಾದ ಈ ಅಭ್ಯರ್ಥಿಗಳಲ್ಲಿ ಹಲವರು 'ಇನ್‌ಸೈಟ್ಸ್ ಐಎಎಸ್'ನ ನೇರವಾದ ಬೋಧನಾ ತರಗತಿಗೆ (ಒಜಿಪಿ, ಕೋರ್ ಬ್ಯಾಚ್) ಹಾಜರಾಗಿದ್ದರೆ, ಬಹಳಷ್ಟು ಅಭ್ಯರ್ಥಿಗಳು ಪೂರ್ವಭಾವಿ ಹಾಗೂ ಮುಖ್ಯ ಪರೀಕ್ಷಾ ಸರಣಿ ಮತ್ತು ಅಣಕು ಸಂದರ್ಶನಗಳಂತಹ ಹಲವಾರು ಕಾರ್ಯಕ್ರಮಗಳ ವಿದ್ಯಾರ್ಥಿಗಳಾಗಿದ್ದಾರೆ. ಅಭ್ಯರ್ಥಿಗಳಿಗೆ ಬೋಧನೆ ಮತ್ತು ಉತ್ತರ ಬರೆಯುವುದು ಸೇರಿದಂತೆ ಕೌಶಲ್ಯ ವೃದ್ಧಿಯ ಬಗ್ಗೆ ಇನ್‌ಸೈಟ್ಸ್ ಐಎಎಸ್ ಕೇಂದ್ರದಲ್ಲಿ ಮಾರ್ಗದರ್ಶನ ನೀಡಲಾಗುತ್ತಿದ್ದು, ಒಟ್ಟಾರೆಯಾಗಿ 'ಇಂಟೆಗ್ರೇಟೆಡ್ ಕೋಚಿಂಗ್ ಮಾದರಿ'ಯಲ್ಲಿ ಅಭ್ಯರ್ಥಿಗಳನ್ನು ಪರೀಕ್ಷೆಗೆ ಸಜ್ಜುಗೊಳಿಸಲಾಗುತ್ತಿದೆ. (2ನೇ ಪುಟಕ್ಕೆ)

## ಆಲಸ್ಯ ಬಿಟ್ಟು ಕೆಲಸ ಮಾಡಿ

### ಡಿಸಿ, ಸಿಇಒಗಳ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ

ಬೆಂಗಳೂರು, ಮೇ 23 – ಕರ್ನಾಟಕದ ಜನತೆ ಬದಲಾವಣೆ ಬಯಸಿದ್ದಾರೆ. ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಆಲಸ್ಯ ಬಿಟ್ಟು ಕೆಲಸ ಮಾಡಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕಡಕ್ ಸೂಚನೆ ನೀಡಿದ್ದಾರೆ.

ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ಹವಣಾಧಿಕಾರಿಗಳ ಜೊತೆ ವಿಡಿಯೋ ಸಂವಾದ ನಡೆಸಿ ಅವರು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಕಚೇರಿಯಲ್ಲೇ ಕುಳಿತು ಕೆಲಸ ಮಾಡಿದರೆ ಆಗದು. ಫೀಲ್ಡ್ ಗೆ ಹೋಗಬೇಕು. ಕುಳಿತಲ್ಲೇ ಕುಳಿತು ಪರಿಣಾಮಕಾರಿಯಾಗಿ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಲು ಸಾಧ್ಯವಾಗದು ಎಂದವರು ಹೇಳಿದರು.

ಬಹಳ ಜನ ಜಿಲ್ಲಾಧಿಕಾರಿಗಳು ತಾಲ್ಲೂಕುಗಳಿಗೆ ಭೇಟಿ ನೀಡಿರುವುದಿಲ್ಲ. ಇನ್ನು ಮುಂದೆ ಇಂತಹುದಕ್ಕೆ ಅವಕಾಶವಿಲ್ಲ. ಜಿಲ್ಲಾಧಿಕಾರಿಗಳು ಕಡ್ಡಾಯವಾಗಿ ಕ್ಷೇತ್ರ ಭೇಟಿ ಮಾಡಬೇಕು ಎಂದು ಸಿದ್ದರಾಮಯ್ಯ ತಿಳಿಸಿದರು.

ರಾಜ್ಯದ ಕೆಲ ಭಾಗಗಳಲ್ಲಿ ಜೂನ್ ತಿಂಗಳಲ್ಲಿ ಬಿತ್ತನೆ ಆರಂಭವಾಗುತ್ತದೆ. ರೈತರಿಗೆ ಅಗತ್ಯವಿರುವ ಬೀಜ, ಗೊಬ್ಬರ ಹಾಗೂ ಕೀಟನಾಶಕಗಳನ್ನು ಒದಗಿಸಬೇಕು. ಹಾವೇರಿ ಗೋಲಿಬಾರ್ ರೀತಿಯ ಘಟನೆಗಳು ಮರುಕಳಿಸಬಾರದು ಎಂದು ಮುಖ್ಯಮಂತ್ರಿ ಹೇಳಿದರು.

ಮುಂಗಾರು ಪೂರ್ವ ಮಳೆ ಪ್ರಾರಂಭವಾಗಿದೆ. ಭಾರೀ ಮಳೆ, ಗಾಳಿಯಿಂದ ಮರಗಳು ಬಿದ್ದು ಹೋಗಿವೆ. ಸಿಡಿಲು, ಆಲಿಕಲ್ಲು ಮಳೆಯಿಂದ ಪ್ರಾಣ ಕಳೆದು ಕೊಂಡಿದ್ದಾರೆ, ಅನಾಹುತಗಳಾಗಿವೆ.



ಇಂತಹ ಅನಾಹುತಗಳನ್ನು ತಡೆಗಟ್ಟಲು ಮುನ್ನೆಚ್ಚರಿಕೆ ತೆಗೆದುಕೊಳ್ಳ ಬೇಕು. ನಿಮ್ಮ ಬಳಿ ಅನುದಾನ ಲಭ್ಯವಿದೆ. ಅಗತ್ಯವಿದ್ದರೆ ಕೇಳಬೇಕು. ಪರಿಹಾರ ಕ್ರಮ ಕೈಗೊಳ್ಳಲು ತೊಂದರೆ ಇಲ್ಲ ಎಂದೂ ಹೇಳಿದರು.

ಮಳೆ ಬಂದು ಮರಗಳು ಬಿದ್ದು ಹೋದರೆ ಕೂಡಲೇ ತೆರವುಗೊಳಿಸಬೇಕು. ವಿದ್ಯುತ್ ಕಂಬಗಳು ಬಿದ್ದು ಹೋದರೆ, ಟ್ರಾನ್ಸ್ ಫಾರ್ಮರ್ ಹಾಳಾಗಿದ್ದರೆ, ಸೇತುವೆಗಳು ಹಾಳಾಗಿದ್ದರೆ, ಶಾಲಾ ಕೊಠಡಿಗಳು ಶಿಥಿಲ ಆಗಿದ್ದರೆ ಈಗಲೇ ಅನಾಹುತ ತಪ್ಪಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು. ಮುನ್ನೆಚ್ಚರಿಕೆ ತೆಗೆದುಕೊಂಡರೆ ಅನಾಹುತಗಳನ್ನು ತಪ್ಪಿಸಲು ಸಾಧ್ಯವಾಗುತ್ತದೆ ಎಂದು (2ನೇ ಪುಟಕ್ಕೆ)

### ಪ್ರಚೋದನಕಾರಿ ಪೋಸ್ಟ್ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ

ಬೆಂಗಳೂರು, ಮೇ 23 - ಸಾಮಾಜಿಕ ಜಾಲ ತಾಣಗಳಲ್ಲಿ ಸಾಮರಸ್ಯವನ್ನು ಕದಡುವಂತಹ, ತೇಜೋವಧೆ ಮಾಡುವ, ಪ್ರಚೋದನಕಾರಿ ಪೋಸ್ಟ್‌ಗಳ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹಿರಿಯ ಪೊಲೀಸ್ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಹಿರಿಯ ಪೊಲೀಸ್ ಅಧಿಕಾರಿಗಳ ಸಭೆ ನಡೆಸಿದ ಅವರು, ಸೈಬರ್ ಅಪರಾಧಗಳ ನಿಯಂತ್ರಣಕ್ಕೆ ಹೆಚ್ಚಿನ ಆದ್ಯತೆ ನೀಡುವಂತೆ ಸೂಚಿಸಿದರು.

ಸಾಮಾಜಿಕ ಜಾಲತಾಣಗಳಲ್ಲಿ ಸಾಮರಸ್ಯವನ್ನು ಕದಡುವಂತಹ, ತೇಜೋವಧೆ ಮಾಡುವ, ಪ್ರಚೋದನಕಾರಿ ಪೋಸ್ಟ್‌ಗಳ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕಾನೂನು ಕ್ರಮ ಕೈಗೊಳ್ಳಬೇಕು. ಮಾದಕ ವಸ್ತುಗಳ ಹಾವಳಿಯನ್ನು ತಡೆಗಟ್ಟಬೇಕು ಎಂದು ತಿಳಿಸಿದರು. ಪೊಲೀಸ್ ಠಾಣೆಗಳಿಗೆ ಹಿರಿಯ ಅಧಿಕಾರಿಗಳು ಭೇಟಿ ನೀಡಿ, ಪರಿಶೀಲನೆ ನಡೆಸಬೇಕು. ಪೊಲೀಸ್ ಠಾಣೆಗೆ ಸಮಸ್ಯೆಗಳ ಪರಿಹಾರಕ್ಕಾಗಿ ಬರುವ (2ನೇ ಪುಟಕ್ಕೆ)

## ಮುಂಗಾರು ಹಂಗಾಮಿಗೆ ಕೃಷಿ ಇಲಾಖೆ ಸನ್ನದ್ಧ

### 2.46 ಲಕ್ಷ ಹೆ.ಬಿತ್ತನೆ ಗುರಿ, ಬೀಜ, ಗೊಬ್ಬರಕ್ಕೆ ಕೊರತೆ ಇಲ್ಲ : ಶ್ರೀನಿವಾಸ್ ಚಿಂತಾಲ್

ದಾವಣಗೆರೆ, ಮೇ 23- ಮುಂಗಾರು ಪೂರ್ವ ಮಳೆ ಭೂಮಿಯನ್ನು ತಂಪಾಗಿಸಿದ್ದು, ಭೂಮಿ ಹದಗೊಳಿಸಲು ರೈತರು ಸಿದ್ಧತೆ ನಡೆಸಲಾರಂಭಿಸಿದ್ದಾರೆ. ಇತ್ತ ಕೃಷಿ ಇಲಾಖೆಯೂ ಸನ್ನದ್ಧವಾಗಿದೆ.

ಜಿಲ್ಲೆಯಲ್ಲಿ ಮುಂಗಾರು ಪೂರ್ವ ಮಳೆ ವಾಡಿಕೆಗಿಂತ ಕಡಿಮೆಯಾಗಿದೆಯಾದರೂ, ಮುಂಗಾರು ಮಳೆಯ ಮೇಲೆ ಅನ್ನದಾತನ ಭರವಸೆ ಇದೆ.

ಮುಂಗಾರು ಜೂನ್ 7ಕ್ಕೆ ಕೇರಳಕ್ಕೆ ಆಗಮಿಸಲಿದ್ದು, 9ರ ನಂತರ ರಾಜ್ಯಕ್ಕೆ ಕಾಲಿಡುವ ಸೂಚನೆ ಇದೆ ಎಂದು ಕೃಷಿ ಅಧಿಕಾರಿಗಳು ಹೇಳಿದ್ದಾರೆ.

ಮುಂಗಾರು ಹಂಗಾಮಿಗೆ ಜಿಲ್ಲೆಗೆ 2.46 ಹೆಕ್ಟೇರ್ ಗುರಿ ಹೊಂದಿದ್ದೇವೆ. ಸುಮಾರು 41 ಸಾವಿರ ಕ್ವಿಂಟಾಲ್ ಬಿತ್ತನೆ ಬೀಜದ ಅಗತ್ಯವಿದ್ದು, ಎಲ್ಲಾ ದಾಸ್ತಾನು ಇದೆ. ಮೇ ತಿಂಗಳಿಗೆ 24 ಸಾವಿರ ಟನ್ ರಸಗೊಬ್ಬರ ಬೇಕಿದ್ದು, ಈಗಾಗಲೇ 37 ಸಾವಿರ ಟನ್ ದಾಸ್ತಾನು ಹೊಂದಲಾಗಿದ್ದು, ಬೀಜ-ಗೊಬ್ಬರಕ್ಕೆ ಜಿಲ್ಲೆಯಲ್ಲಿ ಕೊರತೆ ಇಲ್ಲ ಎಂದು ಜಂಟಿ ಕೃಷಿ ನಿರ್ದೇಶಕ ಡಾ. ಶ್ರೀನಿವಾಸ್ ಚಿಂತಾಲ್ ಹೇಳಿದ್ದಾರೆ.

ನಾಟಿ ಪದ್ಧತಿಯಲ್ಲಿ ತೊಗರಿ ಬೆಳೆಯುವುದು ಕಳೆದ ವರ್ಷ ಯಶಸ್ವಿಯಾಗಿ ಒಳ್ಳೆಯ ಇಳುವರಿ ಬಂದಿತ್ತು. ಈ ಬಾರಿಯೂ ಅದಕ್ಕೆ ಒತ್ತು ನೀಡಲಾಗುವುದು.



**ವಾಡಿಕೆಗಿಂತ ಕಡಿಮೆ ಮಳೆ**

**ವಾಡಿಕೆಗೆ ಹೋಲಿಸಿದರೆ ಇದುವರೆಗೆ ಸಾಧಾರಣ ಮಳೆಯಾಗಿದೆ. ಏಪ್ರಿಲ್‌ನಲ್ಲಿ 32 ಮಿ.ಮೀ. ವಾಡಿಕೆಗೆ 13.4 ಮಿ.ಮೀ. ಮಾತ್ರ ಮಳೆಯಾಗಿದೆ. ಮೇ 16ರಿಂದ 22ರ ವರೆಗೆ ವಾಡಿಕೆಯಂತೆ 15 ಮಿ.ಮೀ. ಮಳೆಯಾಗಬೇಕಿತ್ತು, 14 ಮಿ.ಮೀ. ಆಗಿದೆ. ಭಾನುವಾರ ಹೆಚ್ಚು ಮಳೆಯಾಗಿದ್ದು, ಜಿಲ್ಲೆಯಲ್ಲಿ ಭತ್ತ ಬೆಳೆಗೆ ಹಾನಿಯಾಗಿದೆ. ಸರ್ವೇ ಕಾರ್ಯ ನಡೆಯುತ್ತಿದೆ ಎಂದು ಜಂಟಿ ಕೃಷಿ ನಿರ್ದೇಶಕ ಶ್ರೀನಿವಾಸ ಚಿಂತಾಲ್ ಹೇಳಿದರು.**

ಜಿಲ್ಲೆಯಲ್ಲಿ ಅತಿ ಹೆಚ್ಚು ಪ್ರದೇಶದಲ್ಲಿ ಬೆಳೆಯಲ್ಪಡುವ ಮೆಕ್ಕೆಜೋಳ ಬೆಳೆಯಲ್ಲಿ ಮುಳ್ಳು ಸಜ್ಜೆಯಿಂದಾಗಿ ಇಳುವರಿ ಕುಂಠಿತವಾಗುತ್ತಿದೆ. ಈ ಹಿನ್ನೆಲೆಯಲ್ಲಿ ಈ ತಳಿಯ ಬದಲು ಸೋಯಾ ಅವರೆ ಬೆಳೆಯುವಂತೆ ಉತ್ತೇಜಿಸಲಾಗುತ್ತಿದೆ. ತೊಗರಿಯನ್ನು ಅಂತರ ಬೆಳೆಯಾಗಿ ಬೆಳೆಯಲು ಉತ್ತೇಜನ ನೀಡಲಾಗುವುದು. ಶೇಂಗಾದಲ್ಲಿ ಹೆಚ್ಚು ಇಳುವರಿ ನೀಡಬಲ್ಲ ಹೊಸ ತಳಿಗಳನ್ನು ಪರಿಚಯಿಸುವ ಉದ್ದೇಶ ಹೊಂದಿದ್ದೇವೆ ಎಂದು ಡಾ.ಚಿಂತಾಲ್ ಹೇಳಿದರು.

**2.46 ಲಕ್ಷ ಹೆಕ್ಟೇರ್ ಗುರಿ:** ನೀರಾವರಿ ಪ್ರದೇಶದಲ್ಲಿ 86,147 ಹೆಕ್ಟೇರ್ ಹಾಗೂ ಖುಷ್ಕಿ ಭೂಮಿಯಲ್ಲಿ 1,59,936 ಹೆಕ್ಟೇರ್ ಪ್ರದೇಶ ಸೇರಿ ಒಟ್ಟಾರೆ ಜಿಲ್ಲೆಯಲ್ಲಿ 2,46,083 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಗುರಿ ಹೊಂದಲಾಗಿದೆ.

ಮುಖ್ಯವಾಗಿ ಜಿಲ್ಲೆಯಲ್ಲಿ ಅತಿ ಹೆಚ್ಚು ಬೆಳೆಯಲ್ಪಡುವ ಮೆಕ್ಕೆಜೋಳಕ್ಕೆ 1,26,108 ಹೆಕ್ಟೇರ್ ಹಾಗೂ ಭತ್ತಕ್ಕೆ 65,847 ಹೆಕ್ಟೇರ್ ಗುರಿ ಇದೆ. ಉಳಿದಂತೆ ಜೋಳ ,2400 ಹೆಕ್ಟೇರ್, ರಾಗಿ 7,295, ಸಜ್ಜೆ 580 ಹೆಕ್ಟೇರ್ ಗುರಿ ಹೊಂದಲಾಗಿದೆ.

ತೊಗರಿ 13,500 ಹೆಕ್ಟೇರ್, ಅವರೆ, ಹಲಸಂದೆ, ಹೆಸರು ಸೇರಿದಂತೆ ದ್ವಿದಳ ಧಾನ್ಯಗಳಿಗೆ 16,309 ಹೆಕ್ಟೇರ್ ಗುರಿ (2ನೇ ಪುಟಕ್ಕೆ)

## ವಿಧಾನಸಭಾಧ್ಯಕ್ಷರಾಗಿ ಯು.ಟಿ. ಖಾದರ್ ಆಯ್ಕೆ ಖಚಿತ



ಬೆಂಗಳೂರು, ಮೇ 23- ರಾಜ್ಯ ವಿಧಾನಸಭೆಯ ನೂತನ ಸಭಾಧ್ಯಕ್ಷರಾಗಿ ಮಾಜಿ ಸಚಿವ ಯು.ಟಿ.ಖಾದರ್ ಅವಿರೋಧ ಆಯ್ಕೆ ಖಚಿತ.

ಸಭಾಧ್ಯಕ್ಷ ಸ್ಥಾನಕ್ಕೆ ನಾಮಪತ್ರ ಸಲ್ಲಿಸಲು ಕಡೆಯ ದಿನವಾದ ಇಂದು ಖಾದರ್ ಮಾತ್ರ ಈ ಸ್ಥಾನ ಬಯಸಿ ನಾಮಪತ್ರ ಸಲ್ಲಿಸಿದರು.

ಹಂಗಾಮಿ ಸಭಾಧ್ಯಕ್ಷರಾದ ಆರ್.ವಿ. ದೇಶಪಾಂಡೆ ಅವರು ಸಭಾಧ್ಯಕ್ಷರ ಸ್ಥಾನದ ಚುನಾವಣೆ ನಡೆಸಿಕೊಡಲಿದ್ದಾರೆ. ಖಾದರ್ ಮಾತ್ರ ಚುನಾವಣಾ ಕಣದಲ್ಲಿರುವುದರಿಂದ ಅವರ ಆಯ್ಕೆ ಖಚಿತ.

ವಿಧಾನಸಭೆಯ ಇತಿಹಾಸದಲ್ಲೇ ಮುಸ್ಲಿಂ ಸಮುದಾಯದವರಿಗೆ ಇದೇ ಮೊದಲ ಬಾರಿಗೆ ಉನ್ನತ ಹುದ್ದೆ ದೊರೆಯುತ್ತಿದೆ. ಸಚಿವ ಸ್ಥಾನ ಬಯಸಿದ್ದ ಖಾದರ್ ಕಾಂಗ್ರೆಸ್ ವರಿಷ್ಠರ ಆಣತಿಯಂತೆ ಈ ಸ್ಥಾನಕ್ಕೇರಲು ನಿರ್ಧರಿಸಿದ್ದಾರೆ.

ಕಾಂಗ್ರೆಸ್‌ನ ಹಿರಿಯ ಸದಸ್ಯರಾದ ಆರ್.ವಿ.ದೇಶಪಾಂಡೆ, ಹೆಚ್.ಕೆ.ಪಾಟೀಲ್, ಟಿ.ಬಿ.ಜಯಚಂದ್ರ ಸೇರಿದಂತೆ ಹಿರಿಯರಲ್ಲಿ ಒಬ್ಬರನ್ನು ಈ ಸ್ಥಾನಕ್ಕೆ ತರಲು ದೆಹಲಿ ನಾಯಕರು ಕಸರತ್ತು ನಡೆಸಿದ್ದರು.

ಆದರೆ, ಯಾವುದೇ ನಾಯಕರು ಅಧ್ಯಕ್ಷ ಸ್ಥಾನ ವಹಿಸಿಕೊಳ್ಳಲು ಮುಂದಾಗದ ಹಿನ್ನೆಲೆಯಲ್ಲಿ ಎಐಸಿಸಿ ವರಿಷ್ಠರಾದ ಕೆ.ಸಿ. (2ನೇ ಪುಟಕ್ಕೆ)


**ಬೆಣ್ಣೆಹಳ್ಳಿ ರಂಗಪ್ಪಳರ ಕರೇಗೌಡ್ರು ನಿಧನ**



ವಿಜಯನಗರ ಜಿಲ್ಲೆ, ಹರಪನಹಳ್ಳಿ ತಾಲ್ಲೂಕು ಬೆಣ್ಣೆಹಳ್ಳಿ ಗ್ರಾಮದ ವಾಸಿ, **ಶ್ರೀ ಕರೇಗೌಡ್ರು (ರಂಗಪ್ಪಳರ)** ಅವರು ದಿನಾಂಕ 23-05-2023ರ ಮಂಗಳವಾರ ಸಂಜೆ 5 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 62 ವರ್ಷ ವಯಸ್ಸಾಗಿತ್ತು. ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 24-05-2023ರ ಬುಧವಾರ ಬೆಳಿಗ್ಗೆ 11 ಗಂಟೆಗೆ ಮೃತರ ಸ್ವಗ್ರಾಮ ಬೆಣ್ಣೆಹಳ್ಳಿಯಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ
ರಂಗಪ್ಪಳರ ವಂಶಸ್ಥರು, ಬೆಣ್ಣೆಹಳ್ಳಿ ಮತ್ತು ಬಂಧು-ಮಿತ್ರರು.
ಮೊ. : 80952 70233, 95353 61557



ಭಾವಪೂರ್ಣ ಶ್ರದ್ಧಾಂಜಲಿ

**ಶ್ರೀಮತಿ ಲಲಿತಾ ನಿಧನ**



ಜನನ : 11-10-1954

ನಿಧನ : 23-05-2023

ದಾವಣಗೆರೆ ವಾಸಿ, ಹಿರಿಯ ತೆರಿಗೆ ಸಲಹೆಗಾರರಾದ
**ಶ್ರೀ ಹೋಲೂರು ಬಸವರಾಜಪ್ಪನವರ** ಧರ್ಮಪತ್ನಿ
**ಶ್ರೀಮತಿ ಲಲಿತಾ** ಅವರು
ದಿನಾಂಕ 23.05.2023ರ ಮಂಗಳವಾರ ಬೆಳಿಗ್ಗೆ 8.31ಕ್ಕೆ ನಿಧನರಾದರೆಂದು
ಎಂದು ತಿಳಿಸಲು ವಿಷಾದಿಸುತ್ತೇವೆ. ಮೃತರ ಅಂತ್ಯಕ್ರಿಯೆಯನ್ನು
ಅಂದೇ ಸಂಜೆ 6.30ಕ್ಕೆ ಶಾಮನೂರು ಹಿಂದೂ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು.

ಇಂತಿ ದುಃಖತಪ್ತರಾದ
ಶ್ರೀ ಹೋಲೂರು ಬಸವರಾಜಪ್ಪ (ಆಡಿಟರ್)
ಮತ್ತು ಕುಟುಂಬ ವರ್ಗ, ದಾವಣಗೆರೆ.
ಮೊ. : ✦ 94483 38627 ✦ 94480 08818

# ಲಾರಿಯಲ್ಲಿ ಪ್ರಯಾಣಿಸಿದ ರಾಹುಲ್ ಗಾಂಧಿ

## ಚಾಲಕರ ಮನ್ ಕಿ ಬಾತ್ ಆಲಿಸಲಾಗಿದೆ ಎಂದ ಕಾಂಗ್ರೆಸ್



ನವದೆಹಲಿ, ಮೇ 23 - ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ದೆಹಲಿಯಿಂದ ಚಂಡೀಘಡಕ್ಕೆ ಲಾರಿಯೊಂದರಲ್ಲಿ ಪ್ರಯಾಣಿಸಿದ್ದಾರೆ. ಈ ವೇಳೆ ಅವರು ಲಾರಿ ಚಾಲಕರ ಸಮಸ್ಯೆಗಳನ್ನು ಆಲಿಸಿದ್ದಾರೆ ಎಂದು ಕಾಂಗ್ರೆಸ್ ಪಕ್ಷ ತಿಳಿಸಿದೆ. ಸೋಮವಾರ ರಾತ್ರಿ ರಾಹುಲ್ ಗಾಂಧಿ ಲಾರಿ ಪ್ರಯಾಣ ಮಾಡಿದ್ದಾರೆ. ಈ ಕುರಿತ ಚಿತ್ರ ಹಾಗೂ ವಿಡಿಯೋಗಳನ್ನು ಹಂಚಿಕೊಳ್ಳಲಾಗಿದೆ. ಈ ಬಗ್ಗೆ ಹೇಳಿಕೆ ನೀಡಿರುವ ಕಾಂಗ್ರೆಸ್ ಪಕ್ಷ, ಜನ ನಾಯಕ ರಾಹುಲ್ ಗಾಂಧಿ ಅವರು ಲಾರಿ ಚಾಲಕರನ್ನು ಸಂಪರ್ಕಿಸಿ, ಅವರ ಸಮಸ್ಯೆಗಳನ್ನು ಆಲಿಸಿದ್ದಾರೆ. ಅವರೊಂದಿಗೆ ದೆಹಲಿಯಿಂದ ಚಂಡೀಘಡಕ್ಕೆ ಪ್ರಯಾಣಿಸಿದ್ದಾರೆ ಎಂದು ತಿಳಿಸಿದೆ.

ದೇಶದಲ್ಲಿ 90 ಲಕ್ಷ ಲಾರಿ ಚಾಲಕರಿದ್ದಾರೆ ಎಂಬ ವರದಿಗಳಿವೆ. ಅವರು ತಮ್ಮದೇ ಆದ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ರಾಹುಲ್ ಗಾಂಧಿ ಅವರು ಲಾರಿ ಚಾಲಕರ 'ಮನ್ ಕಿ ಬಾತ್' ಆಲಿಸಿದ್ದಾರೆ ಎಂದು ಪಕ್ಷದ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಅಂಬಾಲ ನಗರದ ಗುರುದ್ವಾರದಲ್ಲಿ ಲಾರಿಯಿಂದ ಇಳಿದು ಪೂಜೆ ಸಹ ಸಲ್ಲಿಸಿದ್ದಾರೆ.

# ಇನ್‌ಸೈಟ್ಸ್‌ನ ಅಭ್ಯರ್ಥಿಗಳು ಯು.ಪಿ.ಎಸ್.ಸಿ. ಉತ್ತೀರ್ಣ

**(1ನೇ ಪುಟದಿಂದ)** ಐಎಎಸ್, ಐಪಿಎಸ್ ಮಾಡಲು ಮುಖ್ಯವಾಗಿ ಮನೋಬಲ ಮುಖ್ಯ. ಯುಪಿಎಸ್‌ಸಿ ಪರೀಕ್ಷೆ ಬರೆಯುವವರು ಎಷ್ಟು ಜನರಿದ್ದರೂ ಅವರಿಗಿಂತ ಹೆಚ್ಚು ಅಂಕಗಳನ್ನು ಪಡೆದು ಐಎಎಸ್ ಅಧಿಕಾರಿಯಾಗುತ್ತೇನೆ ಎಂಬ ಮಹತ್ವಾಕಾಂಕ್ಷೆ ಇರಬೇಕು.ಮಹತ್ವಾಕಾಂಕ್ಷೆಯೇ ನಿಮ್ಮಲ್ಲಿ ದೊಡ್ಡ ಕನಸು ಹುಟ್ಟಿಸುತ್ತದೆ. ಸಾಧಿಸುವ ಮನಸ್ಸಿದ್ದರೆ ಸಾಕು ಬಡತನ, ಗ್ರಾಮೀಣ ಪ್ರದೇಶದ ಹಿನ್ನೆಲೆಯಂತಹವು ಯು.ಪಿ.ಎಸ್.ಸಿ ಪಾಸಾಗಲು ಅಡ್ಡಿಯಾಗುವುದಿಲ್ಲ. ಆದರೆ ಅಭ್ಯರ್ಥಿಗಳು ಸಂವಹನ ಕೌಶಲ್ಯವನ್ನು ಉತ್ತಮಗೊಳಿಸಿಕೊಳ್ಳುವುದು ಕಡ್ಡಾಯ. ಇದಕ್ಕೆ ಪೂರಕವಾಗಿ ವಿದ್ಯಾರ್ಥಿಗಳಿಗೆ ಯುಪಿಎಸ್‌ಸಿ ಪರೀಕ್ಷಾ ತಯಾರಿಯನ್ನು ಸರಳೀಕರಿಸಲು ಮತ್ತು ಯಶಸ್ಸು ಸಾಧಿಸುವುದನ್ನು ಖಚಿತಪಡಿಸಿಕೊಳ್ಳುವ ನಿಟ್ಟಿನಲ್ಲಿ ಇನ್‌ಸೈಟ್ಸ್ ಐಎಎಸ್ ಸಂಸ್ಥೆಯು ಸತತವಾಗಿ ಶ್ರಮಿಸುತ್ತಿದೆ ಎಂದು ವಿನಯ್ ಕುಮಾರ್ ತಿಳಿಸಿದ್ದಾರೆ.

2014 ರಿಂದ ಯುಪಿಎಸ್‌ಸಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುತ್ತಿರುವ ಇನ್‌ಸೈಟ್ಸ್ ಐಎಎಸ್ ಸಂಸ್ಥೆಯು ಬೆಂಗಳೂರಿನಲ್ಲಿ ಪ್ರಧಾನ ಕಛೇರಿಯನ್ನು ಹೊಂದಿದ್ದು ದೆಹಲಿ, ಶ್ರೀನಗರ, ಲಕ್ನೋ, ಹೈದರಾಬಾದ್, ಧಾರವಾಡ, ಮೈಸೂರು ಸೇರಿದಂತೆ ಭಾರತದಾದ್ಯಂತ ಶಾಖೆಗಳನ್ನು ಹೊಂದಿದೆ.

ಜಮ್ಮು ಮತ್ತು ಕಾಶ್ಮೀರದ ಶ್ರೀನಗರ ಶಾಖೆಯಲ್ಲಿನ ವಿದ್ಯಾರ್ಥಿಯಾಗಿರುವ ಮನನ್ ಭಟ್ 231 ನೇ ಶ್ರೇಯಾಂಕ ಪಡೆದಿರುವುದು ಈ ಬಾರಿಯ ವಿಶೇಷತೆಗಳಲ್ಲಿ ಒಂದಾಗಿದೆ ಎಂದವರು ತಿಳಿಸಿದ್ದಾರೆ.

ಇನ್‌ಸೈಟ್ಸ್ ಐಎಎಸ್ ಸಂಸ್ಥೆಯಿಂದ ಆಯ್ಕೆಯಾದ ಕರ್ನಾಟಕದ ಅಭ್ಯರ್ಥಿಗಳು : ಡಿ. ಸೂರಜ್, ಸೌರಭ್ ಎ. ನರೇಂದ್ರ, ಎ.ಎಲ್. ಆಕಾಶ್, ಪಿ. ಶ್ರವಣ್ ಕುಮಾರ್, ಆರ್. ಚಲುವರಾಜು, ಕೆ. ಸೌರಭ್, ಧಾಮಿನಿ ಎಂ. ದಾಸ್, ಶ್ರುತಿ ಯರಗಟ್ಟಿ, ಎಂ. ಪೂಜಾ, ಜೆ. ಭಾನು ಪ್ರಕಾಶ್, ಸಿ. ಸಮೀರ್ ರಾಜಾ, ಟಿ. ಕೈಲಾಶ್, ಬಿ. ಧನುಶ್ ಕುಮಾರ್, ಬಿ.ವಿ. ಶ್ರೀದೇವಿ, ಆದಿನಾಥ್ ತಮದಡ್ಡಿ, ಜೋಶಿ ವಿಕ್ರಮ್ ನರಸಿಂಹ, ಐ.ಎನ್. ಮೇಘನ, ಸಿ.ಪಿ. ನಿಮಿಷಾಂಬ, ಆರ್. ರಾಹುಲ್, ಎಂ.ಎಸ್. ತನ್ಮಯ್, ಮೊಹಮ್ಮದ್ ಸಾಧಿಕ್ ಶರೀಫ್, ನಗುಲ ಕೃಪಾಕರ್, ಯಲಗುರೇಶ್ ಅರ್ಜುನ ನಾಯಕ್.

# ಹಣ, ಜಾತಿ ಪ್ರಭಾವಕ್ಕೆ ಮನ್ನಣೆ, ನನ್ನ ಸೋಲಿಗೆ ಕಾರಣ



ಹರಿಹರ, ಮೇ 23- ಮತದಾರರು ಅಭಿವೃದ್ಧಿ ಕೆಲಸ ಮಾಡುವವರ ಕೈ ಹಿಡಿಯದೇ ಹಣ,ಜಾತಿಪ್ರಭಾವಕ್ಕೆಮನ್ನಣೆನೀಡಿದ್ದರಿಂದಲೇ ಈ ಬಾರಿಯ ಚುನಾವಣೆಯಲ್ಲಿ ನಾನು ಸೋಲನುಭವಿಸಬೇಕಾಯಿತು ಎಂದು ಮಾಜಿ ಶಾಸಕರೂ, ಜೆಡಿಎಸ್ ಅಭ್ಯರ್ಥಿಯೂ ಆಗಿದ್ದ ಹೆಚ್.ಎಸ್. ಶಿವಶಂಕರ್ ಬೇಸರ ವ್ಯಕ್ತಪಡಿಸಿದರು.

ನಗರದ ಹೆಚ್.ಕೆ. ವೀರಪ್ಪ ಕಲ್ಯಾಣ ಮಂಟಪದಲ್ಲಿ ಇಂದು ನಡೆದ 'ಆತ್ಮಾವಲೋಕನ, ಆತ್ಮಶೋಧನಾ' ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮೂರು ತಿಂಗಳ ಕಾಲ ಇಡೀ ತಾಲ್ಲೂಕಿನಾದ್ಯಂತ ಪ್ರವಾಸ ಮಾಡಿ ಬಿಜೆಪಿ ಭ್ರಷ್ಟಾಚಾರ, ಬೆಲೆಯೇರಿಕೆ, ಆಡಳಿತ ವೈಫಲ್ಯದ ಬಗ್ಗೆ ಜನರಿಗೆ ತಿಳಿಸುವ ಜೊತೆಗೆ ಮಾಜಿ ಸಿಎಂ ಹೆಚ್.ಡಿ. ಕುಮಾರಸ್ವಾಮಿ ಅವರ 'ಪಂಚರತ್ನ' ಯೋಜನೆಯ ವಿಚಾರಗಳನ್ನು ಜನರಿಗೆ ತಿಳಿಸುವ ಪ್ರಾಮಾಣಿಕ ಪ್ರಯತ್ನ ಮಾಡಿದ್ದೇನೆ. ದಾಖಲೆಯ ಮತಗಳನ್ನು ಗಳಿಸುತ್ತೇನೆಂಬ ಆತ್ಮವಿಶ್ವಾಸ ಕೂಡ ನನ್ನಲ್ಲಿತ್ತು. ಆದರೆ ಮತದಾರರು 'ಕೈ' ಹಿಡಿಯಲಿಲ್ಲ ಎಂದರು.

ಜೆಡಿಎಸ್ ಪಕ್ಷದ ಕಾರ್ಯಕರ್ತರು, ಮುಖಂಡರು ಸಾಕಷ್ಟು ಪ್ರಚಾರ ಮಾಡಿ ಮತದಾರರ ಮನವೊಲಿಸುವ ಪ್ರಯತ್ನ ಮಾಡಿದರೂ ವಿಫಲರಾದರು. ಚುನಾವಣೆಯಲ್ಲಿ ಜಾತಿ, ಹಣ ಹೆಚ್ಚು ಕೆಲಸ ಮಾಡಿದ್ದರಿಂದ ಪ್ರಾಮಾಣಿಕ ಪ್ರಯತ್ನಕ್ಕೆ ಬೆಲೆ ಇಲ್ಲವೆಂಬುದು ಸಾಬೀತಾಯಿತು ಎಂದು ಹೇಳಿದರು.

ಈ ಬಾರಿ ಹೊಂದಾಣಿಕೆ ರಾಜಕೀಯ ನಡೆದಿದ್ದು, ಕಾಂಗ್ರೆಸ್ ಅಭ್ಯರ್ಥಿಯನ್ನು ಸೋಲಿಸಲೇ ಬೇಕೆಂದು ಕೆಲವರು ಬಿಜೆಪಿ ಪರ ಕೆಲಸ ಮಾಡಿದ್ದರ ಫಲವಾಗಿ ಬಿಜೆಪಿ ಅಭ್ಯರ್ಥಿ ಹರಿಹರ ಕ್ಷೇತ್ರದಲ್ಲಿ ಗೆಲುವು ಸಾಧಿಸಲು ಸಾಧ್ಯವಾಯಿತು ಎಂದು ತಿಳಿಸಿದರು.

ಆಗಿರುವ ತಪ್ಪನ್ನು ಸರಿಪಡಿಸಿಕೊಂಡು ಮುಂಬರುವ ಜಿ.ಪಂ., ತಾ.ಪಂ., ಯಾವುದೇ ಚುನಾವಣೆಗಳಿರಲಿ ಸಿದ್ಧತೆಗಳನ್ನು ಮಾಡಿಕೊಳ್ಳಲು ಮುಂದಾಗುವೆ. ಕೆಲವರು ನನ್ನ ಜೊತೆಗಿದ್ದು ಹೇಡಿಗಳ ರೀತಿಯಲ್ಲಿ ವರ್ತನೆ ಮಾಡಿದ್ದು ಬೇಸರ ತಂದಿದೆ ಎಂದು ಹೇಳಿದರು.

ಐದು ಬಾರಿ ಚುನಾವಣೆಗೆ ಸ್ಪರ್ಧಿಸಿರುವ ನಾನು ಒಂದು ಬಾರಿ ಶಾಸಕನಾಗಿ, ಮತ್ತೊಂದು ಅವಧಿಯಲ್ಲಿ ವಿಧಾನಪರಿಷತ್ ಸದಸ್ಯನಾಗಿ ಸೇವೆ ಸಲ್ಲಿಸಿದ್ದೇನೆ. ನನ್ನ ಆಡಳಿತ ಅವಧಿಯಲ್ಲಿ 400 ಕೋಟಿ ರೂ. ಅನುದಾನ ತಂದು ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸಿದ್ದೇನೆ. ಬಿಜೆಪಿ ಡಬಲ್ ಇಂಜಿನ್ ಸರ್ಕಾರದಲ್ಲಿ ಶಾಸಕರಾಗಿದ್ದ ರಾಮಪ್ಪ ಅವರಿಗೆ ಅಭಿವೃದ್ಧಿ ಕೆಲಸಗಳನ್ನು ಮಾಡಲಿಕ್ಕೆ ಬಿಡಲಿಲ್ಲ ಎಂದರು.

ಹತ್ತು ವರ್ಷಗಳ ನಂತರ ಬಿ.ಪಿ.ಹರೀಶ್ ಮತ್ತೆ ಶಾಸಕರಾಗಿದ್ದಾರೆ. ನೆನೆಗುದಿಯಲ್ಲಿರುವ ಭೈರನಪಾದ ಯೋಜನೆಯನ್ನು ಅಭಿವೃದ್ಧಿಪಡಿಸಿ ಅವರ ಶಕ್ತಿ ತೋರಿಸಲಿ. ಬಿಜೆಪಿ ಆಪರೇಷನ್ ಕಮಲ, ಭ್ರಷ್ಟಾಚಾರ, ದೇವರು ಮತ್ತು ಧರ್ಮದ ಹೆಸರಿನಲ್ಲಿ ಬಿತ್ತಿದ ಕೋಮುಭಾವನೆ, ರೈತ ವಿರೋಧಿ ನೀತಿ, ಬೆಲೆಯೇರಿಕೆ ಬಿಜೆಪಿ ಹೀನಾಯ ಸೋಲಿಗೆ ಕಾರಣವಾದವು ಮತ್ತು ಕಾಂಗ್ರೆಸ್ ರಾಜ್ಯದಲ್ಲಿ ಅಧಿಕಾರಕ್ಕೆ ಬರುವಂತಾಯಿತು ಎಂದು ಹೇಳಿದರು.

ತಾ.ಪಂ. ಮಾಜಿ ಸದಸ್ಯ ಕೊಟ್ರೇಶ್ ಸಿರಿಗೆರೆ ಮಾತನಾಡಿ, ಎರಡೂ ರಾಷ್ಟ್ರೀಯ ಪಕ್ಷಗಳು ಹಣದ ಹೊಳೆಯನ್ನು ಹರಿಸಿದ್ದರ ಪರಿಣಾಮ ಮತ್ತು ಕಾಂಗ್ರೆಸ್ ಗ್ಯಾರಂಟಿ ಕಾರ್ಡ್ ಎಂಬ ಭರವಸೆಯಿಂದಾಗಿ ಸಾಮಾನ್ಯ ಮತದಾರರು ಬಿಜೆಪಿ ಮತ್ತು ಕಾಂಗ್ರೆಸ್‌ಗೆ ಮತ ಹಾಕಿದ್ದಾರೆ. ಕ್ಷೇತ್ರದಲ್ಲಿ ಕಳೆದ ಆರು ತಿಂಗಳಿಂದ ಸತತ ಹೋರಾಟ ಮಾಡಿಕೊಂಡು ಬಂದರೂ ಸೋಲು ಅನುಭವಿಸಬೇಕಾಯಿತು ಎಂದರು.

ಜೆಡಿಎಸ್ ಜಿಲ್ಲಾಧ್ಯಕ್ಷ ಬಿ. ಚಿದಾನಂದಪ್ಪ, ಪರಮೇಶ್ವರ ಗೌಡ್ರು, ಮಂಜುನಾಥ ಕಾಳೇರ್, ಜಿಗಳಿ ರಂಗಪ್ಪ, ಆರ್.ಸಿ. ಜಾವಿದ್, ಗೋವಿಂದಪ್ಪ ಸಾವಜ್ಜಿ ಸೇರಿದಂತೆ ಮುಖಂಡರು ಮಾತನಾಡಿದರು.

> ನನ್ನ ತಂದೆ ದಿ. ಹೆಚ್. ಶಿವಪ್ಪ ಅವರ ವರ್ಚಸ್ಸು, ಅವರ ಅವಧಿಯ ಅಭಿವೃದ್ಧಿ ಕಾರ್ಯಗಳು ಹಾಗೂ ನನ್ನದೇ ಆದ ಪ್ರಭಾವದಿಂದ ನಲವತ್ತು ಸಾವಿರ ಮತಗಳು ನನಗೆ ಬಂದಿವೆ. ಕಷ್ಟಗಳಿಗೆ ಎದೆಗುಂದದೇ ಇರುವ ವ್ಯಕ್ತಿಗೆ ನಾಯಕತ್ವದ ಶಕ್ತಿ ಇದ್ದೇ ಇರುತ್ತದೆ. ನಾನು ಶಕ್ತಿ ಕಳೆದುಕೊಂಡು ರಾಜಕೀಯ ಮಾಡುವುದಿಲ್ಲ. ಬದಲಾಗಿ ನಿರಂತರವಾಗಿ ಕ್ಷೇತ್ರದ ಜನರೊಡನೆ ಸಂಪರ್ಕ ಇಟ್ಟುಕೊಂಡು ಸಮಸ್ಯೆಗಳಿಗೆ ಸದಾ ಸ್ಪಂದಿಸುವ ಕೆಲಸ ಮಾಡುತ್ತೇನೆ.
>
> - ಹೆಚ್.ಎಸ್. ಶಿವಶಂಕರ್, ಮಾಜಿ ಶಾಸಕ

ಮುಖಂಡರಾದ ಹೆಚ್.ಎಸ್. ಅರವಿಂದ್, ಟಿ. ಮುಕುಂದ, ಮಿಟ್ಲಕಟ್ಟೆ ಚಂದ್ರಪ್ಪ, ರೆಹಮಾನ್ ಖಾನ್, ಮದ್ದಿ ಮನ್ಸೂರ್, ಹಬೀಬ್ ವುಲ್ಲಾ, ಉಷಾ ಮಂಜುನಾಥ್, ಅಂಗಡಿ ಮಂಜುನಾಥ, ಬಿ. ಅಲ್ತಾಫ್, ಶಿಲಾಕುಮಾರಿ, ಗಂಗನಹರಸಿ ನಾಗೇಂದ್ರಪ್ಪ, ವಿನಯ ಚಂದ್ರಪ್ಪ, ಬೇವಿನಹಳ್ಳಿ ಮಲ್ಲಿಕಾರ್ಜುನ, ಬಸಟೆಪ್ಪ, ನಾಗರಾಜ್ ಮೆಹರ್ವಾಡೆ, ಅಸ್ರಾಖಾನ್, ಹೊನ್ನಮ್ಮ ಕೊಂಡಜ್ಜಿ, ಡಿ.ಯು. ಸಂಗಮೇಶ್, ಜಿಯಾವುಲ್ಲಾ, ಬಿ.ಎಂ. ಹಾಲಸ್ವಾಮಿ, ಮಲ್ಲನಾಯಕನಹಳ್ಳಿ ಚಂದ್ರು, ಅಮರಾವತಿ ನಾಗರಾಜ್, ಅಡಕಿ ಕುಮಾರ್, ಮುರುಗೇಶಪ್ಪ ಹಿಂಡಸಘಟ್ಟ, ಬಸವರಾಜ್ ಹೊಸಳ್ಳಿ ಮಲೇಬೆನ್ನೂರು, ಮಹದೇವಪ್ಪ, ಅಂಬರೀಶ್, ಲೋಕೇಶ್ ಬೇವಿನಹಳ್ಳಿ, ಓಂಕಾರಪ್ಪ ದಾವಣಗೆರೆ, ಶಂಕ್ರಪ್ಪ ದಾವಣಗೆರೆ, ಅಡಿವೇಶ್ ಹುಗ್ಗಿ, ಲಕ್ಷ್ಮೀ ರಾಜಚಾರ್, ಮಹೇಶ್ ಬನ್ನಿಕೋಡು ಮತ್ತಿತರರು ಭಾಗವಹಿಸಿದ್ದರು.

# ಜಿಲ್ಲೆಯಲ್ಲಿ ಮಳೆಗೆ 79.40 ಲಕ್ಷ ರೂ.ನಷ್ಟ

ದಾವಣಗೆರೆ, ಮೇ 23- ಜಿಲ್ಲೆಯಲ್ಲಿ ನಿನ್ನೆ 13.6 ಮಿ.ಮೀ. ಸರಾಸರಿ ಮಳೆಯಾಗಿದ್ದು, ರೂ. 79.40 ಲಕ್ಷ ರೂ. ಅಂದಾಜು ನಷ್ಟ ಸಂಭವಿಸಿದೆ. ತಾಲ್ಲೂಕುವಾರು ಮಳೆ ಹಾಗೂ ಹಾನಿ ವಿವರ ಈ ಕೆಳಕಂಡಂತಿದೆ.

ಚನ್ನಗಿರಿಯಲ್ಲಿ ವಾಡಿಕೆ ಮಳೆ 2.5 ಮಿ.ಮೀ ಹಾಗೂ ವಾಸ್ತವ ಮಳೆ 9.5 ಮಿ.ಮೀ, ದಾವಣಗೆರೆ ತಾಲ್ಲೂಕಿನಲ್ಲಿ ವಾಡಿಕೆ ಮಳೆ 1.0 ಮಿ.ಮೀ ಹಾಗೂ ವಾಸ್ತವ ಮಳೆ 19.5 ಮಿ.ಮೀ, ಹರಿಹರದಲ್ಲಿ ವಾಡಿಕೆ ಮಳೆ 1.1 ಮಿ.ಮೀ ಹಾಗೂ ವಾಸ್ತವ ಮಳೆ 17.2 ಮಿ.ಮೀ, ಹೊನ್ನಾಳಿ ವಾಡಿಕೆ ಮಳೆ 2.4 ಮಿ.ಮೀ ಹಾಗೂ ವಾಸ್ತವ ಮಳೆ 9.0 ಮಿ.ಮೀ, ಜಗಳೂರು ವಾಡಿಕೆ ಮಳೆ 1.9 ಮಿ.ಮೀ ಹಾಗೂ ವಾಸ್ತವ ಮಳೆ 13.7 ಮಿ.ಮೀ, ನ್ಯಾಮತಿಯಲ್ಲಿ ವಾಡಿಕೆ ಮಳೆ 2.5 ಮಿ.ಮೀ, ವಾಸ್ತವ ಮಳೆ 14.1 ಮಿ.ಮೀ ಮಳೆಯಾಗಿದೆ.

ದಾವಣಗೆರೆ ತಾಲ್ಲೂಕು ವ್ಯಾಪ್ತಿಯಲ್ಲಿ 1 ಪಕ್ಕಾ ಮನೆಗೆ ಭಾಗಶಃ ಹಾನಿ, 150 ಎಕರೆ ಭತ್ತದ ಬೆಳೆ ಹಾನಿಯಾಗಿದ್ದು ರೂ.30.60 ಲಕ್ಷ ಅಂದಾಜು ನಷ್ಟ ಸಂಭವಿಸಿದೆ.

ಹರಿಹರ ತಾಲ್ಲೂಕು ವ್ಯಾಪ್ತಿಯಲ್ಲಿ 2 ಕಚ್ಚಾ ಮನೆ ಭಾಗಶಃ ಹಾನಿ ಮತ್ತು 295 ಎಕರೆ ಭತ್ತ ಹಾನಿಯಾಗಿದ್ದು ಒಟ್ಟು ರೂ.18.93 ಲಕ್ಷ ಅಂದಾಜು ನಷ್ಟ ಸಂಭವಿಸಿದೆ.

ಜಗಳೂರು ತಾಲ್ಲೂಕು ವ್ಯಾಪ್ತಿಯಲ್ಲಿ 1 ಕಚ್ಚಾಮನೆಗೆ ತೀವ್ರ ಹಾನಿ, 10 ಕಚ್ಚಾ ಮನೆಗಳಿಗೆ ಭಾಗಶಃ ಹಾನಿಯಾಗಿದ್ದು, 30 ಎಕರೆ ಅಡಿಕೆ, 38 ಎಕರೆ ಬಾಳೆ, 20 ಎಕರೆ ಪಪ್ಪಾಯಿ ಬೆಳೆ ಹಾನಿಯಾಗಿದ್ದು, 1 ಎತ್ತು ಮೃತಪಟ್ಟಿದ್ದು ಒಟ್ಟು ರೂ.29.87 ಲಕ್ಷ ನಷ್ಟ ಸಂಭವಿಸಿದೆ.

## ಕಲುಬುರ್ಗಿಗೆ ಹವಾ ನಿಯಂತ್ರಿತ ಸಾರಿಗೆ ಸೌಕರ್ಯ

ದಾವಣಗೆರೆ, ಮೇ 23- ದಾವಣಗೆರೆ ಭಾಗದ ಪ್ರಯಾಣಿಕರ ಅನುಕೂಲಕ್ಕಾಗಿ ಮೇ 25 ರಿಂದ ದಾವಣಗೆರೆ ವಿಭಾಗದಿಂದ ಕಲುಬುರ್ಗಿಗೆ ಹೋಗಲು ಹವಾ ನಿಯಂತ್ರಿತ ಸಾರಿಗೆ ಸೌಕರ್ಯವನ್ನು ಕಲ್ಪಿಸಲಾಗಿದೆ.

ದಾವಣಗೆರೆಯಿಂದ ರಾತ್ರಿ 8.30 ಕ್ಕೆ ಹೊರಟು ಹರಿಹರ-ಹರಪನಹಳ್ಳಿ-ಹೊಸಪೇಟೆ-ಗಂಗಾವತಿ-ಲಿಂಗಸೂರು ಮಾರ್ಗವಾಗಿ ಬೆಳಿಗ್ಗೆ 5.30 ಕ್ಕೆ ಕಲ್ಬುರ್ಗಿಗೆ ಮತ್ತು ಕಲ್ಬುರ್ಗಿಯಿಂದ ರಾತ್ರಿ 9.15 ಕ್ಕೆ ಹೊರಟು ಲಿಂಗಸೂರು-ಗಂಗಾವತಿ-ಹೊಸಪೇಟೆ-ಹರಪನಹಳ್ಳಿ-ಹರಿಹರ ಮಾರ್ಗವಾಗಿ ಬೆಳಿಗ್ಗೆ 6.25 ಕ್ಕೆ ದಾವಣಗೆರೆ ತಲುಪುವುದು.

ksrtc.karnataka.gov.in ಜಾಲತಾಣದ ಮೂಲಕ ಮುಂಗಡ ಬುಕ್ಕಿಂಗ್ ಮಾಡಲು ಪ್ರಯಾಣಿಕರಿಗೆ ಅವಕಾಶ ಕಲ್ಪಿಸಲಾಗಿದೆ ಎಂದು ಕ.ರಾ.ರ.ಸಾ.ನಿಗಮದ ವಿಭಾಗೀಯ ನಿಯಂತ್ರಣಾಧಿಕಾರಿ ತಿಳಿಸಿದ್ದಾರೆ.

## ಈಜುಕೊಳದಲ್ಲಿ ಬಾಲಕರು ಮೃತಪಟ್ಟ ಪ್ರಕರಣ: ವರದಿ ನೀಡುವಂತೆ ಡಿಸಿ ಸೂಚನೆ

ದಾವಣಗೆರೆ, ಮೇ 23- ನಗರದ ದೇವರಾಜ ಅರಸು ಬಡಾವಣೆ 'ಬಿ' ಬ್ಲಾಕ್‌ನಲ್ಲಿರುವ ಈಜುಕೊಳದಲ್ಲಿ ಇಬ್ಬರು ಬಾಲಕರು ಮೃತಪಟ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ ಪರಿಶೀಲಿಸಿ, ಸುದೀರ್ಘವಾದ ವಿಚಾರಣೆ ನಡೆಸಿ ಸಂಪೂರ್ಣ ವರದಿ ನೀಡುವಂತೆ ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ಅವರು ಉಪ ವಿಭಾಗಾಧಿಕಾರಿಗಳಿಗೆ ಸೂಚಿಸಿದ್ದಾರೆ. ಮಹಾನಗರ ಪಾಲಿಕೆ ವ್ಯಾಪ್ತಿಯ ಈಜು ಕೊಳದಲ್ಲಿ ತಾಜುದ್ದೀನ್ ಹಾಗೂ ಮುಬಾರಕ್ ಅವರು ಮೃತಪಟ್ಟಿದ್ದು, ಈಜುಕೊಳದಲ್ಲಿ ಯಾವುದೇ ಮುನ್ನೆಚ್ಚರಿಕೆ ರಕ್ಷಣಾ ವ್ಯವಸ್ಥೆ ಹಾಗೂ ತರಬೇತಿದಾರರನ್ನು ನಿಯೋಜಿಸದೇ ನಿರ್ಲಕ್ಷ್ಯ ವಹಿಸಿರುವುದೇ ಬಾಲಕರ ಸಾವಿಗೆ ಕಾರಣವಾಗಿದ್ದು, ನಿರ್ಲಕ್ಷಿತರ ಮೇಲೆ ಕಾನೂನು ಕ್ರಮ ಜರುಗಿಸುವಂತೆ ಪೋಷಕರು ನೀಡಿದ ಮನವಿ ಮೇರೆಗೆ ಜಿಲ್ಲಾಧಿಕಾರಿಗಳು ಆದೇಶಿಸಿದ್ದಾರೆ.

## ಹೊನ್ನಾಳಿಯಲ್ಲಿ ಆರ್.ಆರ್.ಆರ್ ಕೇಂದ್ರ ಉದ್ಘಾಟನೆ



ಹೊನ್ನಾಳಿ, ಮೇ 23- ಇಲ್ಲಿನ ಚೆನ್ನಮ್ಮ ಸಮುದಾಯ ಭವನದಲ್ಲಿ ಪುರಸಭೆಯ ಆರ್.ಆರ್.ಆರ್ ಕಾರ್ಯಕ್ರಮದ ಅಡಿಯಲ್ಲಿ ಆರ್ ಆರ್ ಆರ್ ಕೇಂದ್ರವನ್ನು ಅಧ್ಯಕ್ಷರಾದ ಶ್ರೀಮತಿ ಸುಮ ಇಂಚರ ಮಂಜುನಾಥ್ ಉದ್ಘಾಟನೆ ಮಾಡಿದರು. ಈ ಸಂದರ್ಭದಲ್ಲಿ ಮುಖ್ಯಾಧಿಕಾರಿ ಶ್ರೀಮತಿ ಹೆಚ್.ನಿರಂಜಿನಿ ಮತ್ತಿತರರು ಹಾಜರಿದ್ದರು.

## ಪೋಸ್ಟ್ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ

**(1ನೇ ಪುಟದಿಂದ)** ಸಾರ್ವಜನಿಕರನ್ನು ಅಪರಾಧಿಗಳಂತೆ ಕಾಣದೆ ಸೌಜನ್ಯದಿಂದ ವರ್ತಿಸಬೇಕು. ಅವರ ಸಮಸ್ಯೆಗಳನ್ನು ಬಗೆಹರಿಸಿ ನ್ಯಾಯ ಒದಗಿಸಬೇಕು ಎಂದೂ ಹೇಳಿದರು.

ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆಯುವ ಕಾನೂನು ಬಾಹಿರ ಚಟುವಟಿಕೆಗಳನ್ನು ನಿಯಂತ್ರಿಸಲು ಪೊಲೀಸ್ ಅಧಿಕಾರಿಗಳು ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಬೇಕು. ಗೂಂಡಾಗಿರಿ, ಅನಧಿಕೃತ ಕ್ಲಬ್‌ಗಳ ಚಟುವಟಿಕೆಗಳು, ಡ್ರಗ್ ಮಾಫಿಯಾವನ್ನು ನಮ್ಮ ಸರ್ಕಾರ ಸಹಿಸುವುದಿಲ್ಲ ಎಂದು ತಿಳಿಸಿದರು. ಡ್ರಗ್ ಮಾಫಿಯಾವನ್ನು ನಮ್ಮ ಸರ್ಕಾರ ಸಹಿಸುವುದಿಲ್ಲ. ಇವುಗಳಿಗೆ ಅವಕಾಶ ನೀಡಿದರೆ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುತ್ತದೆ. ಉತ್ತಮವಾಗಿ ಕೆಲಸ ಮಾಡುವವರಿಗೆ ಶಹಬ್ಬಾಶ್‌ಗಿರಿ ನೀಡುತ್ತೇವೆ, ಕರ್ತವ್ಯಲೋಪ ಎಸಗಿದರೆ ಮುಲಾಜಿಲ್ಲದೆ ಕ್ರಮಕೈಗೊಳ್ಳುತ್ತೇವೆ ಎಂದು ಎಚ್ಚರಿಸಿದರು.

ಸಭೆಯಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರಾದ ಕೆ.ಜೆ. ಜಾರ್ಜ್, ಕೆ.ಹೆಚ್. ಮುನಿಯಪ್ಪ, ಬಿ.ಝಡ್. ಜಮೀರ್ ಅಹಮದ್, ಎಂ.ಬಿ. ಪಾಟೀಲ್, ಸತೀಶ್ ಜಾರಕಿಹೊಳಿ ಉಪಸ್ಥಿತರಿದ್ದರು.

## ಆಲಸ್ಯ ಬಿಟ್ಟು ಕೆಲಸ ಮಾಡಿ

**(1ನೇ ಪುಟದಿಂದ)** ತಿಳಿಸಿದರು. ಯಾವುದೇ ಕಾರಣಕ್ಕೂ ಕರ್ತವ್ಯಲೋಪ ಆಗಬಾರದು. ಬೇಜವಾಬ್ದಾರಿತನದಿಂದ ಅನಾಹುತಗಳಾದರೆ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳುತ್ತೇನೆ. ನೆಪ ಹೇಳಿಕೊಂಡು ಪರಿಹಾರ ಕ್ರಮ ವಿಳಂಬ ಮಾಡುವುದು ಸರಿಯಲ್ಲ. ಯಾವುದೇ ಕಾರಣಕ್ಕೂ ಲೋಪ ಆಗಬಾರದು ಎಂದು ಹೇಳಿದರು. ಕಳೆದ ಕೆಲವು ವರ್ಷಗಳಿಂದ ಪ್ರವಾಹ ನೋಡುತ್ತಾ ಇದ್ದೀರಿ. ಹವಾಮಾನ ಇಲಾಖೆ ಸಂಪರ್ಕ- ಮುನ್ಸೂಚನೆ ಅರಿತು ಕೆಲಸ ಮಾಡಿ. ಪ್ರವಾಹ ನಿಯಂತ್ರಣಕ್ಕೆ ಅಗತ್ಯ ಸಲಕರಣೆಗಳನ್ನು ಸಿದ್ಧಪಡಿಸಿಟ್ಟುಕೊಳ್ಳಿ. ಪ್ರವಾಹ ಬರುವ ಪ್ರದೇಶಗಳಲ್ಲಿ ಮುನ್ನೆಚ್ಚರಿಕೆ ತೆಗೆದುಕೊಳ್ಳಿ. ಬೆಳೆ ಹಾನಿ ಮಾಹಿತಿ ಇರಬೇಕು. ಅನುದಾನ ಅಗತ್ಯವಿದ್ದಲ್ಲಿ ಮನವಿ ಸಲ್ಲಿಸಿ ಬಿಡುಗಡೆ ಮಾಡಿಸಿಕೊಳ್ಳಬೇಕು ಎಂದು ಸಿದ್ದರಾಮಯ್ಯ ಸೂಚಿಸಿದರು.

## ಹರಿಹರಕ್ಕೆ ಇಂದು ಬಸವರಾಜ ದೇಶಿ ಕೇಂದ್ರ ಸ್ವಾಮೀಜಿ



ಶ್ರೀ ಕ್ಷೇತ್ರ ಐರಣಿ ಹೊಳೆಮಠದ ಶ್ರೀ ಸ್ವಾಮಿ ಪರಮಹಂಸ ಸದ್ಗುರು ಮುಪ್ಪಿನಾರ್ಯ ಮಹಾತ್ಮಾಜೀ ಅವರ 39ನೇ ಪುಣ್ಯಾರಾಧನೆ ಪ್ರಯುಕ್ತ ವಿದ್ಯಾನಗರದಲ್ಲಿರುವ ಶ್ರೀ ಕ್ಷೇತ್ರ ಐರಣಿ ಶಾಖಾ ಮಠದಲ್ಲಿ ಇಂದಿನಿಂದ ಇದೇ ದಿನಾಂಕ 28 ರವರೆಗೆ ನಾಲ್ಕು ದಿನಗಳ ಕಾಲ ಮಠದಲ್ಲಿ ಐರಣಿ ಮಠದ ಶ್ರೀಗಳು ವಾಸ್ತವ್ಯ ಮಾಡಲಿದ್ದಾರೆ.

ದಿನಾಂಕ 8.6.2023 ರಿಂದ 22.6.2023 ರವರೆಗೆ ನಡೆಯುವ ಶ್ರೀ ಕ್ಷೇತ್ರ ಐರಣಿ ಹೊಳೆಮಠ ಶ್ರೀ ಸ್ವಾಮಿ ಪರಮಹಂಸ ಸದ್ಗುರು ಮುಪ್ಪಿನಾರ್ಯ ಮಹಾತ್ಮಜೀ ಅವರ 39ನೇ ಪುಣ್ಯಾರಾಧನೆ ಪ್ರಯುಕ್ತ ಶ್ರೀ ಸದ್ಗುರು ಬಸವರಾಜ ದೇಶಿ ಕೇಂದ್ರ ಮಹಾತ್ಮಜಿಯವರು ಇಂದು ಸಂಜೆ 4.30ಕ್ಕೆ ಶ್ರೀ ಕ್ಷೇತ್ರ ಐರಣಿ ಹೊಳೆಮಠ ವಿದ್ಯಾನಗರ ಹರಿಹರಕ್ಕೆ ಬಂದು ನಾಲ್ಕು ದಿನಗಳ ಕಾಲ ವಾಸ್ತವ್ಯ ಮಾಡಲಿದ್ದಾರೆ ಎಂದು ನಗರಸಭೆ ಮಾಜಿ ಸದಸ್ಯ ನಾಗರಾಜ್ ಮೆಹರ್ವಾಡೆ ತಿಳಿಸಿದ್ದಾರೆ.

## ಹೊಸ ಬೆಳವನೂರಿನಲ್ಲಿ ಇಂದು ಕಸಾಪ ಸಾಹಿತ್ಯೋತ್ಸವ, ಉಪನ್ಯಾಸ

ದಾವಣಗೆರೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ (ದಾವಣಗೆರೆ) ಮತ್ತು ಸ್ತ್ರೀಶಕ್ತಿ ಸಂಘಗಳು (ಬೆಳವನೂರು) ಹಾಗೂ ಹಿರಿಯ ನಾಗರಿಕರ ಸಹಾಯವಾಣಿ (ದಾವಣಗೆರೆ) ಇವರ ಸಹಯೋಗದಲ್ಲಿ ಶಾಲಾ-ಕಾಲೇಜು ಅಂಗಳದಲ್ಲಿ ಸಾಹಿತ್ಯೋತ್ಸವ ಕಾರ್ಯಕ್ರಮದ ಅಂಗವಾಗಿ ದತ್ತಿ ಉಪನ್ಯಾಸವನ್ನು ಇಂದು ಮಧ್ಯಾಹ್ನ 2.30 ಕ್ಕೆ ಬೆಳವನೂರಿನ ಕುವೆಂಪು ಮಾದರಿ ಶಾಲಾ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮವನ್ನು ಬೆಳವನೂರು ಗ್ರಾ.ಪಂ. ಮಾಜಿ ಅಧ್ಯಕ್ಷ, ಹಾಲಿ ಸದಸ್ಯರಾದ ಮಹಾಂತೇಶ್ ಉದ್ಘಾಟಿಸುವರು. ಅಧ್ಯಕ್ಷತೆಯನ್ನು ಗ್ರಾ.ಪಂ. ಅಧ್ಯಕ್ಷ ಅಶು ಟಿ.ಎ. ವಹಿಸುವರು. 'ಮಕ್ಕಳ ಸರ್ವತೋಮುಖ ಬೆಳವಣಿಗೆಯಲ್ಲಿ ತಾಯಂದಿರ ಪಾತ್ರ' ವಿಷಯ ಕುರಿತು ರುದ್ರಮುನಿ ಹಿರೇಮಠ ಉಪನ್ಯಾಸ ನೀಡುವರು. ಮುಖ್ಯ ಅತಿಥಿಗಳಾಗಿ ಕು. ರೇವತಿ ಆಗಮಿಸುವರು. ಕಾರ್ಯಕ್ರಮದಲ್ಲಿ ನವೀನ್‌ಕುಮಾರ್ ಉಪಸ್ಥಿತರಿರುವರು. ಆರ್. ಶಿವಕುಮಾರ್ ಪ್ರಾಸ್ತಾವಿಕ ನುಡಿಗಳನ್ನಾಡುವರು.

ಕಾರ್ಯಕ್ರಮದಲ್ಲಿ ಜಿ.ಎಸ್. ಪ್ರಕಾಶ್ ಮತ್ತು ಶ್ರೀಮತಿ ಕಮಲಾ ಪ್ರಕಾಶ್ ಶೆಟ್ಟಿ ಹೆಸರಿನ ದತ್ತಿಯನ್ನು ದತ್ತಿ ದಾನಿಗಳಾದ ಜಿ.ಎಸ್. ಪ್ರಕಾಶ್, ಶ್ರೀಮತಿ ಕಮಲಾ ಪ್ರಕಾಶ್ ಹಾಗೂ ಶ್ರೀಮತಿ ಗೌರಮ್ಮ ಮತ್ತು ಮೋತಿ ಪಿ. ರಾಮರಾವ್ ದತ್ತಿಯನ್ನು ದತ್ತಿ ದಾನಿಗಳಾದ ಮೋತಿ ಪಿ. ರಾಮರಾವ್ ಹಾಗೂ ಶ್ರೀಮತಿ ಸರೋಜಿನಿ ದಕ್ಷಿಣಮೂರ್ತಿ ದತ್ತಿಯನ್ನು ದತ್ತಿ ದಾನಿಗಳಾದ ಶ್ರೀಮತಿ ಡಿ.ಎಂ. ಸರೋಜಿನಿ ಇವರು ನಡೆಸಿಕೊಡುವರು.

## ಹಂಗಾಮಿಗೆ ಕೃಷಿ ಇಲಾಖೆ ಸನ್ನದ್ಧ

**(1ನೇ ಪುಟದಿಂದ)** ಹೊಂದಲಾಗಿದೆ. ಶೇಂಗಾ 13,770 ಹೆಕ್ಟೇರ್, ಸೂರ್ಯಕಾಂತಿ 2,190 ಹೆಕ್ಟೇರ್, ಹತ್ತಿ 6,887 ಹೆಕ್ಟೇರ್, ಕಬ್ಬು 2,546 ಹೆಕ್ಟೇರ್ ಗುರಿ ಹೊಂದಲಾಗಿದೆ.

## ಅರೆಮಲ್ಲಾಪುರ, ಬೇಲೂರು ವ್ಯಾಪ್ತಿಯಲ್ಲಿ ಇಂದು ವಿದ್ಯುತ್ ಇಲ್ಲ

ಅರೆಮಲ್ಲಾಪುರ, ಮೇಡ್ಲೇರಿ, ರಾಹುತನಕಟ್ಟೆ, ಯಕ್ಲಾಸಪುರ, ಸೋಮಲಾಪುರ, ಕೊಣನತಂಬಿಗಿ, ಹಿರೇಬಿದರಿ, ಐರಣಿ, ವೈ ಟಿ ಮೆಡ್ಲೇರಿ, ಬೇಲೂರು, ಹೀಲದಹಳ್ಳಿ, ಅಂಕಸಾಪುರ, ಉದಗಟ್ಟೆ, ಯಲ್ಲಾಪುರ ಗ್ರಾಮಗಳಿಗೆ ಇಂದು ಬೆಳಿಗ್ಗೆ 10 ರಿಂದ ಸಂಜೆ 6 ರವರೆಗೆ ವಿದ್ಯುತ್ ಸರಬರಾಜು ವಿದ್ಯುತ್ ಸರಬರಾಜು ಇರುವುದಿಲ್ಲ.

ಹಾಗೂ 33/11 ಕೆವಿ ಚಳಗೇರಿ ವಿದ್ಯುತ್ ವಿತರಣಾ ಕೇಂದ್ರದಿಂದ ಹೊರಡುವ ಎಲ್ಲಾ 11ಕೆವಿ ಮಾರ್ಗಗಳಿಗೆ ಹಾಗೂ ರಾಣೇಬೆನ್ನೂರಿಗೆ ಕುಡಿಯುವ ನೀರು ಸರಬರಾಜಿನ ಮುದೇನೂರು ವಾಟರ್ ಸಪ್ಲೈ, ವೆಂಕಟೇಶ್ವರ ಹ್ಯಾಚರಿ, ರಾಮ್ಕೊ ಫ್ಯಾಕ್ಟರಿ ಹಾಗೂ ಚಳಗೇರಿ, ಕರೂರು, ಹುಣಸಿಕಟ್ಟಿ, ಎಣ್ಣಿಹೊಸಳ್ಳಿ, ಹೂಲಿಕಟ್ಟಿ, ವಡೇರಾಯನಹಳ್ಳಿ, ನದಿಹರಳಹಳ್ಳಿ, ಕಮದೋಡ, ದೇವಗೊಂಡನಕಟ್ಟಿ ಮತ್ತು ಮಾಗೋಡ ಗ್ರಾಮಗಳಿಗೆ ಈ ದಿನದಂದು ಮುಂಜಾನೆ 10 ರಿಂದ ಸಂಜೆ 6 ರವರೆಗೆ ವಿದ್ಯುತ್ ಸರಬರಾಜು ಇರುವುದಿಲ್ಲ.


## ಹರಿಹರದ ನೂತನ ತಹಶೀಲ್ದಾರ್ ಪೃಥ್ವಿ ಸಾನಿಕಂ ಅವರಿಗೆ ಸನ್ಮಾನ



ಹರಿಹರ, ಮೇ 23- ಹರಿಹರ ತಾಲ್ಲೂಕು ರೆಡ್ಡಿ ಸಂಘದ ವತಿಯಿಂದ ಸಮಾಜದ ನೂತನ ತಹಶೀಲ್ದಾರರಾದ ಪೃಥ್ವಿ ಸಾನಿಕಂ ಅವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ರೆಡ್ಡಿ ಸಂಘದ ಹರಿಹರ ತಾಲ್ಲೂಕು ಅಧ್ಯಕ್ಷ ಮಂಜುನಾಥ ರೆಡ್ಡಿ, ಕಾರ್ಯದರ್ಶಿ ಕೊಟ್ರೇಶ ರೆಡ್ಡಿ, ಖಜಾಂಚಿ ಶಿವಪ್ಪ ಭಾನುವಳ್ಳಿ, ಉಪಾಧ್ಯಕ್ಷರುಗಳಾದ ಹೆಚ್.ಬಿ. ವಿಷ್ಣುರೆಡ್ಡಿ, ಬಿ. ಹನುಮಂತರೆಡ್ಡಿ, ಬಸಪ್ಪ ರೆಡ್ಡಿ ಮಣಕೂರು, ವೆಂಕಟೇಶ ರೆಡ್ಡಿ ಟಿ., ಶಶಿಧರ ರೆಡ್ಡಿ ಭಾನುವಳ್ಳಿ, ಮಂಜಪ್ಪ ಬಿದರಿ, ಕೆ. ಸುಧಾಕರ್, ಬಸಪ್ಪ ರೆಡ್ಡಿ ತಾಟಿ, ಮಲ್ಲಿಕಾರ್ಜುನ ಬಾವಿಕಟ್ಟೆ, ರಮೇಶ ರೆಡ್ಡಿ, ನಂದಿಗಾವಿ ಶೋಭರಾಜ ರೆಡ್ಡಿ ಉಪಸ್ಥಿತರಿದ್ದರು.

# ಮಲೇಬೆನ್ನೂರು ಗಾಳಿ-ಮಳೆಗೆ ನೆಲಕಚ್ಚಿದ ಭತ್ತ, ಯಲವಟ್ಟಿಯಲ್ಲಿ ಕುಸಿದ ಮನೆ : ತಹಶೀಲ್ದಾರ್ ಭೇಟಿ



ಮಲೇಬೆನ್ನೂರು, ಮೇ 22 - ಭಾನುವಾರ ರಾತ್ರಿ ಸ್ವಲ್ಪ ಹೊತ್ತು ಸುರಿದ ಭಾರೀ ಗಾಳಿ-ಮಳೆಗೆ ಮಲೇಬೆನ್ನೂರು ಸುತ್ತ-ಮುತ್ತ ಭತ್ತದ ಬೆಳೆ ನೆಲಕಚ್ಚಿದೆ.

ನಂದಿತಾವರೆ, ಕುಣೆ ಬೆಳಕೆರೆ, ದೇವರ ಬೆಳಕೆರೆ, ಸಾಲಕಟ್ಟೆ, ಸಲಗನಹಳ್ಳಿ, ಬೂದಿಹಾಳ್, ನಿಟ್ಟೂರು, ಕುಂಬಳೂರಿನಲ್ಲಿ ಸುಮಾರು 250 ಎಕರೆ ಭತ್ತದ ಬೆಳೆ ನೆಲ ಕಚ್ಚಿದ್ದು, ರೈತರಿಗೆ ತೊಂದರೆ ಆಗಿದೆ.

ಯಲವಟ್ಟಿಯಲ್ಲಿ ಅಂಬಿಕಾಬಾಯಿ ಎಂಬುವವರ ಮನೆ ಕುಸಿದು ಬಿದ್ದಿದೆ. ಈ ವೇಳೆ ಯಾವುದೇ ಪ್ರಾಣ ಹಾನಿ ಆಗಿಲ್ಲ ಎಂದು ಕಂದಾಯ ನಿರೀಕ್ಷಕ ಆನಂದ್ ತಿಳಿಸಿದ್ದಾರೆ.

ಯಲವಟ್ಟಿಯಲ್ಲಿ ಭದ್ರಾ ಕಾಲುವೆ ನೀರು ತಗ್ಗು ಪ್ರದೇಶಗಳಿಗೆ ನುಗ್ಗಿದೆ ಎಂದು ಗ್ರಾಮದ ಶಂಕರಪ್ಪ ತಿಳಿಸಿದ್ದಾರೆ. ದೇವರಬೆಳಕೆರೆ ಪಿಕಪ್ ಡ್ಯಾಂಗೆ ಜಲ ಸಸ್ಯರಾಶಿ ಹರಿದು ಬರುತ್ತಿದ್ದು. ಜಲಾಶಯದ ನೀರು ಹೊರ ಹೋಗದ ಕಾರಣ ಹಿನ್ನೀರಿನಲ್ಲಿ ನೂರಾರು ಎಕರೆ ಭತ್ತದ ಬೆಳೆ ಜಲಾವೃತ ಆಗುವ ಆತಂಕದಲ್ಲಿ ಸಂಕ್ಲೀಪುರ ಮತ್ತಿತರೆ ಗ್ರಾಮಗಳ ರೈತರಿದ್ದಾರೆ.

**ತಹಶೀಲ್ದಾರ್ ಭೇಟಿ :-** ಗಾಳಿ-ಮಳೆಯಿಂದ ಹಾನಿಯಾದ ಸ್ಥಳಗಳಿಗೆ ಸೋಮವಾರ ತಹಶೀಲ್ದಾರ್ ಪೃಥ್ವಿ ಸ್ಥಾನಿಕರಿ ಭೇಟಿ ನೀಡಿ ಪರಿಶೀಲಿಸಿ ಹಾನಿ ಬಗ್ಗೆ ವರದಿ ನೀಡುವಂತೆ ಕಂದಾಯ ಹಾಗೂ ಕೃಷಿ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

# ಧಾರಾಕಾರ ಸುರಿದ ಮಳೆಗೆ ಭತ್ತದ ಬೆಳೆಗೆ ಹಾನಿ

ದಾವಣಗೆರೆ, ಮೇ 23- ಜಿಲ್ಲೆಯಲ್ಲಿ ಗುಡುಗು, ಸಿಡಿಲು ಹಾಗೂ ಬಿರುಗಾಳಿ ಸಹಿತ ಭಾನುವಾರ ರಾತ್ರಿ ಧಾರಾಕಾರವಾಗಿ ಸುರಿದ ಮಳೆಯಿಂದಾಗಿ ಕೊಯ್ಲಿಗೆ ಬಂದಿದ್ದ ಭತ್ತ ಕೈಗೆ ಸಿಗದಂತಾಗಿ ಅಪಾರ ನಷ್ಟ ಸಂಭವಿಸಿದೆ.

> **ವರದಿ ತಯಾರಿಸಲು ಮಾಯಕೊಂಡ ಶಾಸಕ ಕೆ.ಎಸ್. ಬಸವಂತಪ್ಪ ಅಧಿಕಾರಿಗಳಿಗೆ ಸೂಚನೆ**

ಮಾಯಕೊಂಡ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಕೊಲ್ಕುಂಟೆ, ತೊಗಲೇರಿ ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಲಕ್ಷಾಂತರ ರೂ. ಮೌಲ್ಯದ ಕೊಯ್ಲಿಗೆ ಬಂದ ಭತ್ತ ಬೆಳೆಯ ನಷ್ಟ ಸಂಭವಿಸಿದ್ದು, ಸುದ್ದಿ ತಿಳಿದ ಮಾಯಕೊಂಡ ಶಾಸಕ ಕೆ.ಎಸ್.ಬಸವಂತಪ್ಪ, ಅಧಿಕಾರಿಗಳಿಗೆ ಕೂಡಲೇ ಸ್ಥಳಕ್ಕೆ ಧಾವಿಸಿ, ನಷ್ಟವಾಗಿರುವ ಭತ್ತದ ಹಾನಿ ಬಗ್ಗೆ ವರದಿ ತಯಾರಿಸಿ ನಷ್ಟಕ್ಕೊಳಗಾದ ರೈತರಿಗೆ ಪರಿಹಾರ ಕೊಡಿಸಬೇಕೆಂದು ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಬೆಂಗಳೂರಿನ ವಿಧಾನಸೌಧದಲ್ಲಿ ಸೋಮವಾರ ಮೊದಲ ಅಧಿವೇಶನ ಮತ್ತು ಶಾಸಕರಿಗೆ ಪ್ರಮಾಣ ವಚನ ಸ್ವೀಕರಿಸುವ ಹಿನ್ನೆಲೆಯಲ್ಲಿ ಇಂದು ರೈತರನ್ನು ಭೇಟಿ ಮಾಡಲು ಆಗಿಲ್ಲ. ಆದರೂ ನಾನು ನಮ್ಮ ಕ್ಷೇತ್ರದ ರೈತಪರ ಕಾಳಜಿ ಹೊಂದಿರುವುದರಿಂದ ಸುದ್ದಿ ತಿಳಿದ ಕೂಡಲೇ ಸಂಬಂಧಪಟ್ಟ ಅಧಿಕಾರಿಗಳಿಗೆ ಹಾನಿಯಾಗಿರುವ ಭತ್ತದ ಬೆಳೆ ಹಾಗೂ ಅಂದಾಜು ನಷ್ಟವನ್ನು ತಯಾರಿಸಿ ರೈತರಿಗೆ ಪರಿಹಾರ ವಿತರಿಸಬೇಕೆಂದು ಸೂಚನೆ ನೀಡಿದ್ದೇನೆ. ಅಧಿವೇಶನ ಮುಗಿದ ಕೂಡಲೇ ಬೆಂಗಳೂರಿನಿಂದ ಕ್ಷೇತ್ರಕ್ಕೆ ಹಿಂದಿರುಗಿ ನಷ್ಟಕ್ಕೊಳಗಾಗಿರುವ ಗ್ರಾಮಗಳಿಗೆ ತೆರಳಿ ರೈತರ ಸಮಸ್ಯೆಗಳನ್ನು ಆಲಿಸುವ ಕೆಲಸ ಮಾಡುತ್ತೇನೆ ಎಂದು ಶಾಸಕ ಕೆ.ಎಸ್.ಬಸವಂತಪ್ಪ ರೈತರಿಗೆ ಧೈರ್ಯ ತುಂಬಿದ್ದಾರೆ.

## ವಿಧಾನಸಭಾಧ್ಯಕ್ಷರಾಗಿ ಖಾದರ್ ಆಯ್ಕೆ ಖಚಿತ

**(1ನೇ ಪುಟದಿಂದ)** ವೇಣುಗೋಪಾಲ್ ಹಾಗೂ ರಣದೀಪ್‌ಸಿಂಗ್ ಸುರ್ಜೇವಾಲಾ ಅವರು ಖಾದರ್ ಅವರನ್ನು ಸಂಪರ್ಕಿಸಿ ಈ ಸ್ಥಾನ ವಹಿಸಿಕೊಳ್ಳುವಂತೆ ಸಲಹೆ ಮಾಡಿದರು. ವರಿಷ್ಠರ ಸಲಹೆಯಂತೆ ಖಾದರ್, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಜತೆಗೂಡಿ ವಿಧಾನಸಭಾ ಕಾರ್ಯದರ್ಶಿ ಅವರಿಗೆ ನಾಮಪತ್ರ ಸಲ್ಲಿಸಿದರು.

# ಬೆಳ್ಳೂಡಿ ಗ್ರಾ.ಪಂ. ಉಪಾಧ್ಯಕ್ಷರಾಗಿ ವೀರೇಶ್ ಪೂಜಾರ್ ಆಯ್ಕೆ



ಮಲೇಬೆನ್ನೂರು, ಮೇ 23- ಬೆಳ್ಳೂಡಿ ಗ್ರಾ.ಪಂ ನೂತನ ಉಪಾಧ್ಯಕ್ಷರಾಗಿ ವೀರೇಶ್ ಪೂಜಾರ್ ಅವರು ಮಂಗಳವಾರ ನಡೆದ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ನೀರಾವರಿ ಇಲಾಖೆಯ ಎಇಇ ಶ್ರೀಧರ್ ಚುನಾವಣಾಧಿಕಾರಿಯಾಗಿ ಕಾರ್ಯನಿರ್ವಹಿಸಿದರು. ಈ ಸಂದರ್ಭದಲ್ಲಿ ಪಿಡಿಒ ಶಿವಪ್ಪ ಬಿರಾದಾರ್ ಹಾಗೂ ಗ್ರಾ.ಪಂ ಸರ್ವ ಸದಸ್ಯರು ಮತ್ತು ಸಿಬ್ಬಂದಿ ವರ್ಗದವರು ಹಾಜರಿದ್ದರು.

KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

# ನೋಟು ಬದಲಾವಣೆ : ಮೊದಲ ದಿನ ಕಂಡು ಬರದ ಒತ್ತಡ

## ವಹಿವಾಟಿನ ಮೇಲೆ ಯಾವುದೇ ಪರಿಣಾಮವಿಲ್ಲ, ಗುರುತಿನ ಚೀಟಿ ಬಗ್ಗೆ ಗೊಂದಲ

ನವದೆಹಲಿ, ಮೇ 23 – 2,000 ರೂ.ಗಳ ನೋಟುಗಳನ್ನು ಬದಲಿಸಿಕೊಳ್ಳಲು ರಿಸರ್ವ್ ಬ್ಯಾಂಕ್ ನೀಡಿರುವ 131 ದಿನಗಳ ಗಡುವು ಮಂಗಳವಾರದಿಂದ ಆರಂಭವಾಗಿದ್ದು, ಮೊದಲ ದಿನ ಬ್ಯಾಂಕುಗಳಲ್ಲಿ ಹೆಚ್ಚೇನೂ ಒತ್ತಡ ಕಂಡು ಬಂದಿಲ್ಲ.

2016ರಲ್ಲಿ 500 ರೂ. ಹಾಗೂ 1,000 ರೂ.ಗಳ ನೋಟುಗಳ ಅಮಾನ್ಯೀಕರಣವಾದಾಗ ಶೇ.86ರಷ್ಟು ನೋಟುಗಳನ್ನು ರಾತ್ರೋರಾತ್ರಿ ನಿಷೇಧಿಸಲಾಗಿತ್ತು. ಆದರೆ, ಈ ಬಾರಿ 2,000 ರೂ. ನೋಟುಗಳ ಬಳಕೆಗೆ ನಾಲ್ಕು ತಿಂಗಳ ಅವಕಾಶವಿದೆ. ಅಲ್ಲದೇ, ಈ ನೋಟುಗಳ ಬಳಕೆ ಪ್ರಮಾಣವೂ ಕಡಿಮೆ ಇದೆ.

ಈ ನೋಟುಗಳನ್ನು ಬ್ಯಾಂಕುಗಳಲ್ಲಿ ಜಮಾ ಮಾಡಲು ಯಾವುದೇ ಗುರುತಿನ ಚೀಟಿಯ ಅಗತ್ಯವಿಲ್ಲ ಎಂದು ರಿಸರ್ವ್ ಬ್ಯಾಂಕ್ ಹೇಳಿದೆ. ಆದರೂ, ಕೆಲವೆಡೆ ಬ್ಯಾಂಕುಗಳು ಗುರುತಿನ ಚೀಟಿ ಕೇಳಿದ ದೂರುಗಳು ಕೇಳಿ ಬಂದಿವೆ.

ಕೆಲ ಬ್ಯಾಂಕುಗಳು ಎಲೆಕ್ಟ್ರಾನಿಕ್ ಎಂಟ್ರಿ ಮೂಲಕ ನೋಟುಗಳ ವಿನಿಮಯ ಮಾಡಿವೆ. ಇನ್ನು ಕೆಲವು ಜನರ ಹೆಸರು ಹಾಗೂ ಮೊಬೈಲ್ ಸಂಖ್ಯೆ ಬರೆದುಕೊಂಡಿವೆ. ಇನ್ನು ಕೆಲವೆಡೆ ಪ್ಯಾನ್ ಇಲ್ಲವೇ ಆಧಾರ್ ಗುರುತು ಕೇಳಲಾಗಿದೆ.

ಕೆಲ ಬ್ಯಾಂಕುಗಳು ನೋಟುಗಳ ಬದಲಾವಣೆ ಮಾಡಿಕೊಂಡಿಲ್ಲ. ಇದರ ಬದಲು ಖಾತೆಗಳಲ್ಲಿ ಠೇವಣಿ ಇರಿಸುವಂತೆ ತಿಳಿಸಿವೆ ಎಂದು ಕೆಲ ಗ್ರಾಹಕರು ತಿಳಿಸಿದ್ದಾರೆ.

ಬ್ಯಾಂಕುಗಳಲ್ಲಿ ಗ್ರಾಹಕರ ಸರದಿ ಕಂಡು ಬಂದಿಲ್ಲವಾದರೂ, ಕೆಲ ಬ್ಯಾಂಕುಗಳ ನಿಯಮಗಳು ಸ್ಪಷ್ಟವಾಗಿಲ್ಲ ಎಂದು ಗ್ರಾಹಕರು ತಿಳಿಸಿದ್ದಾರೆ.

ಬರುವ ಸೆಪ್ಟೆಂಬರ್ 30ರ ಒಳಗೆ ನೋಟುಗಳನ್ನು ಬ್ಯಾಂಕುಗಳಲ್ಲಿ ವಿನಿಮಯ ಮಾಡಿಕೊಳ್ಳಲು ಇಲ್ಲವೇ ಠೇವಣಿ ಮಾಡಲು ರಿಸರ್ವ್ ಬ್ಯಾಂಕ್ ಗಡುವು ನೀಡಿದೆ. ಪ್ರಸಕ್ತ ದೇಶದಲ್ಲಿ 3.6 ಲಕ್ಷ ಕೋಟಿ ರೂ. ಮೌಲ್ಯದ 2,000 ರೂ. ನೋಟುಗಳು ಚಲಾವಣೆಯಲ್ಲಿವೆ ಎಂದು ಅಂದಾಜಿಸಲಾಗಿದೆ.

ನೋಟು ಅಮಾನ್ಯೀಕರಣದ ದಿನಗಳಿಗೆ ಹೋಲಿಸಿದರೆ, ಈಗ ಬದಲಿಸಿಕೊಳ್ಳಬೇಕಿರುವ ಹಣದ ಪ್ರಮಾಣ ಕಡಿಮೆ ಇದೆ. ಬದಲಿಸಿಕೊಳ್ಳುವ ಗಡುವೂ ಹೆಚ್ಚಾಗಿದೆ. ಅಲ್ಲದೇ, ಡಿಜಿಟಲ್ ಪಾವತಿಯ ಪ್ರಮಾಣವೂ ಗಣನೀಯವಾಗಿ ಹೆಚ್ಚಾಗಿದೆ. ಇತ್ತೀಚಿನ ದಿನಗಳಲ್ಲಿ 2,000 ರೂ.ಗಳ ನೋಟುಗಳ ಬಳಕೆ ಜನಸಾಮಾನ್ಯರಲ್ಲಿ ತೀರಾ ಕಡಿಮೆಯಾಗಿತ್ತು. ಇದೆಲ್ಲದರ ಕಾರಣದಿಂದಾಗಿ ಜನರಿಗೆ ಹೆಚ್ಚು ಸಮಸ್ಯೆಯಾಗಿಲ್ಲ.

ಖಾತೆದಾರರಲ್ಲದ ಗ್ರಾಹಕರು ವಿನಿಮಯ ಮಾಡಿಕೊಳ್ಳಲು ಬಂದಾಗ ಗುರುತಿನ ಚೀಟಿ ಕೇಳಲಾಗಿದೆ ಎಂದು ಕೋಟಕ್, ಹೆಚ್.ಎಸ್.ಬಿ.ಸಿ. ಬ್ಯಾಂಕುಗಳು ತಿಳಿಸಿವೆ. ಆದರೆ, ಆಕ್ಸಿಸ್ ಬ್ಯಾಂಕ್, ಸ್ಟ್ಯಾಂಡರ್ಡ್ ಚಾರ್ಟರ್ಡ್, ಎಸ್ ಬ್ಯಾಂಕ್, ಕೆನರಾ ಬ್ಯಾಂಕ್ ಹಾಗೂ ಬ್ಯಾಂಕ್ ಆಫ್ ಇಂಡಿಯಾಗಳು ಗುರುತಿನ ಚೀಟಿ ಕಡ್ಡಾಯಗೊಳಿಸಿಲ್ಲ.

ಶುಕ್ರವಾರ ರಿಸರ್ವ್ ಬ್ಯಾಂಕ್ ಹೊರಡಿಸಿರುವ ಮಾರ್ಗಸೂಚಿಯ ಪ್ರಕಾರ ಜನರು ಯಾವುದೇ ಫಾರಂ ಭರ್ತಿ ಮಾಡದೇ 20 ಸಾವಿರ ರೂ. ಮೊತ್ತದ ನೋಟುಗಳನ್ನು ವಿನಿಮಯ ಮಾಡಿಕೊಳ್ಳಬಹುದು. ಇದಕ್ಕಾಗಿ ಯಾವುದೇ ಗುರುತಿನ ಚೀಟಿ ಸಲ್ಲಿಸುವ ಅಗತ್ಯವಿಲ್ಲ.

### ಸರಕು ಸೇವೆಗಳಿಗೆ ಮೊಬೈಲ್ ಸಂಖ್ಯೆ ನೀಡಲು ಒತ್ತಾಯಿಸದಿರಿ



**ನವದೆಹಲಿ, ಮೇ 23 – ಗ್ರಾಹಕರು ಸರಕು ಸೇವೆಗಳಿಗೆ ಬಂದ ಸಂದರ್ಭದಲ್ಲಿ ಅವರ ಮೊಬೈಲ್ ಸಂಖ್ಯೆ ನೀಡುವಂತೆ ಒತ್ತಾಯಿಸಬಾರದು ಎಂದು ಕೇಂದ್ರ ಗ್ರಾಹಕರ ವ್ಯವಹಾರಗಳ ಸಚಿವಾಲಯ ಸೂಚನೆ ಹೊರಡಿಸಿದೆ.**

**ಮೊಬೈಲ್ ಸಂಖ್ಯೆ ನೀಡದೇ ಇದ್ದರೆ ಸರಕು ಸೇವೆ ಒದಗಿಸುವುದಿಲ್ಲ ಎಂದು ಚಿಲ್ಲರೆ ಮಾರಾಟ ಸಂಸ್ಥೆಗಳು ತಿಳಿಸಿರುವುದಾಗಿ ಹಲವಾರು ಗ್ರಾಹಕರು ದೂರು ನೀಡಿದ ನಂತರ ಈ ಸೂಚನೆ ನೀಡಲಾಗಿದೆ. ವೈಯಕ್ತಿಕ ಸಂಪರ್ಕ ಸಂಖ್ಯೆ ನೀಡುವವರೆಗೂ ಬಿಲ್ ಕೊಡಲು ಸಾಧ್ಯವಾಗದು ಎಂದು ಮಾರಾಟಗಾರರು ಹೇಳುತ್ತಿದ್ದಾರೆ. ಇದು ಅನುಚಿತ ಹಾಗೂ ನಿರ್ಬಂಧಿತ ವ್ಯಾಪಾರಿ ಪದ್ಧತಿಯಾಗಿದೆ. ಮಾಹಿತಿ ಸಂಗ್ರಹಿಸುವುದರ ಹಿಂದೆ ಯಾವುದೇ ತರ್ಕವಿಲ್ಲ ಎಂದು ಕೇಂದ್ರ ಗ್ರಾಹಕರ ವ್ಯವಹಾರಗಳ ಕಾರ್ಯದರ್ಶಿ ರೋಹಿತ್ ಕುಮಾರ್ ಸಿಂಗ್ ತಿಳಿಸಿದ್ದಾರೆ. ಇದರಲ್ಲಿ ಖಾಸಗಿತನದ ವಿಷಯವೂ ಇದೆ. ಹೀಗಾಗಿ ಚಿಲ್ಲರೆ ಮಾರಾಟ ವಲಯಗಳಿಗೆ ಗ್ರಾಹಕರ ಹಿತ ರಕ್ಷಿಸಲು ಸೂಚನೆ ನೀಡಲಾಗಿದೆ ಎಂದವರು ಹೇಳಿದರು.**

### ಜಿಲ್ಲೆಯಲ್ಲಿ ನೋಟು ವಿನಿಮಯ ನೀರಸ

**ದಾವಣಗೆರೆ, ಮೇ 23 – ಜಿಲ್ಲೆಯ ಸರ್ಕಾರಿ, ಖಾಸಗಿ ಹಾಗೂ ಸಹಕಾರಿ ಬ್ಯಾಂಕುಗಳಲ್ಲಿ 2,000 ರೂ.ಗಳ ನೋಟುಗಳ ವಿನಿಮಯಕ್ಕೆ ಯಾವುದೇ ಜನಸಂದಣಿ ಕಂಡು ಬಂದಿಲ್ಲ. ಬ್ಯಾಂಕ್ ಶಾಖೆಗಳಲ್ಲಿ ಸೀಮಿತವಾಗಿ ನೋಟುಗಳ ಬದಲಾವಣೆ ಹಾಗೂ ಠೇವಣಿ ನಡೆದಿದೆ ಎಂದು ಬ್ಯಾಂಕಿಂಗ್ ವಲಯದ ಮೂಲಗಳು ತಿಳಿಸಿವೆ. ಈ ಬಗ್ಗೆ ಪತ್ರಿಕೆಯೊಂದಿಗೆ ಮಾತನಾಡಿರುವ ಲೀಡ್ ಬ್ಯಾಂಕ್ ವಿಭಾಗೀಯ ಜಿ.ಜಿ. ದೊಡ್ಡಮನಿ, ಬ್ಯಾಂಕುಗಳ ಶಾಖೆಗಳಲ್ಲಿ ಯಾವುದೇ ಒತ್ತಡ ಬಂದಿಲ್ಲ. ಇಂದಷ್ಟೇ ವಿನಿಮಯ ಆರಂಭವಾಗಿದೆ. ನೋಟುಗಳ ಬದಲಾವಣೆಗೆ ಇನ್ನೂ ಕಾಲಾವಕಾಶ ಇದೆ ಎಂದು ತಿಳಿಸಿದ್ದಾರೆ.**

## ದೋರನಹಳ್ಳಿ ಹಿರೇಮಠಕ್ಕೆ ಉತ್ತರಾಧಿಕಾರಿ : ರಂಭಾಪುರಿ ಶ್ರೀ



ಹುಬ್ಬಳ್ಳಿ, ಮೇ 23- ಯಾದಗಿರಿ ಜಿಲ್ಲೆ ಶಹಪುರ ತಾಲ್ಲೂಕಿನ ಶ್ರೀಮದ್ ರಂಭಾಪುರಿ ಶಾಖಾ ದೋರನಹಳ್ಳಿ ಸಂಸ್ಥಾನ ಹಿರೇಮಠಕ್ಕೆ ಉಟಗಿ ಹಿರೇ ಮಠದ ಶಿವಪ್ರಸಾದ್ ಎಂಬ ವಟುವನ್ನು ನಿಯುಕ್ತಿಗೊಳಿಸಲಾಗಿದೆ ಎಂದು ಶ್ರೀ ರಂಭಾಪುರಿ ಡಾ.ವೀರಸೋಮೇಶ್ವರ ಜಗದ್ಗುರುಗಳು ಪ್ರಕಟಪಡಿಸಿದ್ದಾರೆ.

ಇಲ್ಲಿನ ವಿದ್ಯಾನಗರದ ಶ್ರೀ ರಂಭಾಪುರೀಶ ನಿವಾಸದಲ್ಲಿ ಇಂದು ಜರುಗಿದ ಉತ್ತರಾಧಿಕಾರಿ ನಿಯುಕ್ತಿ ಸಮಾರಂಭದಲ್ಲಿ ಪಾಲ್ಗೊಂಡು ಜಗದ್ಗುರುಗಳು ಆಶೀರ್ವಚನ ನೀಡಿದರು.

ದೋರನಹಳ್ಳಿ ಹಿರೇಮಠದ ಶ್ರೀ ವೀರ ಮಹಾಂತ ಶಿವಾಚಾರ್ಯರು ಅನಾರೋಗ್ಯದಿಂದ ಲಿಂಗೈಕ್ಯರಾಗಿದ್ದು, ತೆರವಾದ ಸ್ಥಾನಕ್ಕೆ ಶ್ರೀ ಜಗದ್ಗುರು ರಂಭಾಪುರಿ ಮಹಾಪೀಠದ ಗುರುಕುಲದಲ್ಲಿ ಸಂಸ್ಕೃತ ಸಾಹಿತ್ಯ, ವೇದಾ ವಿದ್ಯಾ ಪ್ರವೀಣ ಮತ್ತು ಮುಕ್ತ ವಿಶ್ವವಿದ್ಯಾಲಯದಿಂದ ಬಿ.ಕಾಂ. ಅಧ್ಯಯನ ಗೈದ ಸತ್ಕುಲ ಪ್ರಸೂತ ಶಿವಪ್ರಸಾದ್ ಎಂಬ ವಟುವನ್ನು ನಿಯುಕ್ತಿಗೊಳಿಸಿ, ಆದೇಶ ಪತ್ರವನ್ನು ಶ್ರೀ ರಂಭಾಪುರಿ ಜಗದ್ಗುರುಗಳು ಅನುಗ್ರಹಿಸಿದರು.

ಬರಲಿರುವ ಮಾಘ ಮಾಸದಲ್ಲಿ ಶ್ರೀ ಮಠದ ಜಾತ್ರಾ ಪೂರ್ವ ಸಮಾರಂಭದಲ್ಲಿ ನೂತನ ಶ್ರೀಗಳಿಗೆ 'ಶ್ರೀ ರೇಣುಕ ವೀರ ಮಹಾಂತೇಶ ಶಿವಾಚಾರ್ಯ ಸ್ವಾಮಿಗಳು' ಎಂಬ ಅಭಿದಾನದಿಂದ ಶ್ರೀ ಗುರು ಪಟ್ಟಾಧಿಕಾರ ನೆರವೇರಿಸಲಾಗುವುದೆಂದರು. ಚಿಕ್ಕಮಠದ ಶ್ರೀ ಶಿವಲಿಂಗ ರಾಜೇಂದ್ರ ಶಿವಾಚಾರ್ಯರು, ಸಂಗೊಳ್ಳಿ ಹಿರೇಮಠದ ಶ್ರೀ ಗುರುಲಿಂಗ ಶಿವಾಚಾರ್ಯರು ಮತ್ತು ನಿಂಗನಗೌಡ ಪೊಲೀಸ್ ಪಾಟೀಲ, ವೀರಭದ್ರಪ್ಪ ಗೌಡ ಪಸ್ಪೂಲ್, ದೇವೇಂದ್ರಪ್ಪಗೌಡ ಜೋಳದ, ಮಲ್ಲಿನಾಥಗೌಡ ಮಲಗೊಂಡ, ತಿಪ್ಪಣ್ಣ ಸಾಹು ಆಂದೇಲೆ ತಮ್ಮನಗೌಡ ಜೋಳದ, ಸಂಗಣ್ಣ ಗುಡಿ, ನಿಂಗಣ್ಣ ಮಲಗೊಂಡ ಸಮಾರಂಭದಲ್ಲಿ ಪಾಲ್ಗೊಂಡಿದ್ದರು.

# ಸಾರ್ವಜನಿಕ ಹೇಳಿಕೆ ನೀಡದಂತೆ ಎಚ್ಚರಿಕೆ

### ಅಧಿಕಾರ ಹಂಚಿಕೆ ಮಾತು ತಂದ ಬಿಸಿ

ಬೆಂಗಳೂರು, ಮೇ 23 - ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನಡುವಿನ ಅಧಿಕಾರ ಹಂಚಿಕೆಯ ಬಗ್ಗೆ ಸಚಿವ, ಪಕ್ಷದ ಶಾಸಕರು ಸಾರ್ವಜನಿಕವಾಗಿ ಹೇಳಿಕೆ ನೀಡಿದರೆ, ಅಂಥವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಾಗಿ ಕಾಂಗ್ರೆಸ್ ವರಿಷ್ಠರು ಎಚ್ಚರಿಕೆ ನೀಡಿದ್ದಾರೆ.

ಖಾತೆ ರಹಿತ ಸಚಿವ ಎಂ.ಬಿ.ಪಾಟೀಲ್ ನಿನ್ನೆ ಮೈಸೂರಿನಲ್ಲಿ ಮಾತನಾಡುತ್ತಾ, ಸಿದ್ದರಾಮಯ್ಯ ಅವರೇ ಮುಂದಿನ ಐದು ವರ್ಷಗಳ ಕಾಲ ಮುಖ್ಯಮಂತ್ರಿಯಾಗಿ ಕಾರ್ಯ ನಿರ್ವಹಿಸಲಿದ್ದಾರೆ ಎಂದು ನೀಡಿರುವ ಹೇಳಿಕೆ ಪಕ್ಷ ಮತ್ತು ಸರ್ಕಾರದಲ್ಲಿ ಭಾರೀ ವಿವಾದವನ್ನೇ ಎಬ್ಬಿಸಿದೆ.

ಸಚಿವರ ಹೇಳಿಕೆ ಬಗ್ಗೆ ಸ್ವತಃ ಶಿವಕುಮಾರ್ ಅವರೇ ಮುಖ್ಯಮಂತ್ರಿ ಬಳಿ ಮಾತನಾಡಿದ್ದಾರೆ. ದೆಹಲಿಯಲ್ಲಿ ನಡೆದಿರುವ ಮಾತುಕತೆಯ ಬಗ್ಗೆ ಯಾರೂ ಚಕಾರ ಎತ್ತಬಾರದು. ನಮ್ಮಿಬ್ಬರ ನಡುವೆ ಹುಳಿ ಹಿಂಡುವ ಕೆಲಸ ಆಗಬಾರದು ಎಂದಿದ್ದಾರೆ.

ಏನೇ ಇದ್ದರೂ ಮುಖಾಮುಖಿ ಚರ್ಚೆ ಮಾಡೋಣ. ಇಂತಹ ಹೇಳಿಕೆಗಳನ್ನು ನೀಡಬಾರದು ಎಂದು ನಿಮ್ಮವರಿಗೆ ಎಚ್ಚರಿಸಿ ಎಂದಿದ್ದಾರೆ.

ಇದರ ಬೆನ್ನಲ್ಲೇ ರಾಜ್ಯ ಉಸ್ತುವಾರಿ ಹೊಣೆ ಹೊತ್ತಿರುವ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರು, ಅಧಿಕಾರ ಹಂಚಿಕೆ ಸೂತ್ರದ ಬಗ್ಗೆ ಯಾರೂ ಚರ್ಚಿಸದಂತೆ ಖಡಕ್ ಎಚ್ಚರಿಕೆ ನೀಡಿದ್ದಾರೆ.

ನಟ ಶಿವರಾಜ್ ಕುಮಾರ್ ಅವರ ಮನೆಗೆ ಭೇಟಿ ನೀಡಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಸುರ್ಜೇವಾಲಾ, ಯಾರೂ ಅನಗತ್ಯ ಹೇಳಿಕೆ ನೀಡಬಾರದು. ಒಳ್ಳೆಯ ಆಡಳಿತ ನಡೆಸುವುದಷ್ಟೇ ನಮ್ಮ ಆದ್ಯತೆ. ಇದರ ಕಡೆಗೆ ಗಮನ ಕೊಡಿ. ಇದರ ಹೊರತಾಗಿ ಒಬ್ಬರನ್ನೊಬ್ಬರು ಎತ್ತಿಕಟ್ಟುವ ಕೆಲಸ ಮಾಡಬೇಡಿ ಎಂದಿದ್ದಾರೆ.

ಪಕ್ಷದ ಸಚಿವ, ಶಾಸಕರು ನೀಡುವ ಹೇಳಿಕೆಗಳನ್ನು ಎಐಸಿಸಿ ಗಮನಿಸುತ್ತದೆ. ಯಾವುದೇ ತೀರ್ಮಾನಗಳನ್ನು ಪಕ್ಷದ ಉನ್ನತ ಘಟಕವೇ ತೆಗೆದುಕೊಳ್ಳುತ್ತದೆ. ಇಂತಹ ಅಧಿಕಾರವನ್ನು ಯಾರ ಕೈಗೂ ನೀಡಿಲ್ಲ ಎಂದು ಖಾರವಾಗಿ ತಿಳಿಸಿದ್ದಾರೆ.

ಎಂ.ಬಿ.ಪಾಟೀಲ್ ಹೇಳಿಕೆ ಪಕ್ಷದಲ್ಲಿ ಆಂತರಿಕವಾಗಿ ಭಾರೀ ಚರ್ಚೆಗೆ ಗ್ರಾಸವಾಗಿರುವುದಲ್ಲದೆ, ಕೆಲವರು ಬಹಿರಂಗವಾಗಿ ಅವರ ಹೇಳಿಕೆ ಟೀಕಿಸಿದ್ದಾರೆ.

ಅದರಲ್ಲೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಹೋದರ ಸಂಸದ ಡಿ.ಕೆ.ಸುರೇಶ್ ಅವರು, ನಾನು ಎಂ.ಬಿ.ಪಾಟೀಲ್ ಅವರಿಗೆ ತೀಕ್ಷ್ಣವಾದ ಎಚ್ಚರಿಕೆ ಕೊಡಬಲ್ಲೆ. ಆದರೆ, ಈಗ ಅದು ಬೇಡ ಎಂದಿದ್ದಾರೆ. ಅವರ ಹೇಳಿಕೆ ಬಗ್ಗೆ ಹೆಚ್ಚಿನ ಮಾಹಿತಿ ಅಗತ್ಯವಿದ್ದರೆ, ಸುರ್ಜೇವಾಲಾ ಅವರನ್ನು ಕೇಳಲಿ. ಆನಂತರ ಹೇಳಿಕೆ ನೀಡಲಿ ಎಂದಿದ್ದಾರೆ.

ನಿನ್ನೆ ನೀಡಿದ ಹೇಳಿಕೆಯನ್ನು ಎಂ.ಬಿ.ಪಾಟೀಲ್ ಅವರು ಇಂದೂ ಸಮರ್ಥನೆ ಮಾಡಿಕೊಂಡಿದ್ದು, ಪಕ್ಷದ ವರಿಷ್ಠರು ಹೇಳಿರುವುದನ್ನೇ ನಾನು ಹೇಳಿದ್ದೇನೆ ಎಂದಿದ್ದಾರೆ.

ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಎಂದು ನಮ್ಮ ನಾಯಕರು ಹೇಳಿದ್ದಾರೆ. ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಪತ್ರಿಕಾ ಹೇಳಿಕೆಯಲ್ಲಿ ಹೇಳಿರುವುದನ್ನೇ ಹೇಳಿದ್ದೇನೆ ಎಂದು ತಿಳಿಸಿದರು.

ಅಧಿಕಾರ ಹಂಚಿಕೆ ಇಲ್ಲ. ಇದ್ದರೆ, ಜನರ ಜೊತೆ ಮಾತ್ರ ಎಂದು ವೇಣುಗೋಪಾಲ್ ಸ್ಪಷ್ಟವಾಗಿ ತಿಳಿಸಿದ್ದಾರೆ. ಅಧಿಕಾರ ಹಂಚಿಕೆಯ ಸಂಧಾನ ಸೂತ್ರ ನನಗೆ ಗೊತ್ತಿಲ್ಲ. ಅವರು ನೀಡಿದ ಹೇಳಿಕೆಯನ್ನಷ್ಟೇ ಪುನರುಚ್ಚರಿಸಿದ್ದಾರೆ ಎಂದು ಅವರು ಹೇಳಿದ್ದಾರೆ.

ಡಿ.ಕೆ.ಶಿವಕುಮಾರ್ ಮಾತನಾಡಿ, ಯಾರಾದರೂ ಏನು ಬೇಕಾದರೂ ಹೇಳಿಕೊಳ್ಳಲಿ. ನಾನು ಆ ಬಗ್ಗೆ ಏನೂ ಮಾತಾಡುವುದಿಲ್ಲ. ಅಧಿಕಾರ ಮತ್ತಿತರೆ ಪಕ್ಷದ ವಿಚಾರಗಳನ್ನು ನೋಡಿಕೊಳ್ಳಲು ಎಐಸಿಸಿ ಇದೆ. ಕಾಂಗ್ರೆಸ್ ರಾಷ್ಟ್ರೀಯ ಮುಖಂಡರು ಇದ್ದಾರೆ. ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಮಾತ್ರ ನಮ್ಮ ಆದ್ಯತೆ ಎಂದು ತಿಳಿಸಿದ್ದಾರೆ.

ಸಿದ್ದರಾಮಯ್ಯ ಅವರೇ ಮುಂದಿನ ಐದು ವರ್ಷವೂ ಮುಖ್ಯಮಂತ್ರಿಯಾಗಿ ಮುಂದುವರೆಯಲಿದ್ದಾರೆ, ಸಿಎಂ ಅಧಿಕಾರ ಹಂಚಿಕೆ ಪ್ರಶ್ನೆಯೇ ಇಲ್ಲ. ಈ ಬಗ್ಗೆ ಯಾವುದೇ ಚರ್ಚೆ ಆಗಿಲ್ಲ ಎಂದು ಸಚಿವ ಎಂ.ಬಿ. ಪಾಟೀಲ್ ಹೇಳಿದ್ದಾರಲ್ಲ ಎಂದು ವಿಧಾನಸೌಧದ ಬಳಿ ಮಾಧ್ಯಮದವರು ಗಮನ ಸೆಳೆದಾಗ ಶಿವಕುಮಾರ್ ಅವರು ಈ ರೀತಿ ಪ್ರತಿಕ್ರಿಯಿಸಿದರು.

# ರಾಣೇಬೆನ್ನೂರು: ವಿಮೆ ಹಣ ಸಾಲದ ಖಾತೆಗೆ ಬ್ಯಾಂಕ್ ಕ್ರಮ ವಿರೋಧಿಸಿ 26ಕ್ಕೆ ಹೆದ್ದಾರಿ ಬಂದ್



### ರೈತ ಮುಖಂಡರಾದ ರವೀಂದ್ರಗೌಡ ಪಾಟೀಲ, ಈರಣ್ಣ ಹಲಗೇರಿ ಎಚ್ಚರಿಕೆ

ರಾಣೇಬೆನ್ನೂರು, ಮೇ 23- ರೈತರ ಖಾತೆಗೆ ಜಮಾ ಆಗಿರುವ ಬೆಳೆವಿಮೆ ಹಣದ ಜೊತೆಗೆ ವಿಧವಾ ವೇತನ, ಪಿಂಚಣಿ, ಮಾಸಾಶನ ಉದ್ಯೋಗ ಖಾತ್ರಿಯಂತಹ ವಿವಿಧ ಯೋಜನೆಗಳ ಹಣವನ್ನು ರೈತರು ಡ್ರಾ ಮಾಡಿಕೊಳ್ಳದಂತೆ 'ಲಾಕ್' ಮಾಡಿಕೊಂಡಿರುವ ಬ್ಯಾಂಕಿನವರ ಕ್ರಮ ಖಂಡಿಸಿ ಇದೇ ದಿನಾಂಕ 26ರ ಶುಕ್ರವಾರ ಬೆಳಗ್ಗೆ 10 ಘಂಟೆಗೆ ಮಾಕನೂರು ಕ್ರಾಸ್ ಹತ್ತಿರ ಹೆದ್ದಾರಿ ತಡೆ ಮಾಡಿ ಏಕಕಾಲಕ್ಕೆ ತಾಲ್ಲೂಕಿನ ಎಲ್ಲಾ ಬ್ಯಾಂಕ್‌ಗಳಿಗೆ ಮುತ್ತಿಗೆ ಹಾಕಿ ಪ್ರತಿಭಟಿಸಲಾಗುವುದೆಂದು ರೈತ ಮುಖಂಡರಾದ ರವೀಂದ್ರಗೌಡ ಎಫ್. ಪಾಟೀಲ, ಜಿಲ್ಲಾಧ್ಯಕ್ಷ ಈರಣ್ಣ ಹಲಗೇರಿ ಎಚ್ಚರಿಕೆ ನೀಡಿದ್ದಾರೆ.

ಹಾವೇರಿಯಲ್ಲಿ ಜಿಲ್ಲಾಧಿಕಾರಿ ರಘುನಂದನಮೂರ್ತಿ ಮತ್ತು ಜಿಲ್ಲಾ ಲೀಡ್ ಬ್ಯಾಂಕ್ ವ್ಯವಸ್ಥಾಪಕ ಅಣ್ಣಯ್ಯ ಇವರಿಗೆ ನೊಂದ ರೈತರ ಪರವಾಗಿ ಮನವಿ ಸಲ್ಲಿಸಿ ಮಾತನಾಡಿದ ಅವರು ರೈತರ, ಕೃಷಿ ಕಾರ್ಮಿಕರ ಸಂಕಷ್ಟಕ್ಕೆ ಅನುಕೂಲವಾಗಲೆಂದೇ ಇರುವ ಬೆಳೆ ವಿಮೆ ಉದ್ಯೋಗ ಖಾತ್ರಿ, ಬೆಳೆ ಪರಿಹಾರ ಮತ್ತು ಸರ್ಕಾರದ ಪಿಂಚಣಿ ಯೋಜನೆಗಳಾದ ಸಂಧ್ಯಾ ಸುರಕ್ಷಾ, ವಿಧವಾ ವೇತನದಂತಹ ಯೋಜನೆಗಳಲ್ಲಿ ಜಮಾ ಆಗುತ್ತಿರುವ ಹಣವನ್ನು ರೈತರ ಸಾಲದ ಖಾತೆಗೆ ಜಮಾ ಮಾಡಿಕೊಂಡಿರುತ್ತಾರೆ.

ಅತಿವೃಷ್ಟಿ, ಬೆಲೆ ಏರಿಕೆ, ಕೊರೊನಾ, ಲಾಕ್‌ಡೌನ್‌ನಿಂದ ಆರ್ಥಿಕವಾಗಿ ಬಳಲಿ ಬೆಂಡಾಗಿರುವ ರೈತ ಸಮುದಾಯಕ್ಕೆ ಬ್ಯಾಂಕಿನವರ ಈ ವರ್ತನೆ ಗಾಯದ ಮೇಲೆ ಬರೆ ಎಳೆದಂತಾಗಿದೆ. ಮಳೆಗಾಲದ ಬಿತ್ತನೆಯ ಈ ಸಂದರ್ಭದಲ್ಲಿ ರೈತರಿಗೆ ಈ ಯೋಜನೆಗಳಿಂದ ಬರುವ ಹಣವೇ ಬೀಜ, ರಸಗೊಬ್ಬರಕ್ಕೆ ಆಧಾರ.

ಕಳೆದ 15 ದಿನಗಳಿಂದ ರೈತರ ಖಾತೆಗೆ ಜಮಾ ಆಗಿರುವ ಬೆಳೆ ವಿಮೆ ಯೋಜನೆಯ ಹಣವನ್ನು ಬ್ಯಾಂಕಿನವರು 'ಲಾಕ್' ಮಾಡಿ ರೈತರಿಗೆ ತೊಂದರೆ ಕೊಡುತ್ತಿದ್ದಾರೆ. ಈ ಹಣವನ್ನೇ ನಂಬಿದ ರೈತರು ಜಿಗುಪ್ಸೆಗೊಂಡಿದ್ದಾರೆ. ರೈತ ಆತ್ಮಹತ್ಯಾ ಪ್ರಕರಣಗಳು ಹೆಚ್ಚಾಗಲಿಕ್ಕೆ ಇಂತಹ ಘಟನೆಗಳು ಕೂಡಾ ಕಾರಣಗಳಾಗಿವೆ. ರಾಜ್ಯದಲ್ಲಿ ರೈತ ಆತ್ಮಹತ್ಯಾ ಪ್ರಕರಣಗಳು ಹಾವೇರಿ ಜಿಲ್ಲೆಯಲ್ಲಿಯೇ ಅತೀ ಹೆಚ್ಚು ಆಗಲಿಕ್ಕೆ ಜಿಲ್ಲಾಡಳಿತ ರೈತರ ಬಗ್ಗೆ ತಾಳಿರುವ ನಿರ್ಲಕ್ಷ್ಯವೂ ಕೂಡಾ ಕಾರಣವಾಗಿದೆ ಎಂದರು.

ಈ ಸಂದರ್ಭದಲ್ಲಿ ರೈತ ಮುಖಂಡರಾದ ಹರಿಹರ ಗೌಡ ಪಾಟೀಲ, ದಿನೇಶ ಪಾಟೀಲ, ಭೀಮಣ್ಣ ಓಲೇಕಾರ, ಯಲ್ಲಪ್ಪ ಡಿ. ಓಲೇಕಾರ, ಜಮಾಲಸಾಬ್ ಶೇತ ಸನದಿ, ಶಿವರಾಜ ಎಚ್. ಎಂ. ಭಾಗವಹಿಸಿದ್ದರು.

## ಬೆಳೆ ಹಾನಿ ವೀಕ್ಷಿಸಿದ ಜಿಲ್ಲಾಧಿಕಾರಿ ಶಿವಾನಂದ ಕಾಪಶಿ



ದಾವಣಗೆರೆ, ಮೇ 23- ಭಾನುವಾರ ಸುರಿದ ಮಳೆಯಿಂದಾಗಿ ಜಿಲ್ಲೆಯಲ್ಲಿ ಹಾನಿಗೀಡಾದ ಬೆಳೆಯನ್ನು ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ಹಾಗೂ ಜಂಟಿ ಕೃಷಿ ನಿರ್ದೇಶಕ ಶ್ರೀನಿವಾಸ್ ಚಿಂತಾಲ್ ವೀಕ್ಷಿಸಿದರು.

ತಾಲ್ಲೂಕಿನ ಚಿಕ್ಕತೊಗಲೇರಿ ಮತ್ತು ಹಿರೇತೊಗಲೇರಿ ಗ್ರಾಮದಲ್ಲಿ ಮಳೆಯಿಂದ ಹಾನಿಯಾದ ಭತ್ತದ ಬೆಳೆಯನ್ನು ವೀಕ್ಷಿಸಿ ರೈತರ ಅಳಲನ್ನು ಆಲಿಸಲಾಯಿತು. ಈ ವೇಳೆ ತಹಶೀಲ್ದಾರ್ ಅಶ್ವತ್ಥ್, ಸಹಾಯಕ ನಿರ್ದೇಶಕ ಕೃಷಿ ಶ್ರೀಧರ್ ಮೂರ್ತಿ ಇತರರು ಉಪಸ್ಥಿತರಿದ್ದರು.

## 2,000 ನೋಟು ರದ್ದುಗೊಳಿಸಿಲ್ಲ, ಶಾಸನಾತ್ಮಕ ಪ್ರಕ್ರಿಯೆ : ಹೈಕೋರ್ಟ್‌ನಲ್ಲಿ ಆರ್.ಬಿ.ಐ. ಅರ್ಜಿ

ನವದೆಹಲಿ, ಮೇ 23 - 2,000 ರೂ. ನೋಟುಗಳನ್ನು ರದ್ದುಗೊಳಿಸಿಲ್ಲ, ಕೇವಲ ವಾಪಸ್ ಪಡೆಯಲಾಗಿದೆ. ಇದು ಶಾಸನಾತ್ಮಕ ಕಸರತ್ತು ಎಂದು ದೆಹಲಿ ಹೈಕೋರ್ಟ್ ಎದುರು ಆರ್.ಬಿ.ಐ. ಅರ್ಜಿ ದಾಖಲಿಸಿದೆ.

ವಕೀಲ ಅಶ್ವಿನಿ ಕುಮಾರ್ ಉಪಾಧ್ಯಾಯ್ ಅವರು ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿ, ಯಾವುದೇ ದಾಖಲಾತಿ ಒದಗಿಸದೇ 2,000 ರೂ. ನೋಟುಗಳ ವಿನಿಮಯಕ್ಕೆ ಅವಕಾಶ ನೀಡಲಾಗಿದೆ. ಇದು ಭ್ರಷ್ಟಾಚಾರ ತಡೆ ಕಾಯ್ದೆಗೆ ವಿರುದ್ಧವಾಗಿದೆ ಎಂದು ಹೇಳಿದ್ದರು.

ಈ ಬಗ್ಗೆ ವಿಚಾರಣೆ ನಡೆಸುತ್ತಿರುವ ಮುಖ್ಯ ನ್ಯಾಯಮೂರ್ತಿ ಸತೀಶ್ ಚಂದ್ರ ಶರ್ಮ ಹಾಗೂ ನ್ಯಾಯಮೂರ್ತಿ ಸುಬ್ರಮಣ್ಯಂ ಪ್ರಸಾದ್ ಅವರನ್ನು ಒಳಗೊಂಡ ಪೀಠದ ಎದುರು ರಿಸರ್ವ್ ಬ್ಯಾಂಕ್ ತನ್ನ ಉತ್ತರ ದಾಖಲಿಸಿದೆ.

ಆರ್.ಬಿ.ಐ. ಪರ ಹಾಜರಿದ್ದ ಹಿರಿಯ ವಕೀಲ ಪರಾಗ್ ಪಿ. ತ್ರಿಪಾಠಿ, ಈ ವಿಷಯಗಳಲ್ಲಿ ನ್ಯಾಯಾಲಯ ಮಧ್ಯ ಪ್ರವೇಶಿಸಲಾಗದು. ಕಾರ್ಯನಿರ್ವಹಣೆ ಅನುಕೂಲಕ್ಕಾಗಿ 2,000 ರೂ. ನೋಟುಗಳನ್ನು ವಿನಿಮಯ ಮಾಡಿಕೊಳ್ಳಲಾಗುತ್ತಿದೆ ಎಂದರು. ಇದು ನೋಟು ಅಮಾನ್ಯೀಕರಣವಲ್ಲ. 2,000 ರೂ. ನೋಟುಗಳನ್ನು ಸಾಮಾನ್ಯವಾಗಿ ಬಳಸುವುದಿಲ್ಲ. ಇತರೆ ನೋಟುಗಳು ಸಾಕಷ್ಟು ಪ್ರಮಾಣದಲ್ಲಿ ಲಭ್ಯವಿವೆ ಎಂದರು. ಇದು ಶಾಸನಾತ್ಮಕ ಪ್ರಕ್ರಿಯೆಯಾಗಿದೆ. ಅರ್ಜಿದಾರರು ಹೇಳಿರುವ ರೀತಿಯಲ್ಲಿ ಲೋಪವಾಗಿಲ್ಲ, ಇದು ಸಂವಿಧಾನಿಕ ವಿಷಯವೂ ಅಲ್ಲ ಎಂದು ತ್ರಿಪಾಠಿ ಹೇಳಿದರು.

ಅರ್ಜಿದಾರ ಉಪಾಧ್ಯಾಯ್ ಅವರು ರಿಸರ್ವ್ ಬ್ಯಾಂಕ್‌ನ ಕ್ರಮವನ್ನು ತಮ್ಮ ಅರ್ಜಿಯಲ್ಲಿ ಪ್ರಶ್ನಿಸುತ್ತಾ, ವ್ಯಕ್ತಿಗಳು ಲಾಕರ್‌ಗಳಲ್ಲಿ ಹಣ ಇರಿಸಿದ್ದಾರೆ. ಪ್ರತ್ಯೇಕತಾವಾದಿಗಳು, ಉಗ್ರರು, ಮಾವೋಗಳು, ಮಾದಕ ಕಳ್ಳ ಸಾಗಣೆದಾರರು, ಗಣಿ ಮಾಫಿಯಾ ಹಾಗೂ ಭ್ರಷ್ಟರು ದೊಡ್ಡ ಪ್ರಮಾಣದಲ್ಲಿ ನಗದು ಹೊಂದಿದ್ದಾರೆ ಎಂದರು.

ಅತಿ ಹೆಚ್ಚಿನ ಪ್ರಮಾಣದ ನಗದು ವಹಿವಾಟೇ ಭ್ರಷ್ಟಾಚಾರಕ್ಕೆ ಕಾರಣವಾಗಿದೆ. ಈ ಹಣವನ್ನು ಉಗ್ರವಾದ, ನಕ್ಸಲ್‌ವಾದ, ಪ್ರತ್ಯೇಕತಾವಾದ, ಮತ್ತಿತರೆ ಚಟುವಟಿಕೆಗಳಿಗೆ ಬಳಸಲಾಗುತ್ತಿದೆ. ರಿಸರ್ವ್ ಬ್ಯಾಂಕ್ 2,000 ರೂ.ಗಳ ನೋಟುಗಳನ್ನು ಬ್ಯಾಂಕ್ ಖಾತೆಗಳಿಗೆ ಮಾತ್ರ ಜಮಾ ಮಾಡುವಂತೆ ಆದೇಶಿಸಬೇಕು ಎಂದು ಕೋರಿದರು.

## ಸಾರ್ವಜನಿಕ ಸ್ಥಳದ ವೇಶ್ಯಾವಾಟಿಕೆ ಮಾತ್ರ ಕಾನೂನು ಬಾಹಿರ : ಮುಂಬೈ ಕೋರ್ಟ್

ಮುಂಬೈ, ಮೇ 23 - ಸಾರ್ವಜನಿಕ ಸ್ಥಳದಲ್ಲಿ ವೇಶ್ಯಾವಾಟಿಕೆ ನಡೆಸಿ ಜನರಿಗೆ ತೊಂದರೆಯಾದರೆ ಮಾತ್ರ ಅದು ಕಾನೂನು ಬಾಹಿರ ಎಂದು ಮುಂಬೈ ನ್ಯಾಯಾಲಯವೊಂದು ತೀರ್ಪು ನೀಡಿದೆ.

34 ವರ್ಷದ ಮಹಿಳೆಯೊಬ್ಬರು ವೇಶ್ಯಾವಾಟಿಕೆಯಲ್ಲಿ ತೊಡಗಿದ್ದ ಹಿನ್ನೆಲೆಯಲ್ಲಿ ಅವರನ್ನು ವಶಕ್ಕೆ ತೆಗೆದುಕೊಂಡು ಆಶ್ರಯ ತಾಣದಲ್ಲಿ ಇರಿಸಲಾಗಿತ್ತು. ಕಳೆದ ಮಾರ್ಚ್ 15ರಂದು ಹೆಚ್ಚುವರಿ ಸೆಷನ್ಸ್ ನ್ಯಾಯಾಲಯದ ಮೊರೆ ಹೋಗಿದ್ದ ಮಹಿಳೆ, ಆಶ್ರಯ ಕೇಂದ್ರದಿಂದ ತಮ್ಮನ್ನು ಬಿಡುಗಡೆ ಮಾಡುವಂತೆ ಕೋರಿದ್ದರು.

ಈ ಬಗ್ಗೆ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸಿ.ವಿ. ಪಾಟೀಲ್, ಮಹಿಳೆಯ ಬಿಡುಗಡೆಗೆ ಆದೇಶಿಸಿದ್ದಾರೆ.

ಕಳೆದ ಫೆಬ್ರವರಿಯಲ್ಲಿ ಮುಂಬೈನ ಹೊರ ವಲಯದ ಮುಲುಂದ್ ಎಂಬಲ್ಲಿ ನಡೆಸಲಾದ ದಾಳಿಯಲ್ಲಿ ಮಹಿಳೆಯನ್ನು ವಶಕ್ಕೆ ತೆಗೆದುಕೊಳ್ಳಲಾಗಿತ್ತು. ನಂತರ ಮಹಿಳೆ ಸೇರಿದಂತೆ ಮೂವರ ವಿರುದ್ಧ ಪ್ರಕರಣ ದಾಖಲಿಸಲಾಗಿತ್ತು.

ವಿಚಾರಣೆ ನಡೆಸಿದ ಮ್ಯಾಜಿಸ್ಟ್ರೇಟ್ ನ್ಯಾಯಾಲಯ, ಮಹಿಳೆ ತಪ್ಪೆಸಗಿದ್ದಾರೆ. ಒಂದು ವರ್ಷ ಕಾಲ ಅವರನ್ನು ಆಶ್ರಯ ತಾಣದಲ್ಲಿ ಇರಿಸಬೇಕು ಎಂದು ತಿಳಿಸಿತ್ತು.

ನಂತರ ಸೆಷನ್ಸ್ ನ್ಯಾಯಾಲಯದಲ್ಲಿ ಅರ್ಜಿ ದಾಖಲಿಸಿದ್ದ ಮಹಿಳೆ, ನಾನು ಯಾವುದೇ ಅನೈತಿಕ ಚಟುವಟಿಕೆ ನಡೆಸಿಲ್ಲ ಎಂದು ಹೇಳಿದ್ದರು.

ಈ ಬಗ್ಗೆ ವಿಚಾರಣೆ ನಡೆಸಿದ ನ್ಯಾಯಾಲಯ, ಲೈಂಗಿಕ ಚಟುವಟಿಕೆ ನಡೆಸುವುದೇ ಅಪರಾಧವಲ್ಲ. ಆದರೆ, ಸಾರ್ವಜನಿಕ ಸ್ಥಳದಲ್ಲಿ ಇತರರಿಗೆ ಕಿರಿಕಿರಿಯಾಗುವ ರೀತಿಯಲ್ಲಿ ಲೈಂಗಿಕ ಚಟುವಟಿಕೆ ನಡೆಸುವುದು ಅಪರಾಧ ಎಂದು ತಿಳಿಸಿದೆ. ಮಹಿಳೆ ಸಾರ್ವಜನಿಕ ಸ್ಥಳದಲ್ಲಿ ಲೈಂಗಿಕ ಚಟುವಟಿಕೆ ನಡೆಸಿದ ಆರೋಪವಿಲ್ಲ. ಮಹಿಳೆಗೆ ಇಬ್ಬರು ಮಕ್ಕಳಿದ್ದಾರೆ. ಮಕ್ಕಳಿಗೆ ತಾಯಿಯ ಅಗತ್ಯವಿದೆ ಎಂಬುದನ್ನೂ ಪರಿಗಣಿಸಬೇಕಿದೆ ಎಂದು ನ್ಯಾಯಾಲಯ ತಿಳಿಸಿದೆ.


**ಶ್ರೀ ಸಾಮಾನ್ಯ ನೌಕರರ ಹೌಸಿಂಗ್ ಕೋ-ಆಪರೇಟಿವ್ ಸೊಸೈಟಿ ನಿ.**

#496/66, ಮಳಿಗೆ ಸಂಖ್ಯೆ : 03, ಸಂಕೋಳ್ ಪ್ಲಾಜಾ, ನಾಗನೂರು ರಸ್ತೆ, ಶಾಮನೂರು, ದಾವಣಗೆರೆ.

Email Id : ssehcsdvg2017@gmail.com

ಕ್ರ.ಸಂ.1/ಪತ್ರಿಕಾಪ್ರಕಟಣೆ/01/2023-24 ದಿನಾಂಕ : 23.05.2023

**ಪ್ರಕಟಣೆ**

ಶ್ರೀ ಸಾಮಾನ್ಯ ನೌಕರರ ಹೌಸಿಂಗ್ ಕೋ-ಆಪರೇಟಿವ್ ಸೊಸೈಟಿ ನಿ, ದಾವಣಗೆರೆ ಸಂಸ್ಥೆಯು ಸರ್ಕಾರದ ಮಾನ್ಯತೆ ಪಡೆದು 725 ಷೇರುದಾರರುಗಳ ಸಹಕಾರ ಹಾಗು ಪ್ರೋತ್ಸಾಹದೊಂದಿಗೆ ಎರಡು ಲೇಔಟ್‌ಗಳನ್ನು ಯಶಸ್ವಿಯಾಗಿ ಕೈಗೊಳ್ಳಲಾಗಿರುವ ಅಂಶ ತಮಗೆಲ್ಲಾ ತಿಳಿದಿದ್ದೇ ಆಗಿದೆ.

ಪ್ರಸ್ತುತ 5ನೇ ಸಂವತ್ಸರಕ್ಕೆ ಕಾಲಿಡುತ್ತಿರುವ ಈ ಸುಸಂದರ್ಭದಲ್ಲಿ ದಿನಾಂಕ 25.9.2022ರಂದು ನಡೆದ 5ನೇ ವರ್ಷದ ಸರ್ವ ಸದಸ್ಯರ ಮಹಾಸಭೆಯಲ್ಲಿ ಸೊಸೈಟಿಯ ವತಿಯಿಂದ ಹರಿಹರ ನಗರದ ಹೃದಯ ಭಾಗದಲ್ಲಿ ಎಲ್ಲಾ ಮೂಲ ಸೌಕರ್ಯಗಳೊಂದಿಗೆ ಹೊಸ ಬಡಾವಣೆಯು ಮೆ:ಅಂಜನಾದ್ರಿ ಅಸೋಸಿಯೇಟ್ಸ್ ದಾವಣಗೆರೆ ಇವರ ವತಿಯಿಂದ ಅಭಿವೃದ್ಧಿಪಡಿಸಲಾಗುತ್ತಿರುವ ಬಡಾವಣೆಯಲ್ಲಿನ ನಿವೇಶನಗಳನ್ನು ಸರಳ ಕಂತುಗಳ ಆಧಾರದ ಮೇಲೆ ಷೇರುದಾರರಿಗೆ ಮಾರಾಟ ಮಾಡಲಾಗುವುದು. ಆಸಕ್ತ ಷೇರುದಾರರು ಸೊಸೈಟಿಯ ಸಮಯದಲ್ಲಿ ನಿವೇಶನಕ್ಕಾಗಿ ಅರ್ಜಿ ಪಡೆಯಲು ತಿಳಿಸಿದೆ.

**ನಿವೇಶನಕ್ಕಾಗಿ ಅರ್ಜಿ ಪಡೆಯಲು ಕೊನೆಯ ದಿನಾಂಕ 31.5.2023**

**ಪಡೆದ ಅರ್ಜಿಯನ್ನು ಭರ್ತಿ ಮಾಡಿ ಹಿಂದಿರುಗಿಸಲು ಕೊನೆಯ ದಿನಾಂಕ 15.6.2023**

***ಮೊದಲು ನಿವೇಶನಕ್ಕೆ ಅರ್ಜಿ ಸಲ್ಲಿಸಿದವರಿಗೆ ಮೊದಲ ಆದ್ಯತೆ ಇರುತ್ತದೆ.***

**ಉದ್ದೇಶಿತ ಬಡಾವಣೆಯ ವಿಳಾಸ :** ಹರಿಹರೇಶ್ವರ ಲೇಔಟ್, ವಿದ್ಯಾನಗರದ ಮುಂಭಾಗ, ಸಿದ್ದೇಶ್ವರ ಪ್ಯಾಲೇಸ್ ಸಮುದಾಯ ಭವನದ ಹಿಂಭಾಗ ಮಹಜೇನಹಳ್ಳಿ ಸರ್ವೆ ನಂಬರ್ : 92ರಲ್ಲಿ

**ಸಂಪರ್ಕ ಸಂಖ್ಯೆ : 76763 04095 /96115 30675 / 94818 68989 / 74838 27369 / 95918 28831 / 98458 79102**

ತಮ್ಮ ವಿಶ್ವಾಸಿ
ಕಾರ್ಯದರ್ಶಿ
ಶ್ರೀ ಸಾಮಾನ್ಯ ನೌಕರರ ಹೌ-ಕೋ.ಆಪರೇಟಿವ್ ಸೊಸೈಟಿ (ನಿ) ದಾವಣಗೆರೆ.



**ANMOL PUBLIC SCHOOL**
**ANMOL SCIENCE PU COLLEGE**
SHIRAMAGONDANAHALLI, DAVANGERE-5.

**WANTED**

| POSITION | QUALIFICATION |
| --- | --- |
| TGT Hindi | BA., B.Ed., |
| TGT Social Science | BA., B.Ed., |
| TGT Computer Science | Any Degree |
| Physical Education (PE) | B.P.Ed.,/M.P.Ed., |

mail. : Jobs@anmoleducation.com +91 7625078002
web. : www.anmoleducation.com + 91 9980819660



ಶ್ರೀ ಅಕ್ಕಮಹಾದೇವಿ ಸಮಾಜ (ರಿ.)

**ಶ್ರೀ ಅಕ್ಕಮಹಾದೇವಿ ಸಹಾಯ ನಿಧಿ**

ಶ್ರೀ ಅಕ್ಕಮಹಾದೇವಿ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ-2.

**ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ**

ಶ್ರೀ ಅಕ್ಕಮಹಾದೇವಿ ಸಮಾಜದ ಶ್ರೀ ಅಕ್ಕಮಹಾದೇವಿ ಸಹಾಯ ನಿಧಿ ಉಪ ಸಮಿತಿ ವತಿಯಿಂದ 2022-23ನೇ ಶೈಕ್ಷಣಿಕ ವರ್ಷದಲ್ಲಿ ಅತಿ ಹೆಚ್ಚು ಅಂಕ ಪಡೆದ SSLC ಹಾಗೂ ದ್ವಿತೀಯ ವರ್ಷದ PUCಯಲ್ಲಿ ಉತ್ತಮ ದರ್ಜೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಪಡೆಯಲು ಅರ್ಹ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಗ್ರಾಮೀಣ ಭಾಗದ ವಿದ್ಯಾರ್ಥಿಗಳು SSLC ಯಲ್ಲಿ ಶೇಕಡ 85 ರಷ್ಟು ಹಾಗೂ ದ್ವಿತೀಯ ವರ್ಷದ ಪದವಿ ಪೂರ್ವ ತರಗತಿಯಲ್ಲಿ ಶೇಕಡ 90ರಷ್ಟು ಅಂಕ ಪಡೆದವರು ಹಾಗೂ ನಗರ ಪ್ರದೇಶದ ಸರ್ಕಾರಿ ಶಾಲೆಯಲ್ಲಿ ಶೇಕಡ 85 ರಷ್ಟು SSLCಯಲ್ಲಿ, ಶೇಕಡ 90ರಷ್ಟು PUCಯಲ್ಲಿ ಅಂಕ ಪಡೆದು ಉತ್ತೀರ್ಣರಾದ ಆರ್ಥಿಕವಾಗಿ ಹಿಂದುಳಿದವರಿಗೆ 2023-24ನೇ ಶೈಕ್ಷಣಿಕ ವರ್ಷದಲ್ಲಿ ನಗದು ಪ್ರತಿಭಾ ಪುರಸ್ಕಾರ ಹಾಗೂ ಪ್ರಮಾಣ ಪತ್ರ ಕೊಟ್ಟು ಪುರಸ್ಕರಿಸಲಾಗುವುದು. ಕಡು ಬಡವರಿಗೆ, ಅನಾಥ ವಿದ್ಯಾರ್ಥಿಗಳಿಗೆ ಆದ್ಯತೆ ಕೊಡಲಾಗುವುದು. ಆಸಕ್ತ ವಿದ್ಯಾರ್ಥಿಗಳು ಸದರಿ ಸಂಸ್ಥೆಯ ಕಛೇರಿಯಲ್ಲಿ ನಿಗದಿಪಡಿಸಲಾದ ಅರ್ಜಿ ಪಡೆದು, ಅಂಕಪಟ್ಟಿಯೊಂದಿಗೆ ಶಾಲಾ-ಕಾಲೇಜುಗಳ ಮುಖ್ಯಸ್ಥರ ದೃಢೀಕರಣದೊಂದಿಗೆ ದಿನಾಂಕ : 30.05.2023 ರಂದು ಸಾಯಂಕಾಲ 5.00 ಘಂಟೆಯೊಳಗೆ ಅರ್ಜಿ ಸಲ್ಲಿಸತಕ್ಕದ್ದು. ಅವಧಿ ಮೀರಿ ಬಂದ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ. ವಿದ್ಯಾರ್ಥಿಗಳ ಆಯ್ಕೆ ಉಪ ಸಮಿತಿಯ ತೀರ್ಮಾನವೇ ಅಂತಿಮವಾದದ್ದು.

| | | |
| --- | --- | --- |
| ಸಹಿ/- | ಸಹಿ/- | ಸಹಿ/- |
| ಕೆ.ಕೆ. ಸುಶೀಲಮ್ಮ | ಎನ್. ಜಯಮ್ಮ | ಡಿ. ಸುವರ್ಣಮ್ಮ |
| ಅಧ್ಯಕ್ಷರು | ಉಪಾಧ್ಯಕ್ಷರು | ಕಾರ್ಯದರ್ಶಿಗಳು |
| ಸಹಿ/- | ಸಹಿ/- | ಸಹಿ/- |
| ಶಾಂತಾ ಯಾದಗಲ್ | ಸುಮ ಶಿವಯೋಗಿ | ಶೋಭಾ ಕಣವಿ |
| ಉಪಸಮಿತಿ ಅಧ್ಯಕ್ಷರು | ಉಪಸಮಿತಿ ಕಾರ್ಯದರ್ಶಿ | ಕೋಶಾಧ್ಯಕ್ಷೆ, ಉಪಸಮಿತಿ |

# ಸರ್ಕಾರದ ಸ್ವಚ್ಛತಾ ಅಭಿಯಾನಗಳೂ, ಕುದುರೆ ಲದ್ದಿಯೂ...

ಜಿ.ಎನ್. ಕಾಮತ್,
ದಾವಣಗೆರೆ





**ಪರಿಸರ ಬದಲಾವಣೆ, ವಾಯು ಮಾಲಿನ್ಯ, ಜಲ ಮಾಲಿನ್ಯ ಮುಂತಾದ ಭೀಕರ ಸಮಸ್ಯೆಗಳು ಮನುಕುಲಕ್ಕೆ ಅಪಾಯ ತರಲಿವೆ ಎಂಬ ವರದಿಗಳಿವೆ. ಈ ದೈತ್ಯ ಸಮಸ್ಯೆಗಳಿಗೆ ಅಭಿಯಾನಗಳಿಂದ ಪರಿಹಾರ ಸಾಧ್ಯವೇ?**

ಕೇಂದ್ರ ವಸತಿ ಹಾಗೂ ನಗರ ವ್ಯವಹಾರಗಳ ಸಚಿವಾಲಯದ ವತಿಯಿಂದ ಮೇರಿ ಲೈಫ್, ಮೇರಾ ಸ್ವಚ್ಛ ಶೆಹರ್ ಅಭಿಯಾನವನ್ನು ಕಳೆದ ಮೇ 15ರಿಂದ ಆರಂಭಿಸಲಾಗಿದೆ. 21 ದಿನಗಳ ಕಾಲ ಈ ಅಭಿಯಾನ ನಡೆಸುವ ಮೂಲಕ, ಮರು ಬಳಕೆಯಾಗುವ ತ್ಯಾಜ್ಯಗಳನ್ನು ಸಂಗ್ರಹಿಸಲಾಗುತ್ತಿದೆ.

ಈ ಸುದ್ದಿಯನ್ನು ನೋಡಿದಾಗ ನೆನಪಿಗೆ ಬಂದಿದ್ದು, ಶತಮಾನದ ಹಿಂದೆ ನ್ಯೂಯಾರ್ಕ್ ರೀತಿಯ ಬೃಹತ್ ನಗರಗಳಲ್ಲಿ ಉಂಟಾಗಿದ್ದ ಬೃಹತ್ ಸಾರಿಗೆ ಮಾಲಿನ್ಯದ ಅನಾಹುತಗಳ ಬಗ್ಗೆ.

ಶತಮಾನದ ಹಿಂದೆ ಈಗಿನಂತೆ ಸ್ಕೂಟರ್, ಕಾರು, ಬಸ್ ಇತ್ಯಾದಿ ಇರಲಿಲ್ಲ. ಜನಸಂಖ್ಯೆಯೂ ಕಡಿಮೆ ಇತ್ತು. ವಾತಾವರಣವೂ ದೂಳು ಮುಕ್ತವಾಗಿತ್ತು. ಹೀಗಿರುವಾಗ ಎಂತಹ ಮಾಲಿನ್ಯ ಎಂದಿರಾ? ಹೌದು ಸ್ವಾಮಿ. ಆ ಸಂದರ್ಭದಲ್ಲಿ ರಸ್ತೆ ಸಾರಿಗೆಗೆ ಬಳಸುತ್ತಿದ್ದುದು ಕುದುರೆಗಳು. ಆಗ ಕುದುರೆ ಅಂದ ಮೇಲೆ ಲದ್ದಿ ಹಾಕದೇ ಇರುತ್ತದೆಯೇ? ಈ ಕುದುರೆ ಲದ್ದಿಯೇ ಇಡೀ ನಗರ ಅಲ್ಲೋಲ ಕಲ್ಲೋಲ ಆಗುವಷ್ಟು ಅನಾಹುತ ಎಬ್ಬಿಸಿತ್ತು.

ಆಗಿನ ಕಾಲದಲ್ಲಿ ಲಂಡನ್ ಹಾಗೂ ನ್ಯೂಯಾರ್ಕ್ ರೀತಿಯ ನಗರಗಳಲ್ಲಿ 20 ಜನರನ್ನು ಎಳೆದೊಯ್ಯಲು ಎರಡು ಕುದುರೆಗಳು ಬೇಕಾಗುತ್ತಿದ್ದವು. ಹೀಗೆ ಎರಡರಿಂದ ಎಂಟು ಕುದುರೆಗಳನ್ನು ಗಾಡಿ ಗಳನ್ನು ಎಳೆಯಲು ಬಳಸಲಾಗುತ್ತಿತ್ತು. 1870ರ ವೇಳೆಗೆ ನ್ಯೂಯಾರ್ಕ್‌ನಲ್ಲಿ ವರ್ಷಕ್ಕೆ 100 ದಶಲಕ್ಷ ಕುದುರೆ ಗಾಡಿಗಳ ಸವಾರಿ ನಡೆಯುತ್ತಿತ್ತು. ಆ ವೇಳೆಗೆ ನಗರದಲ್ಲಿ ಕನಿಷ್ಠ 1.50 ಲಕ್ಷ ಕುದುರೆಗಳಿದ್ದವು.

ಪ್ರತಿ ಕುದುರೆಯೂ ದಿನಕ್ಕೆ 22 ಪೌಂಡ್ ಲದ್ದಿ ಹಾಕುತ್ತಿತ್ತು. ಒಟ್ಟಾರೆ ಪ್ರತಿದಿನ ಲಕ್ಷಗಟ್ಟಲೆ ಕೆಜಿಗಳ ಲದ್ದಿ ಉತ್ಪತ್ತಿಯಾಗುತ್ತಿತ್ತು. ವರ್ಷಕ್ಕೆ 1 ಲಕ್ಷ ಟನ್ ಕುದುರೆ ಲದ್ದಿ ವಿಲೇವಾರಿ ಮಾಡಬೇಕಿತ್ತು. ಅಂದ ಹಾಗೆ, ಇದರಲ್ಲಿ 10 ದಶಲಕ್ಷ ಗ್ಯಾಲನ್‌ಗಳ ಕುದುರೆ ಗಂಜಲದ ಲೆಕ್ಕ ಸೇರಿಲ್ಲ.

ಈ ಲದ್ದಿಗಳನ್ನು ಹೊತ್ತು ಹಾಕಲು ಮತ್ತೆ ಕುದುರೆಗಳೇ ಬೇಕಿದ್ದವು. ಆ ಕುದುರೆಗಳು ಮತ್ತೆ ಲದ್ದಿ ಹಾಕುತ್ತಿದ್ದವು! ಕುದುರೆ ಲದ್ದಿ, ಸತ್ತ ಕುದುರೆಗಳ ಕಾರಣಗಳಿಂದ ಇಡೀ ನಗರ ನೊಣಮಯವಾಗ ತೊಡಗಿತು. ರೋಗಗಳು ವೇಗವಾಗಿ ಹರಡಿ ಆರೋಗ್ಯ ಸಮಸ್ಯೆ ಉಂಟಾಯಿತು.

ಇದರ ಜೊತೆಗೆ ಪ್ರತಿ ಕುದುರೆಗೂ ವರ್ಷಕ್ಕೆ ಮೂರು ಟನ್‌ಗಳ ಆಹಾರ ಅಗತ್ಯವಾಗುತ್ತಿತ್ತು. ಇದಕ್ಕಾಗಿ ಲಕ್ಷಾಂತರ ಎಕರೆಯಲ್ಲಿ ಮೇವು ಬೆಳೆಯಬೇಕಿತ್ತು. ಒಟ್ಟಾರೆ ಸಾಗಣೆಯ ಸಮಸ್ಯೆ ಆಗಿನ ಆಡಳಿತಗಾರರಿಗೆ ಇನ್ನಿಲ್ಲದಂತೆ ಕಾಡಿತು.

ಈ ಸಮಸ್ಯೆಗೆ ಪರಿಹಾರ ಹೇಗೆ ದೊರೆಯಿತು? ಆಡಳಿತಗಾರರು ಏನೆಲ್ಲಾ ತಲೆ ಚಚ್ಚಿಕೊಂಡರೂ ಪರಿಹಾರ ಸಿಗಲಿಲ್ಲ. ಆದರೆ, ಈ ಸಮಸ್ಯೆ ವಿಜ್ಞಾನ - ತಂತ್ರಜ್ಞಾನದಿಂದ ಪರಿಹಾರವಾಯಿತು. 1900ರ ವೇಳೆಗೆ ಎಲೆಕ್ಟ್ರಿಕ್ ಕಾರುಗಳು ಹಾಗೂ ಡೀಸೆಲ್ ವಾಹನಗಳ ಆವಿಷ್ಕಾರವಾಯಿತು. ನಂತರದಲ್ಲಿ ವೈಯಕ್ತಿಕ ಬಳಕೆಗೆ ಕಾರುಗಳು ಬಂದವು. ಅಲ್ಲಿಗೆ ಕುದುರೆಗಳನ್ನು ಸಾರಿಗೆಗೆ ಬಳಸುವುದು ನಿಂತಿತು. ಲದ್ದಿ ಹಾಗೂ ಮೇವಿನ ಸಮಸ್ಯೆಯಿಂದ ನಗರಗಳಿಗೆ ಸಂಪೂರ್ಣ ಮುಕ್ತಿ ದೊರೆಯಿತು.

ಈ ಪುರಾಣ ಏಕೆ ಹೇಳಬೇಕಾಯಿತು ಎಂದರೆ, ಆ ಕಾಲದಲ್ಲಿ ಲದ್ದಿ ಸಮಸ್ಯೆ ಬಗೆಹರಿಸಿದ ತಂತ್ರಜ್ಞಾನವೇ ಈಗ ನಗರಗಳಲ್ಲಿ ವಾಯು ಮಾಲಿನ್ಯಕ್ಕೆ ಕಾರಣವಾಗಿದೆ. ವಿಶ್ವದ ಟಾಪ್ ಟೆನ್ ವಾಯು ಮಲಿನ ನಗರಗಳಲ್ಲಿ ಭಾರತದ ರಾಜಧಾನಿ ದೆಹಲಿ ಸೇರಿ ಹಲವು ನಗರಗಳಿವೆ. ವರ್ಷಕ್ಕೆ ವಾಯು ಮಾಲಿನ್ಯದಿಂದ ಭಾರದಲ್ಲಿ 23 ಲಕ್ಷ ಜನ ಅಕಾಲಿಕ ಸಾವನ್ನಪ್ಪುತ್ತಿದ್ದಾರೆ ಎಂದು ಲ್ಯಾನ್ಸೆಟ್ ಸಂಸ್ಥೆಯ ವರದಿ ತಿಳಿಸಿದೆ.

ಈ ಸಮಸ್ಯೆ ವರ್ಷದಿಂದ ವರ್ಷಕ್ಕೆ ತೀವ್ರವಾಗುತ್ತಿದೆಯೇ ಹೊರತು ಬಗೆಹರಿಯುವ ಲಕ್ಷಣಗಳಿಲ್ಲ. ಈ ಸಮಸ್ಯೆಗೆ ಪರಿಹಾರ ಕಂಡು ಹಿಡಿಯ ಬೇಕಾದ ಕೇಂದ್ರ ನಗರ ವ್ಯವಹಾರಗಳ ಸಚಿವಾಲಯ, ನಿಮ್ಮ ಮನೆಗಳಲ್ಲಿ ಘನ ತ್ಯಾಜ್ಯ ಇದ್ದರೆ ಸಂಗ್ರಹಿಸಿ ಕೊಡಿ ಎಂದು ರಾಗ ಹಾಡುತ್ತಾ ಪ್ರಚಾರ ಪಡೆಯುತ್ತಿದೆ.

ಘನತ್ಯಾಜ್ಯ ವಿಲೇವಾರಿ ಆಗಬೇಕಾದ್ದೆ. ಆದರೆ, ಇದು ಒಂದು ಅಭಿಯಾನದಿಂದ ಆಗುವ ಕೆಲಸವಲ್ಲ. ಇದಕ್ಕೆ ಸರ್ಕಾರದ ಹಂತದಲ್ಲಿ ಬೃಹತ್ ಯೋಜನೆಗಳು ಜಾರಿಗೆ ಬರಬೇಕಿದೆ. ಪರಿಸರ ಬದಲಾವಣೆ, ವಾಯು ಮಾಲಿನ್ಯ, ಜಲ ಮಾಲಿನ್ಯ ಮುಂತಾದ ಭೀಕರ ಸಮಸ್ಯೆಗಳು ಮನುಕುಲಕ್ಕೆ ಅಪಾಯ ತರಲಿವೆ ಎಂಬ ವರದಿಗಳಿವೆ. ಈ ದೈತ್ಯ ಸಮಸ್ಯೆಗಳಿಗೆ ಅಭಿಯಾನಗಳಿಂದ ಪರಿಹಾರ ಸಾಧ್ಯವೇ? ಸರ್ಕಾರಗಳು ಇನ್ನಾದರೂ ನಿಜವಾದ ಸ್ವಚ್ಛ ಭಾರತದ ಬಗ್ಗೆ ಗಂಭೀರವಾಗಬೇಕಿದೆ.

# ಉತ್ತಮ ಆಡಳಿತಕ್ಕೆ ಅಧಿಕಾರಿಗಳು ಕೈಜೋಡಿಸಬೇಕು

## ಅಧಿಕಾರಿಗಳಿಗೆ ಸಿಎಂ ಸಿದ್ದರಾಮಯ್ಯ ಸೂಚನೆ

ಬೆಂಗಳೂರು, ಮೇ 23- ಜನರ ಆಶೋತ್ತರಗಳನ್ನು ಈಡೇರಿಸಲು, ಉತ್ತಮ ಆಡಳಿತ ನೀಡಲು ಅಧಿಕಾರಿಗಳು ಕೈಜೋಡಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಪ್ರಧಾನ ಕಾರ್ಯದರ್ಶಿಗಳು ಹಾಗೂ ಕಾರ್ಯದರ್ಶಿಗಳೊಂದಿಗೆ ಸಭೆ ನಡೆಸಿ ಮಾತನಾಡಿದ ಅವರು, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರೇ ಪ್ರಭುಗಳು. ಅವರು ನಮ್ಮನ್ನು ಆರಿಸಿ ಕಳುಹಿಸಿದ್ದಾರೆ. ಅವರ ಪ್ರತಿನಿಧಿಗಳಾಗಿ ಇಲ್ಲಿಗೆ ಬಂದಿದ್ದೇವೆ. ಅವರ ಆಶೋತ್ತರಗಳಿಗೆ ಸ್ಪಂದಿಸುವುದು ಜನಪ್ರತಿನಿಧಿಗಳ ಕರ್ತವ್ಯ ಎಂದರು.

ಜನರ ನಿರೀಕ್ಷೆಗೆ ಅನುಗುಣವಾಗಿ ಎಲ್ಲರೂ ಕೆಲಸ ಮಾಡಬೇಕಾಗುತ್ತದೆ. ಸುಭದ್ರ ಸರ್ಕಾರ ಇಲ್ಲದಾಗ ಜನರ ಆಶೋತ್ತರಗಳನ್ನು ಈಡೇರಿಸಲು ಆಗುವುದಿಲ್ಲ. ಜನರ ಆಶೋತ್ತರಗಳನ್ನು ಅನುಷ್ಠಾನಕ್ಕೆ ತರುವ ಮೂಲಕ ಅವರಿಗೆ ಸ್ಪಂದಿಸಬೇಕೆನ್ನುವ ಬಯಕೆ ಸರ್ಕಾರದ್ದು. ಉತ್ತಮ ಸರ್ಕಾರದ ನಿರೀಕ್ಷೆ, ಕಿರಿಕಿರಿ ಮಾಡದ ಸರ್ಕಾರ, ಚುರುಕಾಗಿರುವ ಸರ್ಕಾರ, ಭಿನ್ನ ಸರ್ಕಾರದ ಅಗತ್ಯವಿದೆ ಎಂದು ಜನ ಬಯಸಿದ್ದಾರೆ ಎಂದು ಹೇಳಿದರು. ಹಿಂದಿನ ಸರ್ಕಾರದ ಅವಧಿಯಲ್ಲಿ ಅಭಿವೃದ್ಧಿ ಕೆಲಸಗಳು ನಿಂತುಹೋಗಿವೆ, ಭ್ರಷ್ಟಾಚಾರವಿದೆ ಎಂಬ ಭಾವನೆ ಜನರಲ್ಲಿತ್ತು. ಈ ಭಾವನೆಯನ್ನು ಹೋಗಲಾಡಿಸಲು ಅಧಿಕಾರಿಗಳು ಸರ್ಕಾರದೊಂದಿಗೆ ಕೈಜೋಡಿಸಬೇಕು.

ಗುಣಮಟ್ಟದ ಕಾಮಗಾರಿಗಳಾಗಬೇಕು, ಕಾಲಮಿತಿಯಲ್ಲೇ ಕೆಲಸಗಳಾಗಬೇಕು. ಕಣ್ಣು ಮುಚ್ಚಿಕೊಂಡು ಸಹಿ ಹಾಕದೇ ಜನರ ಹಣವನ್ನು ಸರಿಯಾದ ರೀತಿಯಲ್ಲಿ ವೆಚ್ಚ ಮಾಡಬೇಕು.

ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಗಳನ್ನು ಅರ್ಹರಿಗೆ ತಲುಪಿಸಬೇಕು. ಇವುಗಳನ್ನು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮೇಲ್ವಿಚಾರಣೆ ಮಾಡಬೇಕು. ಕ್ಷೇತ್ರಗಳಿಗೆ ಕಾಲಕಾಲಕ್ಕೆ ಭೇಟಿ ನೀಡುವುದಲ್ಲದೇ ಕಚೇರಿಗಳಿಗೆ ಅನಿರೀಕ್ಷಿತ ಭೇಟಿಯನ್ನೂ ನೀಡಬೇಕು.

ಹಿರಿಯ ಅಧಿಕಾರಿಗಳು ನಿಯಮಗಳನ್ನು ಪಾಲಿಸ ಬೇಕು. ಯೋಜನೆಗಳು ಕ್ಷಿಪ್ರ ಅನುಷ್ಠಾನವಾದರೆ ಜನರಿಗೆ ಪ್ರಯೋಜನವಾಗುತ್ತದೆ. ಜನರಿಗೆ ಕೊಟ್ಟ ಮಾತನ್ನು ಉಳಿಸಿಕೊಳ್ಳಬೇಕೆನ್ನುವುದು ಸರ್ಕಾ ರದ ಉದ್ದೇಶ. ಜನರ ಕಷ್ಟಗಳಿಗೆ ಸ್ಪಂದಿಸುವವರೇ ಮನುಷ್ಯರು ಎಂದು ಅರ್ಥಮಾಡಿಕೊಂಡು ಜನರ ನಿರೀಕ್ಷೆಗಳಿಗೆ ಸ್ಪಂದಿಸಬೇಕೆಂದು ಬಯಸುತ್ತೇವೆ ಎಂದು ಅವರು ತಿಳಿಸಿದರು.

# ಅಂಗನವಾಡಿ ಹುದ್ದೆಗಳಿಗೆ ಅರ್ಜಿ ಆಹ್ವಾನ

ದಾವಣಗೆರೆ, ಮೇ 23- ಹರಿಹರ ತಾಲ್ಲೂಕಿನಲ್ಲಿ ಖಾಲಿ ಇರುವ 3 ಅಂಗನವಾಡಿ ಕಾರ್ಯಕರ್ತೆ, 1 ಮಿನಿ ಅಂಗನವಾಡಿ ಕಾರ್ಯಕರ್ತೆ, 20 ಅಂಗನವಾಡಿ ಸಹಾ ಯಕಿಯರ ಹುದ್ದೆಗಳಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಮೀಸಲಾತಿಗೆ ಅನುಗುಣವಾಗಿ ಅರ್ಹ ಸ್ಥಳೀಯ ಮಹಿಳಾ, ಲಿಂಗತ್ವ ಅಲ್ಪಸಂಖ್ಯಾತ ಅಭ್ಯರ್ಥಿಗಳು ಅರ್ಜಿ ನಮೂನೆಯನ್ನು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿಯಲ್ಲಿ ಪಡೆದು ಜೂನ್ 26 ರ ಸಂಜೆ 5.30 ಗಂಟೆಯೊಳಗಾಗಿ ಭರ್ತಿ ಮಾಡಿ ಸಲ್ಲಿಸಬೇಕು. ಮಾಹಿತಿ ಗಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿ, ಪಿ.ಎಲ್.ಡಿ ಬ್ಯಾಂಕ್ ಬಿಲ್ಡಿಂಗ್, ಶಿವಮೊಗ್ಗ ರೋಡ್, ಹರಿಹರ. ದೂ. : 08192-241431 ಸಂಪರ್ಕಿಸಲು ಕೋರಿದೆ.

# 2ನೇ ದಿನ 27 ಶಾಸಕರಿಂದ ಪ್ರಮಾಣ

ಬೆಂಗಳೂರು, ಮೇ 23- ವಿಧಾನಸಭೆ ವಿಶೇಷ ಅಧಿವೇಶನದ ಎರಡನೇ ದಿನ 27 ಶಾಸಕರು ಪ್ರಮಾಣ ವಚನ ಸ್ವೀಕರಿಸಿದ್ದಾರೆ.

ಹದಿನಾರನೇ ವಿಧಾನಸಭೆಯ ಮೊದಲ ವಿಶೇಷ ಅಧಿವೇಶನದ 2ನೇ ದಿನವಾದ ಇಂದು ಬೆಳಿಗ್ಗೆ ಸದನ ಸಮಾವೇಶಗೊಂಡಾಗ ಸಭಾಧ್ಯಕ್ಷರಾದ ಆರ್.ವಿ. ದೇಶಪಾಂಡೆ ಅವರು ಸಂಪ್ರದಾಯದಂತೆ ನೂತನ ಸದಸ್ಯರ ಪ್ರಮಾಣ ವಚನಕ್ಕೆ ಅವಕಾಶ ಮಾಡಿಕೊಟ್ಟರು.

ಶಿಕಾರಿಪುರ ಕ್ಷೇತ್ರದ ಶಾಸಕ ಬಿ.ವೈ. ವಿಜಯೇಂದ್ರ ಅವರು, ತಮ್ಮ ಕ್ಷೇತ್ರದ ಆರಾಧ್ಯದೈವ ಹುಚ್ಚರಾಯ ಸ್ವಾಮಿ ಹಾಗೂ ಸತ್ಯನಿಷ್ಠೆ ಹೆಸರಿನಲ್ಲಿ ಪ್ರಮಾಣವಚನ ಸ್ವೀಕಾರ ಮಾಡಿದರು. ಉಡುಪಿ ಕ್ಷೇತ್ರದ ಶಾಸಕ ಯಶ್‌ಪಾಲ್ ಸುವರ್ಣ ಅವರು, ಉಡುಪಿ ಶ್ರೀಕೃಷ್ಣ, ಶ್ರೀ ವಿಭುದೇಶ ಸ್ವಾಮೀಜಿ, ಗೋಮಾತೆ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದರು.

ಕ್ಷೇತ್ರದ ಜನತೆ, ಬಸವೇಶ್ವರ, ಜಗನ್ಮಾತೆ, ಸಂವಿಧಾನ, ಭಗವಂತ, ಸತ್ಯ ನಿಷ್ಠೆ ಹೆಸರಿನಲ್ಲಿ ನೂತನ ಶಾಸಕರು ಪ್ರಮಾಣ ವಚನ ಸ್ವೀಕರಿಸಿದರು. ಮೊದಲಿಗೆ ಶಾಸಕ ಹರೀಶ್ ಪೂಂಜಾ ಅವರು ಪ್ರಭು ಶ್ರೀರಾಮಚಂದ್ರ ಹೆಸರಿನಲ್ಲಿ ಪ್ರಮಾಣ ಮಾಡಿ ಸತ್ಯನಿಷ್ಠೆ ಹೆಸರಿನಲ್ಲಿ ಪ್ರತಿಜ್ಞೆ ಮಾಡುವ ಮೂಲಕ ಪ್ರಮಾಣ ವಚನ ಸ್ವೀಕರಿಸಿದರು.

ಲಕ್ಷ್ಮಿ ಹೆಬ್ಬಾಳ್ಕರ್ ಅವರು ಜಗಜ್ಯೋತಿ ಬಸವಣ್ಣ, ಮಹೇಶ್ ಟೆಂಗಿನಕಾಯಿ ಅವರು, ಮಹಾಕೂಟೇಶ್ವರ ಹೆಸರಿನಲ್ಲಿ, ಶಿವಾಜಿನಗರ ಕ್ಷೇತ್ರದ ಶಾಸಕ ರಿಜ್ವಾನ್ ಅರ್ಷದ್ ಅವರು ಸಂವಿಧಾನ ಹಾಗೂ ಸತ್ಯನಿಷ್ಠೆ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದರೆ, ಬಸವಕಲ್ಯಾಣ ಶಾಸಕ ಶರಣು ಸಲಗಾರ ಅವರು, ಶಿವಾಚಾರ್ಯರ ಆಶೀರ್ವಾದದೊಂದಿಗೆ ಛತ್ರಪತಿ ಶಿವಾಜಿ ಮಹಾರಾಜ್ ಹಾಗೂ ವಿಶ್ವ ಗುರು ಬಸವಣ್ಣನವರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕಾರ ಮಾಡಿದರು.

ಎನ್.ಟಿ. ಶ್ರೀನಿವಾಸ್ ಅವರು, ಸಂವಿಧಾನ, ಭಗವಂತ, ತಂದೆ-ತಾಯಿ ಹಾಗೂ ಸತ್ಯನಿಷ್ಠೆ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದರು.

ಶಾಸಕ ಡಿ.ಸುಧಾಕರ್ ಅವರು ತೇರು ಮಲ್ಲೇಶ್ವರಸ್ವಾಮಿ ಹಾಗೂ ಶ್ರೀನಿವಾಸಪುರ ಕ್ಷೇತ್ರದ ಶಾಸಕ ಜಿ.ಕೆ.ವೆಂಕಟಶಿವಾರೆಡ್ಡಿ ಅವರು ಶ್ರೀನಿವಾಸಪುರ ಕ್ಷೇತ್ರದ ಜನತೆಯ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದರು.

ಇಂದು ಒಟ್ಟು 27 ಮಂದಿ ಶಾಸಕರು ವಿಧಾನಸಭೆಯ ಸದಸ್ಯರಾಗಿ ಪ್ರಮಾಣ ವಚನ ಸ್ವೀಕಾರ ಮಾಡಿದರು. ಪ್ರಮಾಣ ವಚನ ಸ್ವೀಕರಿಸಿದ ಸದಸ್ಯರೆಲ್ಲರೂ ಸಭಾಧ್ಯಕ್ಷರಿಗೆ ವಂದಿಸಿ ಶಾಸನಸಭೆಯ ಪುಸ್ತಕದಲ್ಲಿ ಸಹಿ ಮಾಡಿದರು. ಬಳಿಕ ಪಕ್ಷ ಭೇದ ಮರೆತು ಶಾಸಕರು ಪರಸ್ಪರ ಒಬ್ಬರನ್ನೊಬ್ಬರು ಹಸ್ತಲಾಘವ ಮಾಡಿ ಅಭಿನಂದಿಸಿದರು.

ಬಳಿಕ ಸಭಾಧ್ಯಕ್ಷರು ಮಾತನಾಡಿ ವಿಧಾನಸಭೆಗೆ ಚುನಾಯಿತರಾಗಿರುವ 16 ಮಂದಿ ಇದುವರೆಗೆ ಪ್ರಮಾಣ ವಚನ ಸ್ವೀಕರಿಸಿಲ್ಲ. ಒಂದು ವೇಳೆ ಪ್ರಮಾಣ ವಚನ ಸ್ವೀಕರಿಸದಿದ್ದರೆ, ನಾಳೆ ಸದನದಲ್ಲಿ ನಡೆಯುವ ಸಭಾಧ್ಯಕ್ಷರ ಚುನಾವಣೆಯಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ ಎಂದು ಪ್ರಕಟಿಸಿದರು.

ಪ್ರಮಾಣ ವಚನ ಸ್ವೀಕರಿಸದಿರುವವರು ಸಭಾಧ್ಯಕ್ಷರ ಕಚೇರಿಯಲ್ಲಿ ಪ್ರತಿಜ್ಞಾ ವಿಧಿ ತೆಗೆದುಕೊಳ್ಳಬಹುದು ಎಂದು ಹೇಳಿ ಸದನದ ಕಲಾಪವನ್ನು ನಾಳೆಗೆ ಮುಂದೂಡಿದರು.

## ನಗರದಲ್ಲಿ ಇಂದು ವಟುಗಳಿಗೆ ಧರ್ಮೋಪನಯನ

ಶ್ರೀ ಶಂಕರ ಸೇವಾ ಸಂಘದಿಂದ ತ್ರಿಮತಸ್ಥ ಬ್ರಾಹ್ಮಣ ವಟುಗಳಿಗೆ ಧರ್ಮೋಪನಯನವನ್ನು ಎಸ್.ನಿಜಲಿಂಗಪ್ಪ ಬಡಾವಣೆಯ ಶ್ರೀ ಶಂಕರ ಸಮುದಾಯ ಭವನದಲ್ಲಿ ಇಂದು ನಡೆಯಲಿದೆ ಎಂದು ಸಂಘದ ಕಾರ್ಯದರ್ಶಿ ಶ್ರೀನಿವಾಸ ಕೆ. ಜೋಶಿ ತಿಳಿಸಿದ್ದಾರೆ.

## ಮುಂಗಾರು ಪೂರ್ವ ಮಳೆಯಲ್ಲಿ 52 ಸಾವು

ಬೆಂಗಳೂರು, ಮೇ 23 – ರಾಜ್ಯದಲ್ಲಿ ಮುಂಗಾರು ಪೂರ್ವ ಮಳೆಗೆ ಸಿಲುಕಿ 52 ಜನ ಸಾವನ್ನಪ್ಪಿದ್ದಾರೆ. ಬೆಳೆಗಳಿಗೆ ಹಾನಿಯಾಗಿದ್ದು, ಸಂಬಂಧಿಸಿದ ಅಧಿಕಾರಿಗಳು ತಕ್ಷಣವೇ ಪರಿಹಾರ ವಿತರಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ. ಅಧಿಕಾರಿಗಳ ಸಭೆಯ ನಂತರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಈ ಬಾರಿ ವಾಡಿಕೆಗಿಂತ ಶೇ.10ರಷ್ಟು ಹೆಚ್ಚಿನ ಮುಂಗಾರು ಪೂರ್ವ ಮಳೆ ಬಂದಿದೆ. 52 ಜನ ಸಾವನ್ನಪ್ಪಿದ್ದಾರೆ. 331 ಜಾನುವಾರುಗಳು ಸತ್ತಿವೆ. 20 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾನಿಯಾಗಿದೆ ಮತ್ತು 814 ಮನೆಗಳಿಗೆ ಹಾನಿಯಾಗಿದೆ ಎಂದರು.

ಮೃತಪಟ್ಟ 52 ಜನರ ಕುಟುಂಬಗಳಿಗೆ ಈಗಾಗಲೇ 5 ಲಕ್ಷ ರೂ.ಗಳನ್ನು ಪರಿಹಾರವಾಗಿ ವಿತರಿಸಲಾಗಿದೆ. ಜಾನುವಾರುಗಳು, ಬೆಳೆ ಹಾಗೂ ಮನೆ ಹಾನಿಗೂ ತಕ್ಷಣವೇ ಪರಿಹಾರ ವಿತರಿಸಲಾಗುವುದು ಎಂದು ಹೇಳಿದರು.


**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ : ಮೊ.: 98453 17181

**ವಾಸದ ಮನೆ ಭೋಗ್ಯಕ್ಕೆ ಇದೆ**
ದಾವಣಗೆರೆ ಸಿಟಿ ಎಸ್.ಎಸ್ ಬಡಾವಣೆ 'ಎ' ಬ್ಲಾಕ್ ನೇತಾಜಿ ಸುಭಾಷ್‌ಚಂದ್ರ ಬೋಸ್ ಇಂಡೋರ್ ಸ್ಟೇಡಿಯಂ ಹತ್ತಿರ, ಎಸ್. ಸ್ಕ್ವೇರ್ ಡ್ಯೂ ಫ್ಲವರ್ ಅಪಾರ್ಟ್‌ಮೆಂಟ್‌ನಲ್ಲಿ ವಾಸ್ತು ಪ್ರಕಾರ ಅಳವಡಿಸಿರುವ ಲಿಫ್ಟ್, ನೀರು, ಹಾಗೂ ಎಲ್ಲಾ ಸೌಕರ್ಯವಿರುವ ವಾಸದ ಮನೆ ಭೋಗ್ಯಕ್ಕಿದೆ. ಬಿ.ಎಸ್. ಸಂತೋಷ್ 96322 67555

**ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ**
ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ : 91642 22937

**ಸೈಟುಗಳು ಮಾರಾಟಕ್ಕಿವೆ**
ಎಸ್.ಎಸ್. ಹೈಟೆಕ್ ಬಳಿ 30x50 ಅಳತೆಯ ಸೈಟುಗಳು ಮಾರಾಟಕ್ಕಿವೆ. 72045 77823

**ಮನೆ ಬಾಡಿಗೆಗೆ ಇದೆ**
ದಾವಣಗೆರೆ ಕಿರುವಾಡಿ ಲೇ ಔಟ್ 1ನೇ ಮೇನ್‌ನಲ್ಲಿ ಜೈನ್ ದೇವಸ್ಥಾನದ ಎದುರು, ಮೊದಲನೇ ಮಹಡಿಯಲ್ಲಿ 3 ಬೆಡ್ ರೂಮ್ ವಿತ್ ಅಟ್ಯಾಚ್ಡ್ ಮತ್ತು ವಾಸ್ತುಪ್ರಕಾರವಿರುವ ಸುಸಜ್ಜಿತ ಮನೆ ಬಾಡಿಗೆಗೆ ಇದೆ. ಸಂಪರ್ಕಿಸಿ ಮೊ. 99451 59582

**ಮನೆ ಬಾಡಿಗೆಗಿದೆ**
ಆಂಜನೇಯ ಬಡಾವಣೆಯಲ್ಲಿ ಡಬಲ್ ಬೆಡ್ ರೂಂ ಮನೆಯು ಎಲ್ಲಾ ಸೌಕರ್ಯದೊಂದಿಗೆ ಬಾಡಿಗೆಗಿದೆ. ಆಸಕ್ತರು ಸಂಪರ್ಕಿಸಿ : 99863 31471 ಮಧ್ಯವರ್ತಿಗಳಿಗೆ ಅವಕಾಶವಿಲ್ಲ

**ಮನೆಗಳು ಬಾಡಿಗೆಗೆ ಇವೆ**
ಬಾಪೂಜಿ ಸ್ಕೂಲ್ ಹತ್ತಿರ
Houses available for Rent Near Bapuji School Kuvempu Nagara, Davangere. 63665 06433

**ಮನೆ ಬಾಡಿಗೆಗಿದೆ**
ದೇವರಾಜ್ ಅರಸ್ 'A' ಬ್ಲಾಕ್‌ನಲ್ಲಿ, ಮೊದಲನೇ ಮಹಡಿಯಲ್ಲಿ, ಡಬಲ್ ಬೆಡ್ ರೂಂ ಮನೆಯಿದ್ದು ಎಲ್ಲಾ ಸೌಕರ್ಯಗಳನ್ನು ಹೊಂದಿರುವ ಮನೆ ಬಾಡಿಗೆಗಿದೆ. ಸಸ್ಯಹಾರಿಗಳಿಗೆ ಆದ್ಯತೆ. ಬ್ರೋಕರ್‌ಗೆ ಅವಕಾಶವಿಲ್ಲ ಆಸಕ್ತರು ಸಂಪರ್ಕಿಸಿ : 98459 24394

**ಬೇಕಾಗಿದ್ದಾರೆ**
ದಾವಣಗೆರೆ ಸುತ್ತಮುತ್ತ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ, 8000-11000 ಸಂಬಳ, ವಿನೋಬ ನಗರ, 2ನೇ ಬಸ್ ಸ್ಟಾಪ್, ದಾವಣಗೆರೆ. 91130 53483

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ 99863 61250 91132 85992

**ಮಾರಾಟಕ್ಕಿದೆ**
ಲ್ಯಾಬೋರೇಟರಿ ಮಾಡುವುದಕ್ಕೆ ಉಪಕರಣಗಳು ಇವೆ. ಫೋ.: 99725 91568

**ಕಲೆಕ್ಷನ್ ಬಾಯ್ ಬೇಕಾಗಿದ್ದಾರೆ**
ಕಲೆಕ್ಷನ್ ಬಾಯ್ ಆಗಿ ಕೆಲಸ ಮಾಡಲು ಪಿಯುಸಿ ಪಾಸಾಗಿರುವವರು ಬೇಕಾಗಿದ್ದಾರೆ. ಬಯೋಡೇಟಾದೊಂದಿಗೆ ಸಂಪರ್ಕಿಸಿ : ನವೋದಯ ಚಿಟ್ ಫಂಡ್ಸ್ # 34, ಮುರುಘರಾಜೇಂದ್ರ ಕಾಂಪ್ಲೆಕ್ಸ್, ಶಿವಪ್ಪಯ್ಯ ಸರ್ಕಲ್ ಬಳಿ, ನಿಟುವಳ್ಳಿ ರಸ್ತೆ, ದಾವಣಗೆರೆ.

**ಕೆಲಸಕ್ಕೆ ತಕ್ಷಣ ಬೇಕಾಗಿದ್ದಾರೆ**
1) ವರ್ಕ್ ಫ್ರಮ್ ಹೋಂ (ಟೆಲಿಕಾಲಿಂಗ್)
2) ಆಫೀಸ್ ವರ್ಕ್ (ಟೆಲಿಕಾಲಿಂಗ್)
ವಿದ್ಯಾರ್ಹತೆ - SSLC Pass or Fail, ಯಾವದೇ ಶಲ್ಕ ಇರುವುದಿಲ್ಲ 15000-30000. ಸಂಪರ್ಕಿಸಿ : 98452 52104, 96320 49603

**ಸೈಟು ಮಾರಾಟಕ್ಕಿದೆ**
ಮಲ್ಲ ಶೆಟ್ಟಿಹಳ್ಳಿ NH-4 ಗೆ ಹೊಂದಿಕೊಂಡಿರುವ (30x40) ಪೂರ್ವ-ಉತ್ತರ. 70196 18397

**ಸೈಟುಗಳು ಮಾರಾಟಕ್ಕಿವೆ**
ಶಾಮನೂರು ಹತ್ತಿರ ಡಾಲರ್ಸ್ ಕಾಲೋನಿಯಲ್ಲಿ ಸೈಟುಗಳು ಮಾರಾಟಕ್ಕಿವೆ 70x62 South, West Corner, 40x40 South, 30x52 North, 30x40 South, 50x40 North ಐನಳ್ಳಿ ಚನ್ನಬಸಪ್ಪ ಏಜೆಂಟ್ 99166 12110

**ಬೇಕಾಗಿದ್ದಾರೆ**
ಕ್ಲಿನಿಕ್ ನಲ್ಲಿ ಕೆಲಸ ನಿರ್ವಹಿಸಲು ಮಹಿಳಾ ಸಿಬ್ಬಂದಿ ಬೇಕಾಗಿದ್ದಾರೆ. ವಿಳಾಸ: ಡಾ. ಎನ್.ಹೆಚ್.ಕೃಷ್ಣ, ಜೈನ್ ಲ್ಯಾಬ್ ಕೆಳಗೆ, ಮೋತಿ ವೀರಪ್ಪ ಕಾಲೇಜು ಹಿಂಭಾಗ, ಪಿ.ಜೆ. ಬಡಾವಣೆ, ದಾವಣಗೆರೆ.

**ಅನುಭವವಿರುವ ಶಿಕ್ಷಕಿಯರು ಬೇಕಾಗಿದ್ದಾರೆ**
ಶ್ರೀ ತರಳಬಾಳು ನರ್ಸರಿ ಮತ್ತು ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆ-ಬಸಾಪುರ 21ನೇ ವಾರ್ಡ್, ದಾವಣಗೆರೆ-1 B.Sc, B.Ed - 02, BA, B.Ed = English- 01, D,Ed = 02, Hindi B.Ed = 01 ಸಂಪರ್ಕಿಸಿ. 94488 03836, 95912 85527

**Wanted Distributors**
GRS Home Product
Ganavi Health Mix
Davangere, Chitradurga Shivamogga, Haveri,
Wanted Feild Workers, (male/Female)
7019465768 (Jagadish)

**ಬೇಕಾಗಿದ್ದಾರೆ**
ಹೋಟೆಲ್‌ನಲ್ಲಿ ಪಾರ್ಸಲ್ ಕಟ್ಟಲು (ಹುಡುಗರು) ಮತ್ತು ಇಡ್ಲಿ ವಡ ಮಾಡುವ (ಭಟ್ಟರು) ಮತ್ತು ಮಹಿಳೆಯರು ಹೋಟೆಲ್‌ಗೆ ಅನುಭವವುಳ್ಳ ಕೆಲಸಗಾರರಿಗೆ ಮಾತ್ರ (ಅವಕಾಶ) ಬೇಕಾಗಿದ್ದಾರೆ. 27 ಸಾವಿರ ಸಂಬಳ ಕೊಡಲಾಗುವುದು 70194 69302

**WANTED TEACHERS**
B.Sc. B.Ed. (Maths) - 2
B.A./B.Com, NTC - 2
Aaya (Ladies) - 2
Contact with Originals
87468 95680, 99801 48289

**WANTED**
Banking Sector Tele Caller (Female Only)
Qualification : Any Degree
90715 55081
Interview time : 11AM

**PART TIME FULL TIME JOB**
ನೀವೇನಾದರೂ ಪ್ರೊಫೆಷನಲ್ ಫೀಲ್ಡ್‌ನಲ್ಲಿ ವರ್ಕ್ ಮಾಡುತ್ತಾ ಇದ್ದು Extra income ಬೇಕು ಅನ್ನೋರು, ಕೂಡಲೇ ಸಂಪರ್ಕಿಸಿ, ಪಾರ್ಟ್ ಟೈಮ್ ಜಾಬ್ ಅವಕಾಶವಿದೆ. 74835 24662

**ಸೈಟುಗಳು ಮಾರಾಟಕ್ಕಿವೆ**
ವಿವೇಕಾನಂದ ಬಡಾವಣೆಯಲ್ಲಿ 15x45 South, 30x40 East, ಆಂಜನೇಯ ಬಡಾವಣೆಯಲ್ಲಿ 30x38 North, 30x42 South, LIC ಕಾಲೋನಿಯಲ್ಲಿ 30x40 West. ಐನಳ್ಳಿ ಚನ್ನಬಸಪ್ಪ ಏಜೆಂಟ್ 99166 12110

**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಹೌಸ್ ಕೀಪಿಂಗ್ ಹುಡುಗರು ಬೇಕಾಗಿದ್ದಾರೆ. ಸಂಬಳ 12.000, ಊಟ, ರೂಂ ಉಚಿತ, ವಯಸ್ಸು 18 ರಿಂದ 30 ವರ್ಷ 12 ಗಂಟೆ ಕೆಲಸ. ಸಂಪರ್ಕಿಸಿ. 9740098047, 9740098064

**ಬೇಕಾಗಿದ್ದಾರೆ**
B.A., B.Ed., (PCM / CBZ) ಆಗಿರುವ ಶಿಕ್ಷಕರು ಹಾಗೂ Part-time Driver ಬೇಕಾಗಿದ್ದಾರೆ. ಸಂಪರ್ಕಿಸಿ: ನಂದಗೋಕುಲ ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆ, ದೇವರಾಜ ಅರಸು ಬಡಾವಣೆ, ಸಿ ಬ್ಲಾಕ್, 6ನೇ ಕ್ರಾಸ್, (ಹೊಸ ಆರ್ ಟಿ ಒ ಕಛೇರಿ ಹಿಂಭಾಗ), ಕೊಂಡಜ್ಜಿ ರಸ್ತೆ, ದಾವಣಗೆರೆ. ಕಾರ್ಯದರ್ಶಿ/99640 17729

**ಡ್ರೈವರ್ ಬೇಕಾಗಿದ್ದಾರೆ**
ಶಾಲಾ ವಾಹನಕ್ಕೆ ಡ್ರೈವರ್ ಬೇಕಾಗಿದ್ದಾರೆ. ಸಂಪರ್ಕಿಸಿ. ಲಿಟಲ್ ಚಾಂಪ್ಸ್ ಸ್ಕೂಲ್ ಡಿಸಿಎಂ. ಟೌನ್‌ಶಿಪ್, ದಾವಣಗೆರೆ. 83109 32579

**ಗ್ಲಾಸ್ ಹೌಸ್ ಸೈಟುಗಳು ಮಾರಾಟಕ್ಕಿವೆ**
ಗ್ಲಾಸ್ ಹೌಸ್ ಹತ್ತಿರ ದಕ್ಷಿಣ 65x120 (ಡಬಲ್ ರೋಡ್) ಗ್ಲಾಸ್ ಹೌಸ್ ಹಿಂಭಾಗ ಉತ್ತರ 30x40 (ಅಕ್ಕ-ಪಕ್ಕ) ಸರ್ಕಾರಿ ನೌಕರರ ಬಡಾವಣೆ ಪಕ್ಕ ಪೂರ್ವ 30x40, ಪಶ್ಚಿಮ 30x45, ಶಿವ-ಪಾರ್ವತಿ ಬಡಾವಣೆ ಪೂರ್ವ 30x46, 30x55, ಪಶ್ಚಿಮ 30x47, 30x55 ಐಗೂರು ವಿಜಯಕುಮಾರ್ 99457 02495

**WANTED**
FIELD EXECUTIVE (MALE) FOR DAVANAGERE BRANCH
* Attractive Salary * Fuel + Incentives
* ESI and EPF Facility
* Qualification required - Minimum 12th pass.
SAFAJ SECUTRITY & SERVICE
97437 56647, 88678 53961
Email : safajgroup@gmail.com

**ಮನೆ ಬಾಡಿಗೆಗೆ/ಲೀಸ್‌ಗಿದೆ**
3 BHK 1ನೇ ಮಹಡಿ, ಸ್ವಂತ ಬೋರ್‌ವೆಲ್ ಇದೆ. ಕಛೇರಿಗೂ ಲಭ್ಯವಿದೆ. ಕೆ.ಬಿ. ಬಡಾವಣೆ, ಸಿದ್ದಮ್ಮ ಪಾರ್ಕ್ ಹತ್ತಿರ, ದಾವಣಗೆರೆ. (ಸಸ್ಯಹಾರಿಗಳಿಗೆ ಮಾತ್ರ) 81478 74601

**TUTION CENTRE**
ICSE-CBSE-STATE Syllabus ಮಕ್ಕಳಿಗೆ ಟ್ಯೂಷನ್ ಮಾಡಲಾಗುವುದು.
1st Std. to 10th Std.
Contact : Suresh Master
M : 83109 32579

**Wanted**
Sales Executive
Good Graduated for Dvg & Chitradurga.
pigeon Brand home appliances company (Bengaluru base) whatapp resume to this number
91212 20550

**PART TIME JOBS**
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 ರಿಂದ 20,000 ಸಂಪಾದಿಸಿ (ಕೋರಿಯರ್ ಸೌಲಭ್ಯವಿದೆ) 91487 33213

**ಬೇಕಾಗಿದ್ದಾರೆ**
ಏಜೆನ್ಸಿಯಲ್ಲಿ ಡೆಲಿವರಿ ಕೊಡಲು ಡೆಲಿವರಿ ಹುಡುಗರು ಮತ್ತು ಡ್ರೈವರ್ ಬೇಕಾಗಿದ್ದಾರೆ. 94485 34028, 95354 84774

**ಬೇಕಾಗಿದ್ದಾರೆ**
ಇನ್ಶೂರೆನ್ಸ್ ಆಫೀಸ್‌ನಲ್ಲಿ ಆಫೀಸ್ ಬಾಯ್ ಕೆಲಸಕ್ಕೆ ಎಸ್.ಎಸ್.ಎಲ್.ಸಿ. ಉತ್ತೀರ್ಣ ಹೊಂದಿರುವ ಯುವಕ ಬೇಕಾಗಿದ್ದಾನೆ. ಸಮಯ ಬೆಳಿಗ್ಗೆ 10 ರಿಂದ ಸಂಜೆ 7 ರವರೆಗೆ. 9902120508, 8310981698

**ಸೈಟು ಮಾರಾಟಕ್ಕಿದೆ**
ಮಹಾಲಕ್ಷ್ಮಿ ಬಡಾವಣೆಯ ಪೂರ್ವ ದಿಕ್ಕಿನ 40x50 ಅಳತೆಯ ಸೈಟು ಮಾರಾಟಕ್ಕಿದೆ. ಸಂಪರ್ಕಿಸಿ : 78998 38164 ಮಧ್ಯವರ್ತಿಗಳಿಗೆ ಅವಕಾಶವಿಲ್ಲ

**ಮನೆ ಮಾರಾಟಕ್ಕೆ ಇದೆ**
ಜೆ.ಹೆಚ್ ಪಟೇಲ್ ಬಡಾವಣೆ 30x50, 2BHK ಮನೆ ಮಾರಾಟಕ್ಕೆ ಇದೆ. 96638 61259, 79758 23058

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**
ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.

ದಾವಣಗೆರೆ : 2 & 3 ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969) ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ M:9740523710

**REQUIRED**
SALESMAN - 2
DELIVERY BOYS-2
Attractive Salary
Only Experienced
May Contact:
Sri Malatesha Furnishing Centre
Darshan Complex, P.B.Road, Davanagere - 2.
91108 68664

**ಮಲ್ಲಿಕಾರ್ಜುನ ಪ್ಯಾಕೇಜ್ ಟೂರ್ಸ್**
ಬಟವಾಡಿ ವೃತ್ತ, ತುಮಕೂರು
ಫೋ: 84960 44942, 82774 09101
7-7-2023 ನಾಲ್ಕು ಜ್ಯೋತಿರ್ಲಿಂಗ ಪುಣ್ಯ ದರ್ಶನದ ಗುಜರಾತ್- ಮಧ್ಯಪ್ರದೇಶ ವಿಮಾನ ಪ್ರವಾಸ: ಸೋಮನಾಥ, ನಾಗೇಶ್ವರ, ಮಹಾಕಾಳೇಶ್ವರ, ಓಂಕಾರೇಶ್ವರ, ಪಟೇಲ್ ಪ್ರತಿಮೆ, ಪೋರ್ ಬಂದರ್, ದ್ವಾರಕ, ಅಹಮದಾಬಾದ್, ಭಾವನಗರ, ಇತರೆ 10 ದಿನಗಳು.
28-6-23 ತಮಿಳುನಾಡು ಬಸ್ ಪ್ರವಾಸ; ರಾಮೇಶ್ವರ, ಕನ್ಯಾಕುಮಾರಿ, ಪಳನಿ, ಶ್ರಿರಂಗಂ, ಕೊಡೈಕೆನಾಲ್, 5 ದಿನಗಳು ರೂ. 12000/-
25-7-2023 ರಾಜಸ್ಥಾನ ವಿಮಾನ ಪ್ರವಾಸ: ಜೈಪುರ, ಪುಷ್ಕರ, ಉದಯಪುರ, ಜೈಸಲ್ಮೇರ್, ಜೋದ್ ಪುರ, ನಾಥದ್ವಾರ, ಮೌಂಟ್ ಅಬು.. 9 ದಿನಗಳು ರೂ. 39900/-
28-7-2023 ದೆಹಲಿ, ಕಾಶಿ, ಗಯಾ ವಿಮಾನ ಪ್ರವಾಸ: ಅಯೋಧ್ಯ, ಕಾಶಿ, ದೆಹಲಿ, ಆಗ್ರಾ, ಗಯಾ, ಬುದ್ಧಗಯ ಗಯಾ ಇತರೆ 9 ದಿನಗಳು. ರೂ. 36900/-
11-8-23 ಮುಂಬೈ-ಶಿರಡಿ ಮೂರು ಜ್ಯೋತಿರ್ಲಿಂಗ ರೈಲು ಪ್ರವಾಸ: ಭೀಮಾಶಂಕರ, ಘೃಷ್ಣೇಶ್ವರ, ತ್ರಯಂಬಕೇಶ್ವರ, ಎಲ್ಲೋರ, ಮುಂಬೈ, ಶಿರಡಿ, ನಾಸಿಕ್, ಶನಿಸಿಂಗನಾಪುರ, ಎಲ್ಲೋರ, ಪಂಡರಾಪುರ . 9 ದಿನಗಳು ರೂ. 16900/-
ಎಲ್ಲಾ ಪ್ರವಾಸಕ್ಕೂ ತಿಂಡಿ-ಊಟ, ಮಿನರಲ್ ವಾಟರ್, ಎಸಿ ರೂಂ, ಗೈಡ್, ಪ್ರಯಾಣ ವೆಚ್ಚ ಸೇರಿದೆ. (ಸ್ಥಳೀಯ ವೆಚ್ಚ ಪ್ರತ್ಯೇಕ)
ಮಲ್ಲಿಕಾರ್ಜುನ ಟೂರ್ಸ್, ತುಮಕೂರು 8496044942, 8277409101

**ಸೈಟುಗಳು ಮಾರಾಟಕ್ಕಿವೆ**
ಎಸ್.ಎಸ್. ಲೇಔಟ್ 40x60, 40x60, 30x50, 30x50 ಬಸವೇಶ್ವರ 40x60, 30x50, 30x50 ಎಂಸಿಸಿ ಬಿ ಬ್ಲಾಕ್ 17x60 ಕಮರ್ಷಿಯಲ್ ಎಂಸಿಸಿ ಬಿ ಬ್ಲಾಕ್, 40x60, 40x60, 40x60 ಆಂಜನೇಯ ಬಡಾವಣೆ 40x50 ಪ್ರಶಾಂತ್, 7349488737

**ನೇರ ಪರೀಕ್ಷೆಗಳು**
SSLC, PUC, BA, B.Com, NTC, BBA, MBA (ALL) B.Tech, Diploma, ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ ಶ್ರೀ ಗಂಗೋತ್ರಿ ಕರೆಸ್ಪಾಂಡೆನ್ಸ್ ಕಾಲೇಜ್ ಲಾಯರ್ ರೋಡ್, ದಾವಣಗೆರೆ. ಫೋ. : 86602 35013

**REQUIRED**
Job Title : Autocad Engineer ( Female Candidate Required)
Experience: Fresher / Experienced
Qualification : B.E Civil /Diploma With Autocad Course. Salary :1.5 lakh-2.5 lakh per annum
90362 61260

**SHARP**
Application for Interview
Sales Executive, Any Degree (Two Wheeler Compulsory)
Office Receptionist any degree Computer knowledge
Website : in.sharp
GAURAV COMMUNICATION DAVANGERE.
9379906688, 9448728866

**ಟ್ಯಾಲಿ ಆಪರೇಟರ್ ಬೇಕಾಗಿದ್ದಾರೆ.**
ಪುರುಷ ಅಭ್ಯರ್ಥಿ 98860 97065

**WANTED**
Teachers with B.Com / B.Sc & Fluent in English to Teach in Davanagere School.
98448 35527, 88809 87079

**TO-LET**
3BHK Ground Floor To Let for Veg Only
Mob : 94492 87516

**WORK FROM HOME**
Part time / Full time
Everyday Earning
200/- to 3000 per day
Contact : Madhusudhan J
90363 26028

**ಸೈಟ್ ಮಾರಾಟಕ್ಕಿದೆ**
ದಾವಣಗೆರೆ ನಗರದ ಹೊರವಲಯದ ಕುಂದುವಾಡ ಹತ್ತಿರ ಇರುವ ತುಂಗಭದ್ರಾ ಬಡಾವಣೆಯಲ್ಲಿ 20x30 ಅಳತೆಯ, ಉತ್ತರ ಮುಖವುಳ್ಳ ಸೈಟ್ ಮಾರಾಟಕ್ಕಿದೆ. ಸಂಪರ್ಕಿಸಿ : 97416 84666, 82177 98233

**WANTED FEMALE TEACHERS**
B.Sc B.Ed-2. B.A B. Ed-2 D.Ed -2 NTC -2
contact immediately to secretary vinayaka convent kalikadevi road dvg.
95356 10817, 88920 07561

**ಶಾಲಾ ವಾಹನ ಚಾಲಕರು ಬೇಕಾಗಿದ್ದಾರೆ**
ಆಸಕ್ತರು ಈ ದೂರವಾಣಿ ನಂಬರ್‌ಗೆ ಕರೆಮಾಡಿ
7090970567, 6364870055

**WANTED TEACHERS**
Eduplanet International School, Davangere.
2 years Experiance
BSc., B.Ed., B.P.Ed.,
7676181417, 7019932983

**LADY TEACHERS WANTED**
B.Sc B.Ed -2 B.A B.Ed-2 D.Ed - 2
Contact to Vinayaka Public School Kondajji Road. Near Devanagari Gas Godown Dvg.
95356 10817

**WANTED TEACHERS**
Teachers wanted to a reputed school in Davanagere. B.Sc or Any Degree with good communication skill
99641 10736

**WANTED TEACHERS**
Kids Campus International Pre school Davangere
Wanted : Teachers for playgroup, Pre-kg, Lkg and Ukg
Fluency in English
99003 78196

**TEACHERS' REQUIRED**
Qualified & Experienced, Pre School-2,
Primary Teachers.
Kannada - 1, Hindi -2
Mathematics - 1, EVS - 1,
Higher primary Teachers
Kannada - 1, Hindi - 2,
Mathematics - 2, PE - 1. Contact :
9964022607, 8746895680, 9980148289, 9880743838

# ನಗರ - ಗ್ರಾಮಾಂತರ ಪ್ರದೇಶಗಳಲ್ಲಿ ಇಂದು ವಿದ್ಯುತ್ ವ್ಯತ್ಯಯ



ದಾವಣಗೆರೆ, ಯರಗುಂಟೆ, ಆನಗೋಡು, ಅತ್ತಿಗೆರೆ, ಮಾಯಕೊಂಡ ಮತ್ತು ಕುಕ್ಕುವಾಡ ವಿದ್ಯುತ್ ಉಪ ಕೇಂದ್ರಗಳಲ್ಲಿ ತುರ್ತು ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿರುವುರಿಂದ ಇಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

ಎಂ.ಸಿ.ಸಿ. ಬಿ. ಬ್ಲಾಕ್, ಸಿದ್ದವೀರಪ್ಪ ಬಡಾವಣೆ, ಎಸ್.ಎಸ್. ಲೇಔಟ್ ಎ ಮತ್ತು ಬಿ ಬ್ಲಾಕ್, ಎಂ.ಸಿ.ಸಿ. ಬಿ. ಬ್ಲಾಕ್, ಕುವೆಂಪು ನಗರ, ನಿಜಲಿಂಗಪ್ಪ ಬಡಾವಣೆ, ಮೌನೇಶ್ವರ ಬಡಾವಣೆ, ನಿಟ್ಟುವಳ್ಳಿ, ಲೆನಿನ್ ನಗರ, ಸರಸ್ವತಿ ನಗರ, ಶಕ್ತಿ ನಗರ, ಡಿ.ಸಿ.ಎಂ. ಟೌನ್ ಶಿಫ್, ಕೊಟ್ಟೂರೇಶ್ವರ ಬಡಾವಣೆ, ಕೆ.ಎಸ್.ಆರ್.ಟಿ.ಸಿ., ಭಗತ್ ಸಿಂಗ್ ನಗರ, ಈರುಳ್ಳಿ ಮಾರುಕಟ್ಟೆ, ತರಕಾರಿ ಮಾರುಕಟ್ಟೆ, ಕೆ.ಟಿ.ಜೆ. ನಗರ, ಕೆ.ಬಿ. ಬಡಾವಣೆ, ಪಿ.ಜೆ. ಬಡಾವಣೆ, ಈದ್ಗಾ ಕಾಂಪ್ಲೆಕ್ಸ್, ವಿನೋಬನಗರ, ಎಸ್.ಎಸ್. 'ಬಿ' ಬ್ಲಾಕ್, ಬಾಲಾಜಿ ನಗರ, ಬಸವೇಶ್ವರ ನಗರ, ರೆಹಮಾನ್ ರಸ್ತೆ, ಕೊರಚರ ಹಟ್ಟಿ, ದೇವರಾಜ್ ಕ್ವಾರ್ಟರ್ಸ್, ಇಂದಿರಾ ನಗರ, ಕಾರ್ಲ್‌ಮಾರ್ಕ್ಸ್ ನಗರ, ಸಿದ್ದರಾಮೇಶ್ವರ ಬಡಾವಣೆ, ಮಂಡಕ್ಕಿ ಭಟ್ಟಿ, ಶಿವ-ಪಾರ್ವತಿ ನಗರ, ಮಂಡೀ ಪೇಟೆ, ಬಿನ್ನಿ ಕಂಪನಿ ರಸ್ತೆ, ಮಹಾವೀರ ರಸ್ತೆ, ಎನ್.ಆರ್. ರಸ್ತೆ, ಇಸ್ಲಾಂ ಪೇಟೆ, ಬೆಳ್ಳೂಡಿ ಗಲ್ಲಿ, ಬಿ.ಟಿ. ಗಲ್ಲಿ, ವಿಜಯಲಕ್ಷ್ಮಿ ರಸ್ತೆ, ಎಂ.ಜಿ. ರಸ್ತೆ, ಗೂಡ್‌ಶೆಡ್ ರಸ್ತೆ, ಆಜಾದ್ ನಗರ, ಅಕ್ಸಾ ಮಸೀದಿ, ಹೆಗಡೆ ನಗರ, ಮಾಗಾನಹಳ್ಳಿ ರಸ್ತೆ, ಅಮ್ಮಾಜಾನ್ ಬಾಬಾಜಾನ್ ದರ್ಗಾ, ಜೋಗಲ್ ಬಾಬಾ ಲೇಔಟ್, ದುರ್ಗಾಂಬಿಕ ಬಡಾವಣೆ, ಹೊಸ ಮತ್ತು ಹಳೆ ಚಿಕ್ಕನಹಳ್ಳಿ ಬಡಾವಣೆ, ಎಂ.ಸಿ.ಸಿ. ಬಿ. ಬ್ಲಾಕ್, ದೇವರಾಜ್ ಅರಸ್ ಬಡಾವಣೆ ಎ, ಬಿ ಮತ್ತು ಸಿ ಬ್ಲಾಕ್, ಮಹಾನಗರ ಪಾಲಿಕೆ, ಎಂ.ಬಿ.ಕೇರಿ, ಚಲುವಾದಿ ಕೇರಿ, ಹೊಂಡದ ವೃತ್ತ, ಜಾಲಿ ನಗರ, ದುರ್ಗಾಂಬಿಕ ದೇವಸ್ಥಾನದ ಹತ್ತಿರ, ಇ.ಡಬ್ಲ್ಯೂ.ಎಸ್. ಕಾಲೋನಿ, ಗಣೇಶ್‌ರಾವ್ ವೃತ್ತ. ಇ.ಎಸ್.ಐ. ಆಸ್ಪತ್ರೆ

ದೇವರಾಜ ಅರಸು ಬಡಾವಣೆ ಎ, ಬಿ ಮತ್ತು ಸಿ ಬ್ಲಾಕ್, ಕರೂರು ಇಂಡಸ್ಟ್ರಿಯಲ್ ಏರಿಯಾ, ಡಿ.ಸಿ. ಕಛೇರಿ, ಜಿ.ಎಂ.ಐ.ಟಿ., ಶಂಕರ್ ವಿಹಾರ ಬಡಾವಣೆ, ಶಾಂತಿ ನಗರ, ರಶ್ಮಿ, ಹರಿಹರ ರಸ್ತೆ, ವಿಜಯ ನಗರ, ಅಶೋಕ ನಗರ, ಆರ್.ಟಿ.ಓ. ಕಛೇರಿ, ಎಸ್.ಪಿ. ಕಛೇರಿ, ರಿಂಗ್ ರಸ್ತೆ, ಶಿಬಾರ, ಎಸ್.ಎಂ.ಕೆ. ನಗರ, ಹಾಗೂ ಚಿತ್ತಾನಹಳ್ಳಿ, ಕಕ್ಕರಗೊಳ್ಳ, ಆವರಗೊಳ್ಳ, ನೀಲಾನಹಳ್ಳಿ, ದೇವರಹಟ್ಟಿ, ದೊಡ್ಡಬಾತಿ, ಹಳೆಬಾತಿ, ನಾರಾಯಣ ಕ್ಯಾಂಪ್, ಯರಗುಂಟೆ, ಕೋಡಿಹಳ್ಳಿ ಗ್ರಾಮಗಳು ಹಾಗೂ ಸುತ್ತಮುತ್ತಲಿನ ಗ್ರಾಮಗಳು.

ಹನುಮನಹಳ್ಳಿ, ಕೊಗ್ಗನೂರು, ಹನುಮನಹಳ್ಳಿ, ಆನಗೋಡು, ಹೆಬ್ಬಾಳು, ನೀರ್ಥಡಿ, ಶಿವಪುರ, ಹಾಲುವರ್ತಿ, ಗಂಗನಕಟ್ಟೆ, ನೇರ್ಲಿಗಿ, ಚಿನ್ನಸಮುದ್ರ ಗ್ರಾಮಗಳು ಹಾಗೂ ಸುತ್ತಮುತ್ತಲಿನ ಗ್ರಾಮಗಳು ಮತ್ತು ಆರಾಧ್ಯ ಕೈಗಾರಿಕೆ.

ಅತ್ತಿಗೆರೆ, ಕುರ್ಕಿ, ಬಾಡ, ಕಬ್ಬೂರು, ಹಿರೇತೊಗಲೇರಿ, ಗೋಪನಾಳು, ಕಂದಗಲ್, ರಾಮಗೊಂಡನಹಳ್ಳಿ, ಕಾಶೀಪುರ ಗ್ರಾಮಗಳು ಹಾಗೂ ಸುತ್ತಮುತ್ತಲಿನ ಗ್ರಾಮಗಳು. ದಿಂಡದಹಳ್ಳಿ, ನರಗನಹಳ್ಳಿ, ಮಾಯಕೊಂಡ, ಬೊಮ್ಮೇನಹಳ್ಳಿ, ಬಾವಿಹಾಳು, ಬುಳ್ಳಾಪುರ, ಕೊಡಗನೂರು, ನಲ್ಕುಂದ, ಬಸಾಪುರ, ಅಣಬೇರು ಗ್ರಾಮಗಳು ಹಾಗೂ ಸುತ್ತಮುತ್ತಲಿನ ಗ್ರಾಮಗಳು.

ಕುಕ್ಕುವಾಡ, ಕೋಲ್ಕುಂಟೆ, ಗಿರಿಯಾಪುರ, ಕೈದಾಳೆ, ಹದಡಿ, ಕಲಬಂಡೆ, ಲೋಕಿಕೆರೆ, ಬಲ್ಲೂರು, ಕನಗೊಂಡನಹಳ್ಳಿ, ಮತ್ತಿ, ನಾಗರಸನಹಳ್ಳಿ, ಹೂವಿನಮಡು ಗ್ರಾಮಗಳು ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

# ಹಳೆಯ ಪ್ರಕರಣಗಳ ಇತ್ಯರ್ಥಕ್ಕೆ ಆದ್ಯತೆ



**ವಕೀಲರ ಸಂಘದ ಪದಾಧಿಕಾರಿಗಳ ಪದಗ್ರಹಣ ಹಾಗೂ ನ್ಯಾಯಾಧೀಶರಿಗೆ ಸ್ವಾಗತ ಸಮಾರಂಭದಲ್ಲಿ ನ್ಯಾಯಮೂರ್ತಿ ರಾಜೇಶ್ವರಿ ಎನ್. ಹೆಗಡೆ**

ದಾವಣಗೆರೆ, ಮೇ 23- ನ್ಯಾಯಾಲಯಗಳಲ್ಲಿ ಹತ್ತು ವರ್ಷಗಳಿಗೂ ಹೆಚ್ಚು ಕಾಲದಿಂದ ಬಾಕಿ ಇರುವ ಪ್ರಕರಣಗಳ ಇತ್ಯರ್ಥಕ್ಕೆ ಆದ್ಯತೆ ನೀಡಬೇಕಿದೆ. ಇದಕ್ಕೆ ವಕೀಲರ ಸಹಕಾರ ಅಗತ್ಯ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ರಾಜೇಶ್ವರಿ ಎನ್.ಹೆಗಡೆ ಕರೆ ನೀಡಿದರು.

ನಗರದ ಜಿಲ್ಲಾ ವಕೀಲರ ಸಂಘದ ಸಭಾಭವನದಲ್ಲಿ ಆಯೋಜಿಸಲಾಗಿದ್ದ ಜಿಲ್ಲಾ ವಕೀಲರ ಸಂಘದ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ಹಾಗೂ ನೂತನವಾಗಿ ವರ್ಗಾವಣೆಯಾಗಿ ಬಂದಿರುವ ನ್ಯಾಯಾಧೀಶರಿಗೆ ಸ್ವಾಗತ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಯಾವುದೇ ನ್ಯಾಯಾಲಯದ ಕಾರ್ಯ ಕಲಾಪಗಳು ನಡೆಯಲು ವಕೀಲರ ಸಹಕಾರ ಅಗತ್ಯ. ಜಿಲ್ಲಾ ವಕೀಲರ ಸಂಘದಿಂದ ಹೊಸ ಹೊಸ ಕಾರ್ಯಕ್ರಮ ಹಮ್ಮಿಕೊಳ್ಳ ಬೇಕಿದೆ. ಅಲ್ಲದೇ ಹೊಸ ವಕೀಲರು ಹೆಚ್ಚು ಅಧ್ಯಯನ ಮಾಡಲಿ ಎಂದು ಸಲಹೆ ನೀಡಿದರು.

2ನೇ ಹೆಚ್ಚುವರಿ ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯದ ನ್ಯಾಯಾಧೀಶರಾಗಿ ವರ್ಗಾವಣೆಯಾಗಿ ಬಂದಿರುವ ಕೆ.ಹೆಚ್. ರೇಷ್ಮ ಮಾತನಾಡಿ, ವಕೀಲರು ಯಾವುದೇ ಪ್ರಕರಣಗಳಲ್ಲಿ ವಿಳಂಬ ಮಾಡದೆ ತಕ್ಷಣವೇ ಸಂಬಂಧ ಪಟ್ಟಂತೆ ಮಾಹಿತಿ ಪಡೆದು ಅವುಗಳ ವಿಲೇವಾರಿಗೆ ಮುಂದಾಗಬೇಕು. ಕಕ್ಷಿದಾರರಿಗೆ ತ್ವರಿತವಾಗಿ ನ್ಯಾಯದಾನ ಮಾಡಲು ಸಹಕರಿಸಬೇಕು ಎಂದು ಕರೆ ನೀಡಿದರು.

ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರಕ್ಕೆ ಸದಸ್ಯ ಕಾರ್ಯದರ್ಶಿಯಾಗಿ ವರ್ಗಾವಣೆಯಾಗಿ ಬಂದಿರುವ ಹಿರಿಯ ಸಿವಿಲ್ ನ್ಯಾಯಾಧೀಶ ಮಹಾವೀರ್ ಮಾತನಾಡಿ, ನ್ಯಾಯ ದಾನ ಮಾಡುವ ಜೊತೆಗೆ ಕಕ್ಷಿದಾರರು ಹಾಗೂ ಸಾರ್ವಜನಿಕರಿಗೆ ಕಾನೂನು ಅರಿವು ಮೂಡಿಸುವ ಕೆಲಸವನ್ನೂ ಮಾಡಬೇಕಿದೆ. ಈ ದಿಸೆಯಲ್ಲಿ ಪ್ರಾಧಿಕಾರದಿಂದ ಸಹಕಾರ ನೀಡುವುದಾಗಿ ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್. ಹೆಚ್.ಅರುಣ್ ಕುಮಾರ್ ಮಾತನಾಡಿ, ಒಕ್ಕೂಟ ವ್ಯವಸ್ಥೆಯಲ್ಲಿ ನ್ಯಾಯಾಂಗ ತನ್ನ ಶ್ರೇಷ್ಠತೆಯನ್ನು ಕಾಯ್ದುಕೊಂಡು ಬಂದಿದೆ. ಕಾರ್ಯಾಂಗ ಮತ್ತು ಶಾಸಕಾಂಗಗಳು ದಾರಿ ತಪ್ಪಿದ ಸಂದರ್ಭದಲ್ಲಿ ಅವುಗಳನ್ನು ಸರಿದಾರಿಗೆ ತರುವಲ್ಲಿ ನ್ಯಾಯಾಂಗವು ಯಶಸ್ವಿಯಾಗಿ ತನ್ನ ಜವಾಬ್ದಾರಿಯನ್ನು ನಿರ್ವಹಿಸಿದೆ ಎಂದರು.

ನ್ಯಾಯಾಧೀಶರು ಮತ್ತು ವಕೀಲರು ಒಂದೇ ರಥದ ಚಕ್ರಗಳಾಗಿದ್ದು, ಪರಸ್ಪರ ಗೌರವ, ಸಹಕಾರದಿಂದ ಇದ್ದರೆ ನ್ಯಾಯಾಂಗದ ಉನ್ನತಿ ಸಾಧ್ಯ. ವಕೀಲರ ಸಂಘದ ನೂತನ ಸಮಿತಿಯು ವಕೀಲರ ಹಕ್ಕುಗಳಿಗೆ ಚ್ಯುತಿ ಬಾರದಂತೆ ಘನತೆ ಕಾಪಾಡಿಕೊಂಡು ಹೋಗಲಿದೆ ಎಂದು ಹೇಳಿದರು.

ವೇದಿಕೆಯಲ್ಲಿ 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ವಿಜಯಾನಂದ, 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಪ್ರವೀಣ್‌ಕುಮಾರ್, ಮಕ್ಕಳ ಸ್ನೇಹಿ ನ್ಯಾಯಾಲಯದ ನ್ಯಾಯಾಧೀಶ ಎನ್.ಶ್ರೀಪಾದ್, ಕೌಟುಂಬಿಕ ನ್ಯಾಯಾಲಯದ ನ್ಯಾಯಾಧೀಶ ದಶರಥ್, ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶ ಶಿವಪ್ಪ ಸಲಗರೆ, ಹಿರಿಯ ಸಿವಿಲ್ ನ್ಯಾಯಾಧೀಶರಾದ ನಿವೇದಿತಾ ಉಪಸ್ಥಿತರಿದ್ದರು.

ಕಾರ್ಯಕ್ರಮದ ನಿರ್ವಹಣೆಯನ್ನು ಜಿಲ್ಲಾ ವಕೀಲರ ಸಂಘದ ಕಾರ್ಯದರ್ಶಿ ಎಸ್.ಬಸವರಾಜ್, ಉಪಾಧ್ಯಕ್ಷರಾದ ಜಿ.ಕೆ. ಬಸವರಾಜ್ ಗೋಪನಾಳು, ಸಹಕಾರ್ಯದರ್ಶಿ ಎ.ಎಸ್.ಮಂಜುನಾಥ್, ನಿಕಟಪೂರ್ವ ಕಾರ್ಯದರ್ಶಿ ಎಲ್.ಹೆಚ್. ಪ್ರದೀಪ್, ನಿಕಟಪೂರ್ವ ಸಹ ಕಾರ್ಯದರ್ಶಿ ಜಿ.ಕೆ.ಬಸವರಾಜ್ ವಹಿಸಿದ್ದರು.

# ಎಸ್.ಎಸ್.ಮಲ್ಲಿಕಾರ್ಜುನ್‌ಗೆ ಸಚಿವ ಸ್ಥಾನ ನೀಡಲು ಒತ್ತಾಯ

ದಾವಣಗೆರೆ, ಮೇ 23- ರಾಜ್ಯದಲ್ಲಿ ಅಧಿಕಾರದ ಚುಕ್ಕಾಣಿ ಹಿಡಿದಿರುವ ಕಾಂಗ್ರೆಸ್ ಸರ್ಕಾರದಲ್ಲಿ ಮಾಜಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರಿಗೆ ಪ್ರಮುಖ ಖಾತೆ ನೀಡುವಂತೆ ಜಿಲ್ಲಾ ಕಾಂಗ್ರೆಸ್ ಒತ್ತಾಯಿಸಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ. ಮಂಜಪ್ಪ ಅವರು, ರಾಜ್ಯದಲ್ಲಿ ಕಾಂಗ್ರೆಸ್ ಪರ್ವ ಆರಂಭವಾಗಿದ್ದು, ಇಡೀ ರಾಜ್ಯದ ಜನತೆ ಕಾಂಗ್ರೆಸ್ ಪರ ಒಲವು ತೋರಿದ್ದಾರೆ. ಅದರಂತೆ ಜಿಲ್ಲೆಯಲ್ಲಿ ಆರು ವಿಧಾನಸಭಾ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಗೆಲುವು ಸಾಧಿಸಿದ್ದಾರೆ ಎಂದರು.

ಈ ಹಿಂದೆ ಸಚಿವರಾಗಿದ್ದಾಗ ದಾವಣಗೆರೆ ಜಿಲ್ಲೆಯನ್ನು ಅಭಿವೃದ್ಧಿಪಡಿಸುವಲ್ಲಿ ಸಾಕಷ್ಟು ಶ್ರಮಿಸಿರುವ ಎಸ್.ಎಸ್. ಮಲ್ಲಿಕಾರ್ಜುನ್ ಅವರಿಗೆ ಸಂಪುಟ ದರ್ಜೆ ಸಚಿವರನ್ನಾಗಿ ಮಾಡುವ ಜೊತೆಗೆ ಪ್ರಮುಖ ಖಾತೆಯನ್ನು ನೀಡಬೇಕೆಂದು ಆಗ್ರಹಿಸಿದರು. ಭಾರತ್ ಜೋಡೋ, ಪ್ರಜಾಧ್ವನಿ, ಚುನಾವಣೆ ಪ್ರಣಾಳಿಕೆಯಲ್ಲಿ ಘೋಷಿಸಿದ ಐದು ಗ್ಯಾರಂಟಿಗಳು ಸೇರಿದಂತೆ ಸಿದ್ದರಾಮಯ್ಯ ಅವರ ಅಮೃತ ಮಹೋತ್ಸವದಂತಹ ಯಶಸ್ವೀ ಕಾರ್ಯಕ್ರಮಗಳ ಮೂಲಕ ಕಾಂಗ್ರೆಸ್ ಜನರ ಮನ ಗೆದ್ದಿದೆ ಎಂದರು. ಯಾವುದೇ ಪ್ರಬಲ ಖಾತೆ ನೀಡಿದರೂ ಅದನ್ನು ಎಸ್ಸೆಸ್ಸೆಂ ಸಮರ್ಪಕವಾಗಿ ನಿಭಾಯಿಸಲಿದ್ದಾರೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಕಾಂಗ್ರೆಸ್ ಮುಖಂಡರಾದ ಮುದೇಗೌಡ್ರ ಗಿರೀಶ್, ಎ. ನಾಗರಾಜ್, ಅಬ್ದುಲ್ ಲತೀಫ್, ಎಸ್. ಮಲ್ಲಿಕಾರ್ಜುನ್, ಶಾಮನೂರು ಟಿ. ಬಸವರಾಜ್ ಮತ್ತಿತರರಿದ್ದರು.

# ದಾವಣಗೆರೆ - ಕಲ್ಬುರ್ಗಿಗೆ ನಾಳೆಯಿಂದ ಹವಾ ನಿಯಂತ್ರಿತ ಸಾರಿಗೆ ಸೌಕರ್ಯ



ದಾವಣಗೆರೆ, ಮೇ. 23 - ಪ್ರಯಾಣಿಕರ ಅನುಕೂಲಕ್ಕಾಗಿ ಮೇ 25 ರಿಂದ ದಾವಣಗೆರೆ ವಿಭಾಗದಿಂದ ಹೊರಡುವ ಮಾರ್ಗಗಳಿಗೆ ಹವಾ ನಿಯಂತ್ರಿತ ಸಾರಿಗೆ ಸೌಕರ್ಯವನ್ನು ಕಲ್ಪಿಸಲಾಗಿದೆ. ರಾತ್ರಿ 8.30ಕ್ಕೆ ಹೊರಟು ಹರಿಹರ-ಹರಪನಹಳ್ಳಿ-ಹೊಸಪೇಟೆ-ಗಂಗಾವತಿ-ಲಿಂಗಸೂರು ಮಾರ್ಗವಾಗಿ ಬೆಳಿಗ್ಗೆ 5.30 ಕ್ಕೆ ಕಲ್ಬುರ್ಗಿಗೆ ಮತ್ತು ಕಲ್ಬುರ್ಗಿಯಿಂದ ರಾತ್ರಿ 9.15 ಕ್ಕೆ ಹೊರಟು ಲಿಂಗಸೂರು-ಗಂಗಾವತಿ-ಹೊಸಪೇಟೆ-ಹರಪನಹಳ್ಳಿ-ಹರಿಹರ ಮಾರ್ಗವಾಗಿ ಬೆಳಿಗ್ಗೆ 6.25 ಕ್ಕೆ ದಾವಣಗೆರೆ ತಲುಪುವುದು. ksrtc.karnataka.gov.in ಜಾಲತಾಣದ ಮೂಲಕ ಮುಂಗಡ ಬುಕ್ಕಿಂಗ್ ಮಾಡಲು ಪ್ರಯಾಣಿಕರಿಗೆ ಅವಕಾಶ ಕಲ್ಪಿಸಲಾಗಿದೆ ಎಂದು ಕ.ರಾ.ರ.ಸಾ. ನಿಗಮದ ವಿಭಾಗೀಯ ನಿಯಂತ್ರಣಾಧಿಕಾರಿ ತಿಳಿಸಿದ್ದಾರೆ.

## ರಾಣೇಬೆನ್ನೂರು ತಾ.ನಲ್ಲಿ ನಾಳೆ ವಿದ್ಯುತ್ ವ್ಯತ್ಯಯ

ರಾಣೇಬೆನ್ನೂರು, ಮೇ 23- ಹಲಗೇರಿ ವ್ಯಾಪ್ತಿಯಲ್ಲಿ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಮಣಕೂರು, ಲಿಂಗದಹಳ್ಳಿ, ಅಂತರವಳ್ಳಿ, ನಂದಿಹಳ್ಳಿ, ಯಲಬಡಗಿ, ಗೋಡಿಹಾಳ, ನಿಟ್ಟೂರು, ಕೋಣನತಲೆ ಗ್ರಾಮಗಳಲ್ಲಿ ನಾಳೆ ದಿನಾಂಕ 25 ರ ಗುರುವಾರ ಬೆಳಿಗ್ಗೆ 10 ರಿಂದ ಸಂಜೆ 6 ರವರೆಗೆ ವಿದ್ಯುತ್ ಸರಬರಾಜು ಇರುವುದಿಲ್ಲ.

# ಪೊಲೀಸ್ ಅಧಿಕಾರಿಗಳಿಗೆ ಡಿಕೆಶಿ ತರಾಟೆ

## ಇಲಾಖೆಯನ್ನು ಕೇಸರೀಕರಣ ಮಾಡಲು ಬಿಡುವುದಿಲ್ಲ: ಉಪ ಮುಖ್ಯಮಂತ್ರಿ



ಬೆಂಗಳೂರು, ಮೇ 23 - ರಾಜ್ಯದಲ್ಲಿ ಪೊಲೀಸ್ ಇಲಾಖೆಯನ್ನು ಕೇಸರಿಕರಣ ಮಾಡಲು ಹೊರಟಿದ್ದೀರಾ ನೀವು? ನಮ್ಮ ಸರ್ಕಾರದಲ್ಲಿ ಇದಕ್ಕೆ ಅವಕಾಶ ಕೊಡೊಲ್ಲ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪೊಲೀಸ್ ಅಧಿಕಾರಿಗಳನ್ನು ತರಾಟೆ ತೆಗೆದುಕೊಂಡರು.

ಉನ್ನತ ಮಟ್ಟದ ಪೊಲೀಸ್ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು ಮಂಗಳೂರು, ಬಿಜಾಪುರ, ಬಾಗಲಕೋಟದಲ್ಲಿ ನೀವು ಹೇಗೆ ಕೇಸರಿ ಬಟ್ಟೆ ಹಾಕೊಂಡು ಇಲಾಖೆಗೆ ಅವಮಾನ ಮಾಡಿದ್ದೀರಾ ಅಂತಾ ಗೊತ್ತಿದೆ. ಈ ಸಭೆಗೂ ಕೇಸರಿ ಶಾಲು ಹಾಕಿಕೊಂಡು ಬರಬೇಕಾಗಿತ್ತು ಎಂದು ಖಾರವಾಗಿ ಹೇಳಿದರು.

ದೇಶದ ಬಗ್ಗೆ ಗೌರವ ಇದ್ದರೆ ರಾಷ್ಟ್ರ ಧ್ವಜ ಹಾಕಿಕೊಂಡು ಕೆಲಸ ಮಾಡಬೇಕಿತ್ತು. ನಮ್ಮ ಸರ್ಕಾರದಲ್ಲಿ ಪೊಲೀಸ್ ಇಲಾಖೆಯನ್ನು ಕೇಸರಿಕರಣ ಮಾಡಲು ನಾವು ಬಿಡಲ್ಲ ಎಂದರು.

ಪಿಎಸ್ಐ ನೇಮಕಾತಿ ಅಕ್ರಮದಲ್ಲಿ ಒಬ್ಬ ಎಡಿಜಿಪಿ ಓಎಂಆರ್ ಪೇಪರ್ ತಿದ್ದುತ್ತಾರೆ ಅಂದರೆ ಇಲಾಖೆ ಎಷ್ಟು ಕೆಟ್ಟು ಹೋಗಿದೆ ನೋಡಿ. ಪ್ರಕರಣ ಬಯಲಿಗೆ ತಂದವರನ್ನೇ ಪೀಡಿಸುತ್ತೀರಾ. ಸಚಿವ ಪ್ರಿಯಾಂಕ ಖರ್ಗೆ ಅವರಿಗೆ ಕಾಟ ಕೊಟ್ಟಿದ್ದೀರಾ. ಇಡೀ ದೇಶದಲ್ಲಿ ಕರ್ನಾಟಕ ಪೊಲೀಸ್ ಇಲಾಖೆಗೆ ಒಳ್ಳೆಯ ಹೆಸರಿತ್ತು. ಆ ಗೌರವ, ಘನತೆಯನ್ನು ಹಾಳು ಮಾಡಿದ್ದೀರ ನೀವು. ಎಲ್ಲಿ ನೋಡಿದರೂ ಬರೀ ಕಾಸು, ಕಾಸು, ಕಾಸು ಎಂದು ತರಾಟೆಗೆ ತೆಗೆದುಕೊಂಡರು.

ನಮ್ಮ ಸರ್ಕಾರದಲ್ಲಿ ಎಲ್ಲವೂ ಕ್ಲೀನ್ ಆಗಬೇಕು. ಜನ ಈ ಸರ್ಕಾರದಿಂದ ಬಹುದೊಡ್ಡ ಬದಲಾವಣೆಯನ್ನು ನಿರೀಕ್ಷೆ ಮಾಡಿದ್ದಾರೆ. ಅದು ಪೊಲೀಸ್ ಇಲಾಖೆಯಿಂದಲೇ ಶುರು ಆಗಬೇಕು. ಈ ಸರ್ಕಾರದಿಂದ ಬದಲಾವಣೆ ಸಂದೇಶ ಜನರಿಗೆ ಹೋಗಬೇಕು. ನಿಮ್ಮಿಂದ ನಮಗೆ ನಯಾಪೈಸೆ ಹಣ ಬೇಕಿಲ್ಲ. ನೀವು ಯಾರಿಗೂ ಹಣ ಕೊಡೋದು ಬೇಡ. ಜನ ನರಳದಂತೆ ಉತ್ತಮವಾಗಿ ಕೆಲಸ ಮಾಡಿದರೆ ಅಷ್ಟೇ ಸಾಕು ಎಂದರು.

ನಿಮ್ಮ ಹಿಂದಿನ ವರ್ತನೆ ನಮ್ಮ ಸರ್ಕಾರದಲ್ಲಿ ನಡೆಯೋಲ್ಲ. ಹಿಂದೆ ಪೇ ಸಿಎಂ ಅಭಿಯಾನ ಮಾಡಿದಾಗ ನನ್ನ ಮತ್ತು ಸಿದ್ದರಾಮಯ್ಯರ ಜೊತೆ ಹೇಗೆ ನಡೆದುಕೊಂಡಿದ್ದೀರಾ ಎಂಬುದು ಗೊತ್ತಿದೆ. ನಮ್ಮ ಮೇಲೆ ಕೇಸ್ ಹಾಕಿದ್ದೀರಿ. ನಮ್ಮ ಕಾರ್ಯಕರ್ತರ ಮೇಲೆ ಸುಳ್ಳು, ಸುಳ್ಳು ಸಾವಿರಾರು ಕೇಸ್ ಹಾಕಿ ತೊಂದರೆ ಕೊಟ್ಟಿದ್ದೀರಿ.

ಆದರೆ, ಟಿಪ್ಪು ಸುಲ್ತಾನ್ ಅವರನ್ನು ಹೊಡೆದು ಹಾಕಿದಂತೆ ಸಿದ್ದರಾಮಯ್ಯ ಅವರನ್ನು ಹೊಡೆದು ಹಾಕಬೇಕು ಎಂದು ಕೊಲೆ ಮಾಡಲು ಕರೆ ನೀಡಿದ, ಪ್ರೇರಣೆ ನೀಡಿದವರ ವಿರುದ್ಧ ಯಾಕೆ ಕೇಸ್ ಹಾಕಲಿಲ್ಲ ನೀವು? ಅದು ಅಪರಾಧ ಅಲ್ವಾ? ಎಂದು ಪ್ರಶ್ನಿಸಿದರು.

ನೀವು ಏನೇನೂ ಮಾಡಿದ್ದೀರಾ ಅಂತ ನಮ್ಮ ಬಳಿ ಸಾಕ್ಷಿ ಇವೆ. ನಾವು ಎಲ್ಲವನ್ನೂ ನಿಗಾ ಮಾಡಿದ್ದೇವೆ. ಇವೆಲ್ಲ ನಮ್ಮ ಸರ್ಕಾರದಲ್ಲಿ ನಡೆಯೋಲ್ಲ. ನೀವು ಬದಲಾಗಬೇಕು. ನಿಮ್ಮ ವರ್ತನೆ ಬದಲಾಗಬೇಕು. ಇಲ್ಲ ಅಂದರೆ ನಿಮ್ಮನ್ನೇ ಬದಲಾವಣೆ ಮಾಡಬೇಕಾಗುತ್ತದೆ. ನಾವು ದ್ವೇಷ ಸಾಧಿಸೋದಿಲ್ಲ. ಅದರಲ್ಲಿ ನಮಗೆ ನಂಬಿಕೆ ಇಲ್ಲ. ನೀವು ಬದಲಾಗಿ, ಹಳೆಯದು ಬಿಡಿ. ಹೊಸದಾಗಿ ಕೆಲಸ ಶುರು ಮಾಡಿ. ಜನರ ನೆಮ್ಮದಿ ಕಾಪಾಡಿ ಎಂದು ಶಿವಕುಮಾರ್ ಹೇಳಿದರು.

ಪ್ರಾಮಾಣಿಕವಾಗಿ ಕೆಲಸ ಮಾಡಿದರೆ ನಾವು ನಿಮ್ಮ ಜೊತೆ ಇರುತ್ತೇವೆ. ಈ ಸರ್ಕಾರದ ಮೇಲೆ ಜನ ನಂಬಿಕೆ ಇಟ್ಟಿದ್ದಾರೆ. ಅದನ್ನ ಉಳಿಸಿಕೊಳ್ಳಿ. ಈ ಸರ್ಕಾರದಿಂದ ಬದಲಾವಣೆ ಆಗುತ್ತಿದೆ ಎಂಬ ಸಂದೇಶವನ್ನು ನಿಮ್ಮ ಕೆಲಸದ ಮೂಲಕ ಜನರಿಗೆ ನೀಡಿ ಎಂದು ತಾಕೀತು ಮಾಡಿದರು.

# ರಾಣೇಬೆನ್ನೂರು : ಇಂದು ಚೌಡೇಶ್ವರಿ ದೇವಸ್ಥಾನದ ಕಳಸಾರೋಹಣ



ನಗರ ದೇವತೆ ಶ್ರೀ ತುಂಗಾಜಲ ಚೌಡೇಶ್ವರಿ ದೇವಿ ದೇವಸ್ಥಾನದ ನೂತನ ಗೋಪುರಕ್ಕೆ ಕಳಸಾರೋಹಣ ಹಾಗೂ ಸನ್ಮಾನ ಸಮಾರಂಭವು ಇಂದು ಮತ್ತು ನಾಳೆ ಐವರು ಶ್ರೀಗಳ ಸಾನ್ನಿಧ್ಯದಲ್ಲಿ ನಡೆಯಲಿದೆ ಎಂದು ಸಮಿ ತಿಯ ಅಧ್ಯಕ್ಷ ಶೇಖಪ್ಪ ಹೊಸಗೌಡ್ರ ತಿಳಿಸಿದ್ದಾರೆ.

ಹೊನ್ನಾಳಿ ಹಿರೇಕಲ್ಮಠದ ಚನ್ನಮಲ್ಲಿಕಾರ್ಜುನ ಶ್ರೀ, ದಿಂಡದಹಳ್ಳಿ ಪಶುಪತಿ ಶಿವಾನಂದ ಶ್ರೀ, ಲಿಂಗನಾಯ್ಕನಹಳ್ಳಿ ಚನ್ನವೀರ ಶಿವಯೋಗಿಗಳು, ಶನೇಶ್ವರ ಮಠದ ಶಿವಯೋಗಿ ಶ್ರೀ ಹಾಗೂ ವಿವೇಕಾನಂದಾಶ್ರಮದ ಪ್ರಕಾಶಾನಂದ ಮಹಾರಾಜರ ಸಾನ್ನಿಧ್ಯದಲ್ಲಿ ಶಾಸಕ ಪ್ರಕಾಶ ಕೋಳಿವಾಡ ಅಧ್ಯಕ್ಷತೆಯಲ್ಲಿ ಧರ್ಮಸಭೆ ನಡೆಯಲಿದೆ.

ಸಂಸದ ಶಿವಕುಮಾರ ಉದಾಸಿ, ಶಾಸಕರಾದ ರುದ್ರಪ್ಪ ಲಮಾಣಿ, ಬಸವರಾಜ ಶಿವಣ್ಣನವರ್, ಮಾಜಿ ಶಾಸಕರಾದ ಅರುಣಕುಮಾರ ಪೂಜಾರ್, ಆರ್. ಶಂಕರ್, ನಗರಸಭೆ ಸದಸ್ಯರಾದ ಪುಟ್ಟಪ್ಪ ಮರಿಯಮ್ಮನವರ್, ರೂಪಾ ಚಿನ್ನಿಕಟ್ಟೆ, ವರ್ತಕ ಮಲ್ಲೇಶಪ್ಪ ಅರಕೇರಿ, ಪೌರಾಯುಕ್ತ ನಿಂಗಪ್ಪ ಕುಮ್ಮಣ್ಣನವರ ಮತ್ತಿತರರು ಆಗಮಿ ಸುವರು. ಇಂದು ಕುರುಬಗೇರಿಯ ಶ್ರೀ ಬನಶಂಕರಿ ದೇವಸ್ಥಾನದಿಂದ ಎರಡು ನೂರು ಜನ ಮುತ್ತೈದೆಯರ ಕುಂಭ ಮೆರವಣಿಗೆಯಲ್ಲಿ ಕಳಸ ಹಾಗೂ ದೇವಿ ಮೂರ್ತಿಗೆ ಬೆಳ್ಳಿ ಕವಚ ತೆಗೆದು ಜಾನಪದ ಕಲಾ ಮೇಳಗಳೊಂದಿಗೆ ತೆಗೆದುಕೊಂಡು ಹೋಗಲಾಗುವುದು ಎಂದು ತಿಳಿಸಿದ ಶೇಖಪ್ಪ ಜೊತೆಗೆ ಕಮಿಟಿಯ ಏಕಾಂತ ಮುದಿಗೌಡ್ರ, ಕರಬಸಪ್ಪ ಜಾಡರ ಮತ್ತಿತರರಿದ್ದರು.

## ಹೊಸಪಾಳ್ಯ : ಸಂಭ್ರಮದ ಗ್ರಾಮದೇವತೆ ಹಬ್ಬ



ಮಲೇಬೆನ್ನೂರು, ಮೇ 23- ಹೊಸಪಾಳ್ಯ ಗ್ರಾಮದ ಗ್ರಾಮದೇವತೆ ಶ್ರೀ ಕರಿಯಮ್ಮ ದೇವಿ ಜಾತ್ರಾ ಮಹೋತ್ಸವದ ಅಂಗವಾಗಿ ಮಂಗಳವಾರ ದೇವಿಗೆ ಗ್ರಾಮದ ಮಹಿಳೆಯರು ಉಡಿ ತುಂಬಿ ಭಕ್ತಿ ಸಮರ್ಪಿಸಿದರು.

ರಾತ್ರಿ ದೇವಿಯ ಉತ್ಸವ ಮೂರ್ತಿಯ ಮೆರವಣಿಗೆ ಗ್ರಾಮಸ್ಥರ ಸಮ್ಮುಖದಲ್ಲಿ ಸಂಭ್ರಮದಿಂದ ಜರುಗಿತು. ವಿವಿಧ ಕಲಾ-ಮೇಳಗಳು ಮೆರವಣಿಗೆಗೆ ಮೆರಗು ತಂದವು. ಪಟಾಕಿ ಸಿಡಿತ ಗಮನ ಸೆಳೆಯಿತು. ಬುಧವಾರ ಬೆಳಗಿನಜಾವ ಹಿಟ್ಟಿನ ಕೋಣ ವಧೆ ನಂತರ ಚರಗ ಹಾಕಲಾಗುವುದು.

## ಶಾಸಕ ಪ್ರಕಾಶ ಕೋಳಿವಾಡ ಬುದ್ಧ-ಬಸವರ ಮೇಲೆ ಪ್ರಮಾಣ ವಚನ ಸ್ವೀಕಾರ



ರಾ ಣೇ ಬೆ ನ್ನೂ ರು , ಮೇ 23- ವಿಧಿದ್ವಾರಾ ರಚಿತವಾದ ಸಂವಿಧಾನಕ್ಕೆ ಶ್ರದ್ಧೆ, ನಿಷ್ಠೆಯಿಂದಿದ್ದು, ಭಾರತದ ಪರಮಾಧಿಕಾರ ಹಾಗೂ ಸಮಗ್ರತೆ ಯನ್ನು ಸಮರ್ಥಿಸುತ್ತೇನೆ ಎಂದು ವಿಧಾನ ಸಭೆ ಅಧಿವೇಶನದಲ್ಲಿ ರಾಣೇ ಬೆನ್ನೂರು ಶಾಸಕ ಪ್ರಕಾಶ ಕೋಳಿವಾಡ ಅವರು ಬುದ್ಧ, ಬಸವರ ಹೆಸರಿನ ಮೇಲೆ ಪ್ರಮಾಣ ವಚನ ಸ್ವೀಕರಿಸಿದರು.

## ಐದು ವರ್ಷ ಸಿದ್ದರಾಮಯ್ಯ ಸಿಎಂ : ಎಂ.ಬಿ. ಪಾಟೀಲ್

ಮೈಸೂರು, ಮೇ 23 - ಸಿದ್ದರಾಮಯ್ಯನವರೇ ಐದು ವರ್ಷಗಳ ಕಾಲ ರಾಜ್ಯದ ಮುಖ್ಯಮಂತ್ರಿಯಾಗಿ ಇರಲಿದ್ದಾರೆ. ಅಧಿಕಾರ ಹಂಚಿಕೆ ಬಗ್ಗೆ ಹೈಕಮಾಂಡ್ ಮಟ್ಟದಲ್ಲಿ ಯಾವುದೇ ಮಾತುಕತೆ ಆಗಿಲ್ಲ ಎಂದು ಸಚಿವ ಎಂ.ಬಿ. ಪಾಟೀಲ್ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಲೋಕಸಭೆ ಚುನಾವಣೆ ಬಳಿಕ ಯಾವುದೇ ಬದಲಾವಣೆ ಇಲ್ಲ. ಮುಖ್ಯಮಂತ್ರಿ ಬದಲಾವಣೆ ಬಗ್ಗೆ ಎಐಸಿಸಿ ಮಟ್ಟದಲ್ಲಿ ಯಾವುದೇ ಚರ್ಚೆ ನಡೆದಿಲ್ಲ ಎಂದರು. ಸಿದ್ದರಾಮಯ್ಯ ಅವರೇ ಮುಂದಿನ ಐದು ವರ್ಷವೂ ಸಿಎಂ ಆಗಿರಲಿದ್ದಾರೆ ಎಂಬುದನ್ನು ಎಐಸಿಸಿ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅವರೇ ಸ್ಪಷ್ಟಪಡಿಸಿದ್ದಾರೆ ಎಂದರು.

# ಸಾಮಾನ್ಯ ವಿದ್ಯಾರ್ಥಿಗಳಿಂದ ಪಿಯುಸಿಯಲ್ಲಿ ಅಸಾಮಾನ್ಯ ಫಲಿತಾಂಶ ಪಡೆಯುವುದು ಸಾಧನೆ

**ಓದುಗರ ಪತ್ರ**

**ಮಾನ್ಯರೇ,**

ರಾಜ್ಯದಲ್ಲಿ ಈಗಾಗಲೇ ಎಸ್ಸೆಸ್ಸೆಲ್ಸಿ ಫಲಿತಾಂಶ ಪ್ರಕಟವಾಗಿದೆ. ಪರಿಣಾಮ ಶಾಲಾ-ಕಾಲೇಜುಗಳ ಆಡಳಿತ ಮಂಡಳಿಯವರು, ತಮ್ಮ ವಿದ್ಯಾರ್ಥಿಗಳು ಸಾಧನೆ ಮಾಡಿರುವ ಕುರಿತು, ಬಣ್ಣ ಬಣ್ಣದ ಜಾಹೀರಾತುಗಳು, ದಿನಂಪ್ರತಿ ದಿನ ಪತ್ರಿಕೆಯಲ್ಲಿ ರಾರಾಜಿಸುತ್ತಿವೆ. ಎಸ್ಸೆಸ್ಸೆಲ್ಸಿ ನಂತರ ಪೋಷಕರಿಗೂ ಕೂಡ ತಮ್ಮ ಮಕ್ಕಳನ್ನು ಒಳ್ಳೆಯ ಪ್ರತಿಷ್ಠಿತ ಕಾಲೇಜಿಗೆ ಸೇರಿಸಬೇಕೆಂಬ ಬಯಕೆ.

ಉತ್ತಮವಾಗಿ ಅಂಕಗಳನ್ನು ಪಡೆದವರೇನೋ, ಒಳ್ಳೆಯ ಪ್ರತಿಷ್ಠಿತ ಕಾಲೇಜಿನಲ್ಲಿ ಸುಲಭವಾಗಿ ಸೀಟು ದಕ್ಕಿಸಿಕೊಳ್ಳುತ್ತಾರೆ. ಆದರೆ ಶೇಕಡ 50, ಅದಕ್ಕಿಂತ ಕಡಿಮೆ ಫಲಿತಾಂಶ ಬಂದಿರುವ ವಿದ್ಯಾರ್ಥಿಗಳಿಗೆ ಕೆಲ ಪ್ರತಿಷ್ಠಿತ ಕಾಲೇಜುಗಳಲ್ಲಿ ಸೀಟು ಸಿಗುವುದು ಬಹುತೇಕ ಅನುಮಾನ. ಯಾಕೆಂದರೆ ಕಡಿಮೆ ಅಂಕಗಳು ಎನ್ನುವ ಕಾರಣಕ್ಕೆ ತಿರಸ್ಕರಿಸುತ್ತಾರೆ. ಮುಂದೆಯೂ ಅಂತಹವರಿಂದ ಫಲಿತಾಂಶಕ್ಕೆ ಧಕ್ಕೆಯಾಗುತ್ತದೆ.

ಕಾಲೇಜಿನ ಫಲಿತಾಂಶ ಕುಸಿಯುತ್ತದೆ ಎನ್ನುವ ಕಾರಣಕ್ಕೆ, ಹಾಗಾದರೆ ಪ್ರತಿಷ್ಠಿತ ಕಾಲೇಜುಗಳಿಗೆ ಪ್ರವೇಶ ಪಡೆಯಲು ಕೇವಲ ಅಂಕಗಳೇ ಮಾನದಂಡವಾ? ಅವರ ಪ್ರತಿಭೆಗೆ ಬೆಲೆ ಇಲ್ಲವೇ? ಕಾಲೇಜು ಆಡಳಿತ ಮಂಡಳಿಗಳು ಒಂದು ಯೋಚಿಸಬೇಕು. ಎಸ್ಸೆಸ್ಸೆಲ್ಸಿಯಲ್ಲಿ ಶೇ. 90, 100 ಅಂಕಗಳನ್ನು ತೆಗೆದಿರುವ ವಿದ್ಯಾರ್ಥಿಗಳನ್ನು ಸೇರಿಸಿಕೊಂಡು ದ್ವಿತೀಯ ಪಿಯುಸಿಯಲ್ಲಿ, ಅವರಿಂದ ಅಷ್ಟೇ ಫಲಿತಾಂಶ ತೆಗೆಸುವುದು ದೊಡ್ಡದೇನಲ್ಲ. ಕನಿಷ್ಠ 40,50 ಅಂಕಗಳನ್ನು ಗಳಿಸಿರುವ ವಿದ್ಯಾರ್ಥಿಗಳನ್ನು ಕಾಲೇಜಿಗೆ ಸೇರಿಸಿಕೊಂಡು ಅಂತಹವರಿಂದ 90-100 ಅಂಕಗಳನ್ನು ತೆಗೆಸಬೇಕು ಅದು ನಿಜವಾದ ಸಾಧನೆ. ವಿದ್ಯಾರ್ಥಿಗಳನ್ನು ಕೇವಲ ಅಂಕಗಳ ಮೇಲೆಯೇ ಅಳೆಯಬಾರದು.

8ನೇ ತರಗತಿ ಓದಿರುವ ಸಚಿನ್ ತೆಂಡೂಲ್ಕರ್ ವಿಶ್ವ ಕ್ರಿಕೆಟ್‌ನಲ್ಲಿಯೇ ಅಮೋಘ ಸಾಧನೆ ಮಾಡಿದ್ದಾರೆ. ಇದೊಂದು ಕೇವಲ ಉದಾಹರಣೆಯಷ್ಟೇ. ಇಂತಹ ಹಲವಾರು ಪ್ರತಿಭೆಗಳು ಕಡಿಮೆ ಓದಿ, ದೊಡ್ಡ ಸಾಧನೆ ಮಾಡಿದ್ದಾರೆ. ಅಂಕಗಳು ಕೇವಲ ಮಾನದಂಡವಷ್ಟೇ. ಪ್ರತಿಷ್ಠಿತ ಕಾಲೇಜು ಆಡಳಿತ ಮಂಡಳಿಯವರು, ಕಡಿಮೆ ಅಂಕ ಗಳಿಸಿದವರಿಗೂ ಕೂಡ ಸೀಟು ಕೊಟ್ಟು ಅಂತಹವರಿಂದ ಉನ್ನತ ಸಾಧನೆ ಮಾಡಿಸುವ ಮೂಲಕ ಹೃದಯ ವೈಶಾಲ್ಯ ಮೆರೆಯಲಿ.

**- ಮುರುಗೇಶ ಡಿ., ದಾವಣಗೆರೆ.**

# ಶಿಕ್ಷಣ ವ್ಯಕ್ತಿತ್ವ ರೂಪಿಸುತ್ತದೆ



**ಶೋಷಿತ ವರ್ಗಗಳ ಒಕ್ಕೂಟದ ಜಿಲ್ಲಾಧ್ಯಕ್ಷ ಬಾಡದ ಆನಂದರಾಜು**

ದಾವಣಗೆರೆ, ಮೇ 23- ಶಿಕ್ಷಣವು ವ್ಯಕ್ತಿತ್ವವನ್ನು ರೂಪಿಸುತ್ತದೆ, ಮನಸ್ಸನ್ನು ಬಲಪಡಿಸುತ್ತದೆ, ಜ್ಞಾನ ಹೆಚ್ಚಿಸುತ್ತದೆ ಮತ್ತು ನಮ್ಮನ್ನು ಸ್ವತಂತ್ರಗೊಳಿಸುತ್ತದೆ. ಶಿಕ್ಷಣವು ಅಜ್ಞಾನವನ್ನು ಹೋಗಲಾಡಿಸುತ್ತದೆ. ಶಿಕ್ಷಣವು ನಮ್ಮೆಲ್ಲರ ಉಜ್ವಲ ಭವಿಷ್ಯಕ್ಕಾಗಿ ಅತ್ಯಗತ್ಯ ಸಾಧನವಾಗಿದೆ. ಶಿಕ್ಷಣದ ಸಾಧನವನ್ನು ಬಳಸಿಕೊಂಡು ನಾವು ಜೀವನದಲ್ಲಿ ಏನಾದರೂ ಒಳ್ಳೆಯದನ್ನು ಸಾಧಿಸಬಹುದು ಎಂದು ಶೋಷಿತ ವರ್ಗಗಳ ಒಕ್ಕೂಟದ ಜಿಲ್ಲಾಧ್ಯಕ್ಷ ಬಾಡದ ಆನಂದರಾಜು ತಿಳಿಸಿದರು.

ಎಸ್ಸೆಸ್ಸೆಲ್ಸಿಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ಚೇತನಾ ಗ್ಲೋಬಲ್ ಶಾಲೆಯ ವಿದ್ಯಾರ್ಥಿ ಕು.ಚಾಣುಕ್ಯ ರವರನ್ನು ಅಭಿನಂದಿಸಿ ಮಾತನಾಡಿದರು.

ಶಿಕ್ಷಣವು ಸಮಾಜದಲ್ಲಿ ಆಗುತ್ತಿರುವ ಅನ್ಯಾಯದ ವಿರುದ್ಧ ಹೋರಾಡುವ ಸಾಮರ್ಥ್ಯವನ್ನು ಹೊರತರುತ್ತದೆ. ಪ್ರತಿಯೊಬ್ಬ ವ್ಯಕ್ತಿಗೂ ಶಿಕ್ಷಣ ಪಡೆಯುವ ಹಕ್ಕಿದೆ. ಹೀಗಾಗಿ ಎಲ್ಲಾ ಪೋಷಕರು ಸಹ ಮಕ್ಕಳನ್ನೇ ಆಸ್ತಿ ಮಾಡಬೇಕು ಎಂದು ಆನಂದರಾಜು ಸಲಹೆ ನೀಡಿದರು. ಎಸ್ಸೆಸ್ಸೆಲ್ಸಿಯಲ್ಲಿ ಶೇ. 97 ರಷ್ಟು ಅಂಕ ಪಡೆದ ಮತ್ತಿ ನಾಗರಾಜ್ ಹಾಗೂ ಶ್ರೀಮತಿ ವೀರವೇಣಿ ದಂಪತಿ ಪುತ್ರ ಚಾಣಕ್ಯನನ್ನು ಸನ್ಮಾನಿಸಿ ಗೌರವಿಸಲಾಯಿತು.

ಇದೇ ಸಂದರ್ಭದಲ್ಲಿ ಮೋನಿಕಾ ಗಿಫ್ಟ್ ಸೆಂಟರ್‌ನ ಮಾಲೀಕರಾದ ಅನಿಲ್‌ಕುಮಾರ್ ಮುಂಡಾಸ್, ನಗರ ಪಾಲಿಕೆ ಮಾಜಿ ಸದಸ್ಯ ಶಿವನಗೌಡ ಪಾಟೀಲ್, ಬಿಜೆಪಿ ಹಿರಿಯ ಮುಖಂಡರಾದ ಜಿ.ಕೃಷ್ಣಪ್ಪ, ಟಿಂಕರ್ ಮಂಜಣ್ಣ, ಎಸ್. ನಾಗರಾಜ್ ಇನ್ನು ಮುಂತಾದರಿದ್ದರು.

# ಮಳೆ ಹಾನಿ : ದೂರು ಸಲ್ಲಿಸಲು ಸಂಪರ್ಕಿಸಿ

ದಾವಣಗೆರೆ, ಮೇ 23- ಪಾಲಿಕೆ ವ್ಯಾಪ್ತಿಯಲ್ಲಿ ಮಳೆಹಾನಿಗೆ ಸಂಬಂಧಿಸಿದಂತೆ ತುರ್ತು ಸ್ಪಂದನೆಗಾಗಿ ಸಾರ್ವಜನಿಕರು ದೂರು ಸಲ್ಲಿಸಲು ನಗರ ಪಾಲಿಕೆಯ 24x7 ನಿಯಂತ್ರಣ ಕೊಠಡಿ ಸ್ಥಿರ ದೂರವಾಣಿ ಸಂಖ್ಯೆ 08192-234444 ಹಾಗೂ ಮೊಬೈಲ್ ಸಂಖ್ಯೆ 82772 34444ಗೆ ದಿನದ ಯಾವುದೇ ಸಮಯದಲ್ಲೂ ಸಂಪರ್ಕಿಸಬಹುದು ಅಥವಾ ಪರಿಹಾರ ವಾಟ್ಸಾಪ್ ಸಂಖ್ಯೆ 82772 34444ಗೆ ಸಂದೇಶ ಕಳುಹಿಸಬಹುದೆಂದು ಪಾಲಿಕೆ ಆಯುಕ್ತರು ತಿಳಿಸಿದ್ದಾರೆ.

## ಕೊಂಡಜ್ಜಿ : ಪಿಯುಸಿ ಪ್ರವೇಶಕ್ಕೆ ಅರ್ಜಿ ಆಹ್ವಾನ

ಹರಿಹರ, ಮೇ 23- ಹರಿಹರ ತಾಲ್ಲೂಕು ಕೊಂಡಜ್ಜಿ ಗ್ರಾಮದ ಎ.ಪಿ.ಜೆ ಅಬ್ದುಲ್ ಕಲಾಂ ಪದವಿ ಪೂರ್ವ ವಸತಿ ಕಾಲೇಜಿನಲ್ಲಿ ಸಿ.ಬಿ.ಎಸ್.ಇ ಪಠ್ಯಕ್ರಮದ ಪಿ.ಸಿ.ಎಂ.ಬಿ ವಿಷಯಗಳನ್ನು ವ್ಯಾಸಂಗ ಮಾಡಲು 2023-24ನೇ ಸಾಲಿನ ಪ್ರಥಮ ಪಿ.ಯು.ಸಿ ಪ್ರವೇಶಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ದಾಖಲಾತಿ ಪಡೆಯಲು ಅಲ್ಪಸಂಖ್ಯಾತ ವರ್ಗದ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಸಿಖ್, ಬೌದ್ಧ, ಪಾರ್ಸಿ ವಿದ್ಯಾರ್ಥಿಗಳಿಗೆ ಶೇ.75 ರಷ್ಟು ಮತ್ತು ಪರಿಶಿಷ್ಠ ಜಾತಿ, ಪರಿಶಿಷ್ಟ ಪಂಗಡ, ಇತರೆ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಶೇ.25ರಷ್ಟು ಪ್ರವೇಶ ಲಭ್ಯವಿದೆ. ಆಸಕ್ತ ಹಾಗೂ ಅರ್ಹ ಅಭ್ಯರ್ಥಿಗಳು ಇದೇ ದಿನಾಂಕ 25 ರೊಳಗಾಗಿ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಮೊ : 9008815296 ಸಂಪರ್ಕಿಸಲು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ತಿಳಿಸಿದ್ದಾರೆ.

Srishyla Educational Trust (R.)
GM INSTITUTE OF TECHNOLOGY
P. B. Road, Davanagere -577 006

ಬೇಕಾಗಿದ್ದಾರೆ

ಈ ಕೆಳಕಂಡ ಹುದ್ದೆಗಳಿಗೆ ನುರಿತ, ಸೂಕ್ತ ತರಬೇತಿ ಹೊಂದಿದ ಅನುಭವಿ ಅಭ್ಯರ್ಥಿಗಳು ಬೇಕಾಗಿದ್ದಾರೆ.

| Name of the Post | No. of Posts | Qualification and Experience |
|---|---|---|
| Sr./Jr. Accounts Executive | 04 | M. Com. / B. Com. with 2+ Years Experience |
| Residential Engineer | 02 | B.E. / Diploma in Electrical Engg with 2+ Years Experience |
| Residential Manager | 02 | Graduate / Post Graduate with 5+ Years Experience in Hostel Supervising |
| ಕಾರ್ / ಬಸ್ ಡ್ರೈವರ್ | 08 | ಕನಿಷ್ಠ 5 ವರ್ಷಗಳ ಅನುಭವ ಇರುವ (LMV & HMV) ಲೈಸೆನ್ಸ್ ಹೊಂದಿರುವವರು ಬೇಕಾಗಿದ್ದಾರೆ |
| ಪ್ಲಂಬರ್ | 03 | ಕನಿಷ್ಠ 3 ವರ್ಷಗಳ ಅನುಭವ ಇರುವ ಪ್ಲಂಬರ್‌ಗಳು ಬೇಕಾಗಿದ್ದಾರೆ |
| ಕಾರ್ಪೆಂಟರ್ | 03 | ಕನಿಷ್ಠ 3 ವರ್ಷಗಳ ಅನುಭವ ಇರುವ ಕಾರ್‌ಪೆಂಟರ್ ಬೇಕಾಗಿದ್ದಾರೆ |
| ಅಟೆಂಡರ್ / ಹೆಲ್ಪರ್ | 03 | SSLC / PUC |
| ಎಸ್. ಟಿ. ಪಿ. ಆಪರೇಟರ್ [Sewage Treatment Plant] | 02 | ITI with 2+ years Experience |

Send your Resume to career@gmit.ac.in
Ph: 8618785510

## ಕಾಂಗ್ರೆಸ್ ಸರ್ಕಾರ 5 ವರ್ಷ ಪೂರ್ಣಗೊಳಿಸಲಿದೆ : ಕೋಡಿ ಶ್ರೀ



ಬೆಂಗಳೂರು, ಮೇ 23- ರಾಜ್ಯದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ನೇತೃತ್ವದಲ್ಲಿ ಅಸ್ತಿತ್ವಕ್ಕೆ ಬಂದಿರುವ ಕಾಂಗ್ರೆಸ್ ಸರ್ಕಾರ ಜನತೆಯ ಭಾವನೆಗಳಿಗೆ ಪೂರಕವಾಗಿ ಸ್ಪಂದಿಸಿ ಕೆಲಸ ಮಾಡುವ ಮೂಲಕ ಜನಾದೇಶದ ತೀರ್ಪಿಗೆ ಅನುಗುಣವಾಗಿ ಐದು ವರ್ಷಗಳನ್ನು ಸಂಪೂರ್ಣಗೊಳಿಸಲಿದೆ ಎಂದು ಅರಸೀಕೆರೆಯ ಹಾರನಹಳ್ಳಿ ಕೋಡಿಮಠದ ಪೀಠಾಧಿಪತಿಗಳಾದ ಶ್ರೀ ಡಾ. ಸದಾಶಿವ ಶಿವಯೋಗಿ ರಾಜೇಂದ್ರ ಮಹಾಸ್ವಾಮೀಜಿ ಭವಿಷ್ಯ ನುಡಿದರು.

ಕೆ.ಆರ್. ನಗರ ಪಟ್ಟಣದಲ್ಲಿ ನಡೆದ ಖಾಸಗಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಉಪಮುಖ್ಯಮಂತ್ರಿಗಳಾಗಿ ಅಧಿಕಾರ ಸ್ವೀಕರಿಸಿರುವ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರಿಗೂ ಮುಖ್ಯಮಂತ್ರಿಯಾಗುವ ಯೋಗವಿದೆ ಎಂದು ತಿಳಿಸಿದರು.

ರಾಜ್ಯದಲ್ಲಿ ಕಾಂಗ್ರೆಸ್ ಬಹುಮತ ಪಡೆಯಲು ಡಿಕೆಶಿ ಕೊಡುಗೆಯೂ ಇದೆ. ಮಂತ್ರಿ ಮಂಡಲ ವಿಸ್ತರಣೆಯಲ್ಲಿ ಗುಂಪುಗಾರಿಕೆಗೆ ಅವಕಾಶ ಮಾಡಿಕೊಡದೇ ಪ್ರಾದೇಶಿಕವಾರು, ಜಿಲ್ಲಾವಾರು ಸೂಕ್ತ ಪ್ರಾತಿನಿಧ್ಯ ನೀಡಿ ಸಂಪುಟ ವಿಸ್ತರಣೆ ಮಾಡಬೇಕು ಎಂದು ಸಲಹೆ ನೀಡಿದರು.

ಅರಸೀಕೆರೆಗೆ ಪ್ರಚಾರಕ್ಕೆ ಆಗಮಿಸಿದ್ದ ಸಿದ್ದರಾಮಯ್ಯ ಅವರಿಗೆ ನಿಮಗೆ ಮತ್ತೊಮ್ಮೆ ಮುಖ್ಯಮಂತ್ರಿಯಾಗುವ ಯೋಗವಿದೆ ಎಂದು ಹೇಳಿದ್ದೆ. ಅದು ನಿಜವಾಗಿದೆಯಲ್ಲದೇ ಕಾಂಗ್ರೆಸ್ ದೊಡ್ಡ ಪಕ್ಷವಾಗಿ ಯಾರದೇ ಹಂಗಿಲ್ಲದೇ ಸ್ವತಂತ್ರವಾಗಿ ಅಧಿಕಾರ ಹಿಡಿಯಲಿದೆ ಎಂದು ನುಡಿದಿದ್ದೆ ಎಂದು ತಿಳಿಸಿದರು. ಸದ್ಯಕ್ಕೆ ರಾಜ್ಯ ಸರ್ಕಾರಕ್ಕೆ ಯಾವುದೇ ಕಂಟಕವಿಲ್ಲ. ಲೋಕಸಭಾ ಚುನಾವಣೆ ನಂತರ ಸಣ್ಣ ಕಂಟಕ ಉಂಟಾಗಲಿದೆ. ಅದನ್ನು ಮುಂದಿನ ದಿನಗಳಲ್ಲಿ ತಿಳಿಸುತ್ತೇನೆ ಎಂದು ಪತ್ರಕರ್ತರಿಗೆ ಕೋಡಿ ಶ್ರೀಗಳು ಮಾರ್ಮಿಕವಾಗಿ ನುಡಿದರು.

## ಮಳೆ ಹಾನಿ : ದೂರು ಸಲ್ಲಿಕೆಗೆ ಸಂಪರ್ಕ

ದಾವಣಗೆರೆ, ಮೇ 23- ಪಾಲಿಕೆ ವ್ಯಾಪ್ತಿಯಲ್ಲಿ ಮಳೆಹಾನಿಗೆ ಸಂಬಂಧಿಸಿ ದಂತೆ ಸಾರ್ವಜನಿಕರು ದೂರು ಸಲ್ಲಿಸಲು ಪಾಲಿಕೆಯ 24x7 ನಿಯಂತ್ರಣ ಕೊಠಡಿ ದೂರ ವಾಣಿ 08192-234444 ಹಾಗೂ ಮೊಬೈಲ್ 82772 34444ಗೆ, ವಾಟ್ಸಾಪ್ 82772 34444ಗೆ ಕರೆ ಮಾಡಬಹುದೆಂದು ಪಾಲಿಕೆ ಆಯುಕ್ತರು ತಿಳಿಸಿದ್ದಾರೆ.

## ಅಭಿನಂದನೆಗಳು



ದಾವಣಗೆರೆ ಆಂಜನೇಯ ಬಡಾವಣೆಯ ಶ್ರೀ ಸದಾನಂದ ಪಾಟೀಲ್ ಮತ್ತು ಶ್ರೀಮತಿ ಮಧುರ ಪಾಟೀಲ್ ದಂಪತಿ ಪುತ್ರ

**ಶರತ್ ಪಾಟೀಲ್**

ಇವರು, ಅಮೇರಿಕಾದ ಉಮಾಸ್ ಲೋವೆಲ್ ವಿಶ್ವ ವಿದ್ಯಾಲಯದ ಪ್ರೊ. ಮಾರ್ಟಿನ್ ಮಾರ್ಗಲ್ ಇವರ ಮಾರ್ಗದರ್ಶನದಲ್ಲಿ Differentiation based peak Detection for fast and Compact LIDAR Systems ಎಂಬ ವಿಷಯದಲ್ಲಿ ಅಮೇರಿಕಾದ ಮೆಸಾಚ್ಯೂಸೆಟ್ಸ್‌ನ LOWEL University ಯಿಂದ **ಪಿ.ಎಚ್.ಡಿ** ಪದವಿ ಪಡೆದಿರುತ್ತಾರೆ.

ಅಭಿನಂದಿಸುವವರು

- ಶ್ರೀ ಡಾ|| ಅಶೋಕ್, ಶ್ರೀಮತಿ ಡಾ. ಅನುರೂಪ, ಪುತ್ರ : ಅನುರಾಗ್ ಜೆಜೆಎಂಸಿ, ಡಿವಿಜಿ.
- ಶ್ರೀ ಸಂದೇಶ್ ಪಾಟೀಲ್, ಶ್ರೀಮತಿ ರುಚಿ ಪಾಟೀಲ್ ಮಕ್ಕಳಾದ : ನಿಷ್ಕ, ಮೃನಾಂಕ್
- ಶ್ರೀ ಮಲ್ಲಿಕಾರ್ಜುನ, ಶ್ರೀಮತಿ ಜಯಮಂಗಳ, ಭದ್ರಾವತಿ
- ಶ್ರೀಮತಿ ಬಿ.ಎಂ. ಶ್ವೇತ ಶರತ್ ಪಾಟೀಲ ಮಕ್ಕಳಾದ : ಶ್ರಾವ್ಯ, ಶೌರ್ಯ USA
- ಶ್ರೀ ಅರುಣ್ ಬಿ.ಎಂ., ಶ್ರೀಮತಿ ಸುಪ್ರೀತ ಪಾಟೀಲ್ ಮಕ್ಕಳಾದ ಅಕ್ಷರ, ಶ್ಲೋಕ್ ಭದ್ರಾವತಿ
- ಪಾಟೀಲ್ ಟ್ರೇಡರ್ಸ್, ಅಕ್ಕಮಹಾದೇವಿ ಬಾಲಿಕಾ ಪ್ರೌಢಶಾಲೆ ಕಟ್ಟಡ
- ಶ್ರೀ ನೀಲಕಂಠಪ್ಪ, ಶ್ರೀಮತಿ ಗಿರಿಜಮ್ಮ • ಶ್ರೀ ಕೊಟ್ರೇಶ್ ಕೆ.ಎನ್, ಶ್ರೀಮತಿ ಜ್ಯೋತಿ
- ಶ್ರೀ ಮಹಾಂತೇಶ್ ಕೆ.ಎನ್., ಶ್ರೀಮತಿ ಕವಿತ ಹಾಗೂ ರಾಂಪುರ ಮತ್ತು ಪಾಟೀಲ್ ಬಂಧುಗಳು - ಮಿತ್ರರು.

## ಶುಭಾಶಯಗಳು



**MEHATAB SHAIKH.H**

ಇವರು 2022-23ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ 596 (95.36) ಅಂಕ ಪಡೆದು ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾದ ಪ್ರಯುಕ್ತ

-: ಶುಭಕೋರುವವರು :-

ಅಜ್ಜಿ: ಅಬೀದಾಬೇಗಂ,
ತಂದೆ: ಹೆಚ್.ಹುಸೇನ್ ಪೀರ್,
ತಾಯಿ: ನರ್ಗೀಸ್ ಮೊಘಲಾನಿ, ಸಹೋದರ: ಅಬ್ದುಲ್ ಕಲಾಂ ಆಜಾದ್.ಹೆಚ್,
ಮಾವಂದಿರು, ಚಿಕ್ಕಪ್ಪಂದಿರು ಹಾಗೂ ಬಂಧು-ಮಿತ್ರರು.


## ಬೇಕಾಗಿದ್ದಾರೆ

ನಮ್ಮ ಶೋ ರೂಂನಲ್ಲಿ ಸೇಲ್ಸ್ ಮಾಡಲು ಅನುಭವವುಳ್ಳ ಸೇಲ್ ಬಾಯ್ಸ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ.
ಸೂಕ್ತ ಪರಿಚಯದೊಂದಿಗೆ ಸಂಪರ್ಕಿಸಿ

**ಶಾಂತಲಾ** ದಿ ವೆಡ್ಡಿಂಗ್ ಮಾಲ್....
ಚಾಮರಾಜ ಪೇಟೆ, ದಾವಣಗೆರೆ.
9686195327








## ಕೈಮಗ್ಗ ನೇಕಾರರಿಂದ ಪ್ರಶಸ್ತಿಗಾಗಿ ಅರ್ಜಿ

ದಾವಣಗೆರೆ, ಮೇ 23- ಕೈಮಗ್ಗ ನೇಕಾರರ ಕೌಶಲ್ಯಗಳನ್ನು ಗುರುತಿಸಿ, ಕೈಮಗ್ಗ ಉತ್ಪನ್ನಗಳನ್ನು ಪ್ರೋತ್ಸಾಹಿಸಲು ಹಾಗೂ ಬೆಂಬಲ ನೀಡಲು ರೇಷ್ಮೆ, ಹತ್ತಿ ಮತ್ತು ಉಣ್ಣೆ ಕ್ಷೇತ್ರ, ವಲಯದ ಕೈಮಗ್ಗ ನೇಕಾರರಿಗೆ ರಾಜ್ಯ ಮಟ್ಟದ ಪ್ರಶಸ್ತಿಗೆ ಅರ್ಜಿ ಆಹ್ವಾನಿಸಲಾಗಿದೆ.

ಅರ್ಹ ನೇಕಾರರು ಮೇ 30 ರೊಳಗಾಗಿ ನಗರದ ಕೈಮಗ್ಗ ಮತ್ತು ಜವಳಿ ಇಲಾಖೆ ಉಪ ನಿರ್ದೇಶಕರ ಕಛೇರಿ, ರಾಮಾಂಜನೇಯ ಪ್ಲಾಜಾ, ನಿಟ್ಟುವಳ್ಳಿ ಇಲ್ಲಿಗೆ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಕಚೇರಿ ಅಥವಾ ದೂರವಾಣಿಗೆ ಕೈಮಗ್ಗ ಮತ್ತು ಜವಳಿ ಇಲಾಖೆ, ಉಪ ನಿರ್ದೇಶಕರ ಕಚೇರಿ ಹಾಗೂ ದೂ:08192-262362ಗೆ ಕೋರಲಾಗಿದೆ.


## ಸ್ಪರ್ಶ್ ಸೂಪರ್ ಸ್ಪೆಷಾಲಿಟಿ ಕ್ಲಿನಿಕ್

ಲಿವರ್ ಮತ್ತು ಪ್ಯಾಂಕ್ರಿಯಾಸ್ ಕ್ಲಿನಿಕ್
ಸ್ಪರ್ಶ್ ಆಸ್ಪತ್ರೆ – ಬೆಂಗಳೂರು
ಸಮಾಲೋಚನೆಗಾಗಿ ದಾವಣಗೆರೆಗೆ ಭೇಟಿ ನೀಡಲಿದ್ದಾರೆ

**ಉಚಿತ ತಪಾಸಣಾ ಶಿಬಿರ**

**ಡಾ. ಗೌತಮ್ ಕುಮಾರ್**
MBBS, MS - General Surgery
Fellowship in HPB & Multi Organ Transplant (ASTS) USA
**Consultant-HPB & Liver Transplant Services**

ಜಾಂಡೀಸ್ | ಫ್ಯಾಟಿ ಲಿವರ್ | ಒಬೆಸಿಟಿ | ಹೆಪಟೈಟಿಸ್ ಬಿ | ಹೆಪಟೈಟಿಸ್ ಸಿ | ಆಲ್ಕೋಹಾಲ್ ರಿಲೇಟೆಡ್ ಲಿವರ್ ಡಿಸೀಸ್ | ಅಸಿಟ್ಸ್ | ಬ್ಲಡ್ ವೊಮಿಟಿಂಗ್ | ಲಿವರ್ ಸ್ವೆಲ್ಲಿಂಗ್ | ಫ್ಯಾಮಿಲಿ ಹಿಸ್ಟರಿ ಆ ಲಿವರ್ ಡಿಸೀಸ್ | ಹೊಟ್ಟೆಯಲ್ಲಿ ನೀರು | ಬೆಲ್ಲಿ (ಆಸ್ಸಿಟ್ಸ್) | ಕಾಲುಗಳಲ್ಲಿ ಊತ | ಲಿವರ್ ಸಮಸ್ಯೆಯಿಂದ ಕೋಮಾ | ಲಿವರ್ ಕ್ಯಾನ್ಸರ್ | ಪ್ಯಾಂಕ್ರಿಯಾಸ್ ಕ್ಯಾನ್ಸರ್ | ಪ್ಯಾಂಕ್ರಿಯಾಟೈಟಿಸ್ | ಪ್ಯಾಂಕ್ರಿಯಾಸ್ ಸ್ಟೋನ್

ನೋಂದಣಿಗಾಗಿ ಕರೆಮಾಡಿ: **96869 29090 / 99800 33277**

ದಿನಾಂಕ: ಶುಕ್ರವಾರ, 26ನೇ ಮೇ 2023 | ಸಮಯ: ಬೆಳಿಗ್ಗೆ 11:00 ರಿಂದ ಸಂಜೆ 5:00 ರವರೆಗೆ

ಸ್ಥಳ: ಹೊರ ರೋಗಿಗಳ ಕ್ಲಿನಿಕ್, ಎಸ್.ಎಸ್. ಸ್ಪೆಷಾಲಿಟಿ ಕ್ಲಿನಿಕ್, ಮೋದಿ ಕಾಂಪೌಂಡ್, ಎಂ.ಸಿ.ಸಿ. 'ಎ' ಬ್ಲಾಕ್, ಮೋತಿವೀರಪ್ಪ ಕಾಲೇಜು ಹತ್ತಿರ, ದಾವಣಗೆರೆ – 577 002


## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 22.05.2023ರ ಸೋಮವಾರ ರಾತ್ರಿ 8.00 ಗಂಟೆ ಸುಮಾರಿಗೆ ಜಗಳೂರು ಸಮೀಪ ಸಂಭವಿಸಿದ ರಸ್ತೆ ಅಪಘಾತದಲ್ಲಿ ಅಕಾಲಿಕವಾಗಿ ನಿಧನರಾದ ದಾವಣಗೆರೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಜಗಳೂರು ಶಾಖೆಯ ಕ್ಷೇತ್ರಾಧಿಕಾರಿ ಹಾಗೂ ಬ್ಯಾಂಕಿನ ನೌಕರರ ಒಕ್ಕೂಟದ ಅಧ್ಯಕ್ಷರೂ ಆದ

**ಶ್ರೀ ಹೆಚ್.ಆರ್. ಹಾಲಸ್ವಾಮಿ**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸುತ್ತಾ, ಅವರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬದವರಿಗೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಆಡಳಿತ ಮಂಡಳಿ ಸದಸ್ಯರು
**ದಾವಣಗೆರೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ., ದಾವಣಗೆರೆ.**

ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಆಡಳಿತ ಮಂಡಳಿ ಸದಸ್ಯರು
**ದಾವಣಗೆರೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ನೌಕರರ ಒಕ್ಕೂಟ (ರಿ.) ದಾವಣಗೆರೆ.**

ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಆಡಳಿತ ಮಂಡಳಿ ಸದಸ್ಯರು
**ದಾವಣಗೆರೆ ಜಿಲ್ಲಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ನೌಕರರ ವರ್ಗ, ದಾವಣಗೆರೆ.**

|| ಶ್ರೀ ಬೀರಲಿಂಗೇಶ್ವರ ಪ್ರಸನ್ನ || || ಶ್ರೀ ಹೊನ್ನಮ್ಮದೇವಿ ಕೃಪ ||

## ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ



ದಾವಣಗೆರೆ ಸಿಟಿ ವಿನೋಬನಗರ ವಾಸಿ
ಜೋಗಪ್ಪನವರ ಶ್ರೀಮತಿ ಲಕ್ಷ್ಮೀದೇವಮ್ಮ ದಿ. ಜೆ. ಸಿದ್ದಪ್ಪ ಮತ್ತು ಮಕ್ಕಳು
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 12.5.2023ನೇ ಶುಕ್ರವಾರ ಬೆಳಿಗ್ಗೆ 5.00ಕ್ಕೆ ನನ್ನ ಮಗನಾದ

**ಶ್ರೀ ಜೆ.ಎಸ್. ಹೊನ್ನಪ್ಪ**

ಇವರು ಶಿವೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**ಕೈಲಾಸ ಸಮಾರಾಧನೆಯನ್ನು** ದಿನಾಂಕ 24.5.2023ನೇ ಬುಧವಾರ ಬೆಳಿಗ್ಗೆ 11ಕ್ಕೆ ಮೃತರ ಸ್ವಗೃಹ 'ಸಮೃದ್ಧಿ ನಿಲಯ' 4ನೇ ಮುಖ್ಯ ರಸ್ತೆ, 2ನೇ ಅಡ್ಡ ರಸ್ತೆ, ವಿನೋಬ ನಗರ, ದಾವಣಗೆರೆ ಇಲ್ಲಿ ನೆರವೇರಿಸಲು ಗುರು ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳ ಸಕಾಲಕ್ಕೆ ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ದುಃಖತಪ್ತರು :

ಜೋಗಪ್ಪನವರ ಶ್ರೀಮತಿ ಲಕ್ಷ್ಮೀದೇವಮ್ಮ ದಿ. ಶ್ರೀ ಜೆ. ಸಿದ್ದಪ್ಪ ಮತ್ತು ಮಕ್ಕಳು,
ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು,
ಮೃತರ ಧರ್ಮಪತ್ನಿ: ಶ್ರೀಮತಿ ಇಂದ್ರಮ್ಮ ಮತ್ತು ಮಕ್ಕಳು, ಅಳಿಯಂದಿರು,
ಜೋಗಪ್ಪನವರ ವಂಶಸ್ಥರು ಮತ್ತು ಅಡಾಣಿ ವಂಶಸ್ಥರು ಹಾಗೂ ಬಂಧು-ಮಿತ್ರರು,
ದಾವಣಗೆರೆ. ಮೊ : 90604 96253, 78925 20225

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.